1458

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ - ೩.

ಶ್ರೀ ಘನಮಠ ಶಿವಯೋಗಿಗಳ

ಭಕ್ತಿಸುಧಾಸಾರ

Δ25(NR)
33H5D

ಪ್ರಕಾಶಕರು :
ಶ್ರೀ ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು,
ಮುರುಘಾಮಠ, ಧಾರವಾಡ.

B.60

△25(NR) 503
33H5D
Dhanmath Shivayogi
Bhaktisudhasara

Δ25(NR)
50ह.
33H5D

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ೩.

ಶ್ರೀ ಘನಮಠ ಶಿವಯೋಗಿ ವಿರಚಿತ

ಭಕ್ತಿಸುಧಾಸಾರ

ಪ್ರಕಾಶಕರು :

ಶ್ರೀ ಮ. ನಿ. ಪ್ರ. ಮೃತ್ಯುಂಜಯಸ್ವಾಮಿಗಳು ಮುರುಘಾಮಠ

ಸ್ಥಾಪಕರು ಮತ್ತು ಸಂಚಾಲಕರು :

ಶ್ರೀ ಮ. ನಿ. ಜ. ಮುರುಘರಾಜೇಂದ್ರ ಪ್ರಸಾದನಿಲಯ,

ಹಾವೇರಿ ಪೇಟೆ, ಧಾರವಾಡ.

ಸಂಪಾದಕರು :

ಪ್ರೊಫೆಸರ ಸಂ. ಶಿ. ಭೂಸನೂರಮಠ, ಎಂ. ಎ.

ಲಿಂಗರಾಜ ಕಾಲೇಜ, ಬೆಳಗಾವಿ.

೧೮೬೬ ತಾರಣ ಸಂ. ಮಾಘ ಶು. ೪

ತಾ. ೧೭-೧-೪೫. ಬೆಲೆ ೧-೮-೦

Karnatak Sahitya Mandira.
DHARWAR.

ಪ್ರಕಾಶಕರು:
ಶ್ರೀ. ಮ. ನಿ. ಪ್ರ. ಮೃತ್ಯುಂಜಯಸ್ವಾಮಿಗಳು,
ಶ್ರೀ ಮುರುಘಾಮಠ, ಹಾವೇರಿ ಪೇಟೆ,
ಧಾರವಾಡ.

Δ25(NR)
33H5D

ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನದಲ್ಲಿವೆ.

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc No. ~~[illegible]~~
503

ಮುದ್ರಕರು:
ವೀಣೇಕರ ಶಿವಪ್ಪನವರು,
ಶ್ರೀ ಶಿವಾನಂದ ಮುದ್ರಣಾಲಯ,
ಗದಗ.

ಶ್ರೀ. ಮ. ನಿ. ಪ್ರ. ಮುರುಘೇಂದ್ರ ಮಹಾಶಿವಯೋಗಿಗಳು



ಗಚ್ಚಿನಮಠ - ಅಥಣಿ.

ಅರ್ಪಣೆ

ಶ್ರೀ ಬಸವಾದಿ ಪ್ರಮಥರಂತೆ ನುಡಿದು, ನುಡಿದಂತೆ ನಡೆದು
ವೀರಶೈವ ಧರ್ಮಾಚರಣೆಯನ್ನು ತಮ್ಮ ಜೀವಿತದಲ್ಲಿ
ನಡೆ - ನುಡಿಗಳ ಮೂಲಕ ಆಚರಿಸಿ,
ಶಿವಯೋಗದ ಘನತೆಯನ್ನು ಬೀರಿ
ಮಹಾತಪಸ್ವಿಗಳೂ
ವೈರಾಗ್ಯಮೂರ್ತಿಗಳೂ ಕಾರಣಪುರುಷರೂ ಆದ
ಅಥಣಿ ಗಚ್ಚಿನಮಠದ
ಲಿಂಗೈಕ್ಯ
ಶ್ರೀ ಮ. ನಿ. ಪ್ರ.

ಮುರುಘೇಂದ್ರ ಮಹಾಶಿವಯೋಗಿಗಳ

ಸ್ಮಾರಕವಾಗಿ

ಅವರ ಅಡಿದಾವರೆಗಳಿಗೆ ಈ ಗ್ರಂಥವನ್ನು
ಭಕ್ತಿಯ ಮುಡಿಪೆಂದು
ಅರ್ಪಿಸಿದೆ.

ಮು ನ್ನು ಡಿ

ಲಿಂಗೈಕ್ಯ ಶ್ರೀ ಮ. ನಿ. ಪ್ರ. ಶ್ರೀಮದಥಣಿ ಮುರಘೇಂದ್ರ ಮಹಾಶಿವಯೋಗಿಗಳವರ ಸ್ಮರಣಾರ್ಥವಾಗಿ ಪ್ರಕಟಿಸಲು ಕೈಕೊಂಡ ಶ್ರೀ ಘನಮಠ ಶಿವಯೋಗಿಗಳವರ "ಭಕ್ತಿಸುಧಾಸಾರ"ವು ಶ್ರೀ ಬಾಲಲೀಲಾ ಮಹಾಂತಶಿವಯೋಗೀಶ್ವರ ಗ್ರಂಥಮಾಲೆಯಲ್ಲಿ ಮೂರನೆಯ ದಾಗಿದೆ. ಈ ಮೊದಲು ಈ ಗ್ರಂಥವು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಚಿನ್ಮೂಲಾದ್ರಿ ಬೃಹನ್ಮಠ ಮಹಾಸನ್ನಿಧಿಯವರು ಗದಗ ತಾಲೂಕು ಮುಳಗುಂದ ಶ್ರೀ ಬಾಲಲೀಲಾ ಮಹಾಂತಸ್ವಾಮಿಗಳ ಗವಿಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಿದ ಸಮಯದಲ್ಲಿ, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಕೈವಲ್ಯದರ್ಪಣದೊಡನೆ ೧೯೨೨ ನೆಯ ಇಸವಿಯಲ್ಲಿ ಕವಿಯ ಕಾಲ, ಚರಿತ್ರೆ ಇನ್ನುಳಿದ ಐತಿಹಾಸಿಕ ಅಂಶಗಳಿಲ್ಲದೆ ಅಚ್ಚಾಗಿದ್ದಿತು. ಈ ಸಾರೆ ಈ ಎರಡು ಗ್ರಂಥಗಳನ್ನು ಪ್ರತ್ಯೇಕ ಅಚ್ಚುಮಾಡಿಸಿದ್ದಲ್ಲದೆ, ಶುದ್ಧವಾಗಿಯೂ ಅಂದವಾಗಿಯೂ ಮತ್ತು ಐತಿಹಾಸಿಕ ಅಂಶಗಳೊಡನೆ ವಿದ್ವಜ್ಜನರಿಂದ ಪರಿಶೋಧಿಸಿ ಮುದ್ರಿಸಬೇಕೆಂಬ ಅಪೇಕ್ಷೆಯಿಂದ ಕ್ರಿ. ಶ. ೧೯೪೩ ನೆಯ ನಾಗಪಂಚಮಿಯ ದಿನ ಕೈವಲ್ಯದರ್ಪಣವು, ಕರ್ಮಯೋಗಿಗಳೂ ಸುಪ್ರಸಿದ್ಧ ಸಾಹಿತಿಗಳೂ ಆದ ಪ್ರೊ. ಬಸವನಾಳ ಶಿವಲಿಂಗಪ್ಪ ಎಂ. ಎ. ಧಾರವಾಡ ಅವರಿಂದ ಪರಿಶೋಧಿಸಿ ಮುದ್ರಣಮಾಡಲ್ಪಟ್ಟಿರುವುದು. ಅದರಂತೆ "ಭಕ್ತಿಸುಧಾಸಾರ"ವನ್ನು ಸುಪ್ರಸಿದ್ಧ ಸಾಹಿತಿಗಳೂ ವಾಗ್ಮಿಗಳೂ ಆದ ಪ್ರೊ. ಸಂ. ಶಿ. ಭೂಸನೂರಮಠ, ಎಮ್. ಎ. ಬೆಳಗಾವಿ ಅವರು ಪರಿಶ್ರಮಪಟ್ಟು ಗ್ರಂಥವನ್ನು ಪರಿಷ್ಕರಿಸಿ, ಅವಶ್ಯವಿದ್ದ ಪ್ರಸ್ತಾವನೆಯನ್ನು ಸಹ ಬರೆದುಕೊಟ್ಟರು.

ಶ್ರೀ ಘನಮಠ ಶಿವಯೋಗಿಗಳವರ ಸ್ಥಾನ, ಲಿಂಗೈಕ್ಯರಾದ ಸ್ಥಳ ಮತ್ತು ಅಲ್ಲಲ್ಲಿ ಪ್ರಚಲಿತವಿರುವ ವಿಷಯಗಳನ್ನು ತಿಳಿದುಕೊಂಡು ಬರುವ ದಕ್ಕಾಗಿ ಅಖಿಲಭಾರತ ಶಿವಾನುಭವ ಸಂಸ್ಥೆಯ ಗೌರವ ಕಾರ್ಯದರ್ಶಿ ಗಳಾದ ಶ್ರೀ ಸಿದ್ಧವೀರದೇವರು ಹೊಸಮಠ ಹುಬ್ಬಳ್ಳಿ (ದಾವಣಗೆರೆ ವಿರಕ್ತಮಠದ ಶ್ರೀ ಪ್ರಭುಸ್ವಾಮಿಗಳು) ಮತ್ತು ಶ್ರೀಮನ್ನಿರಂಜನ ಜಗ ದ್ಗುರು ಮುರುಘರಾಜೇಂದ್ರ ಪ್ರಸಾದನಿಲಯ ಮುರುಘಾಮಠ ಹಾವೇರಿ ಪೇಟೆ ಧಾರವಾಡ ಈ ಸಂಸ್ಥೆಯ ಕಾರಕೂನ ವೀರಯ್ಯ ಪೂಜಾರ ಈ ಉಭಯರನ್ನು ಕಳುಹಿಸಿದುದಾಗಿತ್ತು. ಉಭಯರು ವಿಜಾಪೂರ ಜಿಲ್ಹೆ ಯಲ್ಲಿ ಮುದ್ದೇಬಿಹಾಳ, ಕುಂಟೋಜಿ, ಹುನಗುಂದ, ಇಳಕಲ್ಲ, ಸಂಗಮ ಮತ್ತು ರಾಯಚೂರ ಜಿಲ್ಹೆಯಲ್ಲಿ ಲಿಂಗಸೂಗೂರು, ಸಂತೆಕೇಲೂರು ಮೊದಲಾದ ಸ್ಥಾನಗಳಲ್ಲಿ ದೊರೆಯುವ ಮತ್ತು ಪ್ರಚಲಿತವಿರುವ ಐತಿಹಾ ಸಿಕ ವಿಷಯ ಸಂಗ್ರಹಮಾಡಿ ಮತ್ತು ಸಂತೆಕೆಲೂರಲ್ಲಿರುವ ಶ್ರೀ ಘನಮಠ ಶಿವಯೋಗಿಗಳವರ ಗದ್ದುಗೆಯ ಭಾವಚಿತ್ರವನ್ನು ಬಹು ಪ್ರಯಾಸಪಟ್ಟು ತಂದರು. ಮುದ್ದೇಬಿಹಾಳದ ಸಂಗಪ್ಪನವರು ಮೋಟಗಿ ಇವರು ಶ್ರೀ ಘನಮಠ ಶಿವಯೋಗಿಗಳವರ ಪುರಾಣವನ್ನು, ಡಾಕ್ಟರ ಬಸವರಾಜ ಅಕ್ಕಿ ತಂಗಡಗಿ ಇವರು ಕುಂಟೋಜಿಯಲ್ಲಿರುವ ಶ್ರೀ ಘನಮಠ ಶಿವಯೋಗಿಗ ಳವರ ಚೌಕಿಯ (ತಪೋವನದ) ಭಾವಚಿತ್ರವನ್ನು, ಕಲಾವಿದರಾದ ಅಥ ಣಿಯ ಮುರಿಗೆಪ್ಪ ಚಟ್ಟಿ ಇವರು ಶ್ರೀ ಘನಮಠ ಶಿವಯೋಗಿಗಳವರ ಭಾವ ಚಿತ್ರವನ್ನು ಬರೆದು ಕೊಟ್ಟರು.

ಅಚ್ಚಿನ ಕಾರ್ಯವನ್ನು ಗದುಗಿನ ಶ್ರೀ ಶಿವಾನಂದ ಮುದ್ರಣ ಮಂದಿರದ ಒಡೆಯರೂ ಸಾಹಿತ್ಯಾಭಿಮಾನಿಗಳೂ ಆದ ವೀಣೇಕರ ಮಡಿವಾಳಪ್ಪನವರು ಭಕ್ತಿಯಿಂದ ಮುದ್ರಣಕಾರ್ಯವನ್ನು ಅಂದವಾದ ಕಲೆಯೊಡನೆ ಮಾಡಿಕೊಟ್ಟದ್ದು ಅವರ ಸಾಹಿತ್ಯಾಭಿರುಚಿಯನ್ನು ವ್ಯಕ್ತ ಪಡಿಸುತ್ತದೆ. ಧರ್ಮ, ಸಾಹಿತ್ಯ, ಸಮಾಜಾಭಿಮಾನಿಗಳಾದ ಬಸವಪ್ಪ ನವರು ಬಳ್ಳಾರಿ ಗದಗ ಅವರ ಮಕ್ಕಳಾದ ಗುರುಸಿದ್ಧಪ್ಪನವರು ಕರಡು ಪ್ರತಿ ತಿದ್ದುವ ಕಾರ್ಯವನ್ನು ಮತ್ತು ಈ ಗ್ರಂಥಕ್ಕೆ ಸಂಬಂಧಿಸಿದ ಎಲ್ಲ



ಶ್ರೀ ಘನಮಠ ಶಿವಯೋಗಿಗಳ ತಪೋವನ; ಕುಂಟೋಜಿ. (ತಾಲೂಕ- ಮುದ್ದೇಬಿಹಾಳ, ಜಿಲ್ಲಾ- ವಿಜಾಪೂರ)

ಕಾರ್ಯವನ್ನು ಬಹುಶ್ರದ್ಧೆಯಿಂದ ಭಕ್ತಿಪೂರ್ವಕವಾಗಿ ಮಾಡಿಕೊಟ್ಟರು. ಮತ್ತು ಗದಗ ಅನ್ನದಾನೀಶ್ವರ ಸಂಸ್ಕೃತ ವಿದ್ಯಾಲಯಾಧ್ಯಾಪಕರಾದ ಪಂ. ನಾಗಭೂಷಣಶಾಸ್ತ್ರಿಗಳು ಪದಗಳ ಪರಿಶೋಧನೆಯ ಕಾರ್ಯದಲ್ಲಿ ತುಂಬಾ ಪರಿಶ್ರಮಪಟ್ಟರು. ಶ್ರೀ ಶಿವಯೋಗೀಶ್ವರನು ಸರ್ವರಿಗೂ ಶ್ರೇಯಸ್ಸನ್ನುಂಟುಮಾಡಲೆಂದು ಕೋರುತ್ತೇವೆ.

ಕೊನೆಯದಾಗಿ ನಮ್ಮ ಪ್ರಾರ್ಥನೆಯನ್ನಂಗೀಕರಿಸಿ ಚಿತ್ರಕಲ್ ದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ತಮ್ಮ ಅಮೃತಹಸ್ತದಿಂದ ಈ "ಭಕ್ತಿಸುಧಾಸಾರ"ದ ಪ್ರಕಟನೆಯ ಸಮಾರಂಭವನ್ನು ನೆರವೇರಿಸಿದುದಕ್ಕಾಗಿ ಮಹಾ ॥ ॥ ಸನ್ನಿಧಿಯಲ್ಲಿ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಶ್ರೀ ಮುರುಘಾಮಠ,
ಹಾವೇರಿ ಪೇಟೆ,
ಧಾ ರ ವಾ ಡ ,
ಪ್ರಕಟನೆಯ ದಿನ
೧೭—೧—೧೯೪೫.

—ಪ್ರಕಾಶಕರು.

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ

— ಗ್ರಂಥಮಾಲೆ. —

ಸಂಚಾಲಕರು: ಶ್ರೀ ಮ. ನಿ. ಪ್ರ. ಮೃತ್ಯುಂಜಯ ಸ್ವಾಮಿಗಳು,

ಶ್ರೀ ಮುರುಘಾಮಠ, ಧಾರವಾಡ.

ಪ್ರಕಟನೆಗಳು

೧. ಶ್ರೀ ಬಾಲಲೀಲಾ ಮಹಾಂತಶಿವಯೋಗಿ ವಿರಚಿತ

ಕೈವಲ್ಯದರ್ಪಣ

ಸಂಪಾದಕರು: ಶಿ. ಶಿ. ಬಸವನಾಳ, ಎಂ. ಎ. ಧಾರವಾಡ

೨. ಶ್ರೀ ಷಣ್ಮುಖಸ್ವಾಮಿ ಕೃತ

ಅಖಂಡೇಶ್ವರ ವಚನ

ಸಂಪಾದಕರು: ಶ್ರೀ ಸಿದ್ಧವೀರದೇವರು ಹೊಸಮಠ, ಹುಬ್ಬಳ್ಳಿ.

೩. ಶ್ರೀ ಘನಮಠ ಶಿವಯೋಗಿ ವಿರಚಿತ

ಭಕ್ತಿಸುಧಾಸಾರ

ಸಂಪಾದಕರು: ಸಂ. ಶಿ. ಭೂಸನೂರಮಠ, ಎಂ. ಎ. ಬೆಳಗಾವಿ

ಅಚ್ಚಿನಲ್ಲಿರುವ ಗ್ರಂಥಗಳು

೧. ಶ್ರೀ ಚಿಕ್ಕನಂಜೇಶ ವಿರಚಿತ

ರಾಘವಾಂಕ ಚರಿತೆ

ಸಂಪಾದಕರು: ಸ. ಸ. ಮಾಳವಾಡ, ಎಂ. ಎ. ಧಾರವಾಡ.

೨. ಶ್ರೀ ಮೈಲಾರ ಬಸವಲಿಂಗ ಕೃತ

ವೀರಶೈವ ಷಟ್‌ಸ್ಥಲ ಸಿದ್ಧಾಂತ - ಗುರುಕರುಣ ತ್ರಿವಿಧಿ
ಶಿವಾನುಭವ ದರ್ಪಣ - ಲಿಂಗಪೂಜಾವಿಧಿ

ಸಂಪಾದಕರು; ಶಿ. ಶಿ. ಬಸವನಾಳ, ಎಂ. ಎ. ಧಾರವಾಡ.

೩. ಶ್ರೀಮುಮಠಣ

ಮುರುಘೇಂದ್ರ ಶಿವಯೋಗಿಗಳ ಚರಿತ್ರೆ

ಲೇಖಕರು: ಶಿ. ಶಿ. ಬಸವನಾಳ, ಎಂ. ಎ. ಧಾರವಾಡ.

ಪ್ರಸ್ತಾವನೆ

ಕನ್ನಡ ನಾಡಿನಲ್ಲಿ ಶಿವಾನುಭಾವಿಗಳ ಪರಂಪರೆ ಅತ್ಯುಜ್ವಲವಾದುದೆಂದೇ ಹೇಳಬೇಕು. ಹನ್ನೆರಡನೆಯ ಶತಮಾನದಲ್ಲಿ ವಿರಾಗವಿಭುವೆಂದು ಪರಮ ಯೋಗೀಶ್ವರನೆಂದು ಪ್ರಸಿದ್ಧಿ ಪಡೆದ ಅಲ್ಲಮಪ್ರಭುವಿನ ಪರಮಾರಾಧ್ಯರಾದ ಅನಿಮಿಷರಿಂದ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಶಿವಯೋಗ ಸಾಮ್ರಾಜ್ಯದಲ್ಲಿ ನೆರೆಮೆರೆದು ಶಿವಾತ್ಮಲಿಂಗದಲ್ಲಿ ಬೆರೆದ ಶ್ರೀ ಮದಥಣಿ ಶಿವಯೋಗಿಗಳ ವರೆಗೆ ಆ ಪರಂಪರೆ ಧಾರಾಳವಾಗಿ ಹರಿದಿರುವದಲ್ಲದೆ ವೀರಶೈವ ತತ್ವಾನುಭಾವದ ಸಾರಶ್ರೇಷ್ಠತೆಯನ್ನೂ ಸಾರಿರುತ್ತದೆ.

ಲಿಂಗಾಂಗ ಸಾಮರಸ್ಯವೇ ಶಿವಾನುಭಾವದ ನೆಲೆ. ಜೀವಭಾವವಳಿದು ಶಿವಭಾವಿಯಾಗಿ ತನ್ನ ನಿಜವನರಿದು ಅದರಂತೆ ಆಚರಿಸಿ ಲಿಂಗಭೋಗೋಪಭೋಗಿಯಾಗಿ, ಲಿಂಗಾಂಗಸಾಮರಸ್ಯ ಪಡೆದು, ನಿತ್ಯ ಲಿಂಗಾನಂದದಲ್ಲಿರುವುದೇ ಶಿವಾನುಭಾವಿಯ ನಿಲವೆಂದು ಹೇಳಬಹುದು. ಸುಜ್ಞಾನ ಸತ್ಕ್ರಿಯೆಗಳ ಸುಂದರ ಸಮನ್ವಯವೇ ಶಿವಾನುಭಾವದ ಘನ; ಅದರ ಸತ್ವಸಾರ. ಸಚ್ಚಿದಾನಂದ ಸ್ವರೂಪವೇ ತಾನೆಂಬ ಅರಿವೇ ಸುಜ್ಞಾನ. ಸರ್ವಾಂಗ ಲಿಂಗಿಯಾದ ಶರಣನ 'ಅಂಗಕ್ರಿಯೆಗಳೆಲ್ಲ ಲಿಂಗಕ್ರಿಯೆ'ಗಳಾದುದೇ ಸತ್ಕ್ರಿಯೆ. ಷಟ್‌ಸ್ಥಲ ಮಾರ್ಗದಲ್ಲಿ ಪ್ರವರ್ತಿಸುವ ಶರಣರು ಅಂತರಂಗದ ಸುಜ್ಞಾನವನ್ನೇ ಬಹಿರಂಗದಲ್ಲಿ ಕ್ರಿಯಾರೂಪಕ್ಕೆ ತಂದು ಮತ್ತು ಬಹಿರಂಗದ ಕ್ರಿಯೆಗಳನ್ನೆಲ್ಲ ಅಂತರಂಗದ ಜ್ಞಾನಕ್ಕೆ ಸಂಬಂಧಿಸಿ ಸತ್ಕಾಯಕವನ್ನು ಮಾಡಿ ಇಹಪರಗಳ ಭೇದವನ್ನೇ ತೊಡೆದುಹಾಕಿದ್ದಾರೆ. ಶರಣರ ದೃಷ್ಟಿಯಲ್ಲಿ ವಿಶ್ವಪ್ರಪಂಚವೆಲ್ಲ ಮಾಯೆಯಲ್ಲ. ಆ ಪ್ರಪಂಚದ ಭೋಗಭಾಗ್ಯಗಳೆಲ್ಲ ಅವರಿಗೆ ಹೊರತಲ್ಲ. " ಲಿಂಗಸಂಗ ತತ್ಪರ ಶರಣಂಗೆ

ಸರ್ವವಿಧ ಭೋಗಸುಖಂ." ಶರಣರ ಜೀವನ ಮರವೆಯ ಮಬ್ಬಿನಲ್ಲಿ ಹಗಲು ಹಸುವಿಗೆ ಇರುಳು ವಿಷಯಕ್ಕೆ ಹೆಣಗಿದ ಗೊತ್ತು-ಗುರಿಯಿಲ್ಲದ ಹುಚ್ಚು ಹೋರಾಟವಲ್ಲ. ಅವರ ಜೀವನ ಲಿಂಗಲೀಲೆಯ ದಿವ್ಯ ಕಲೆ. ಈ ದಿವ್ಯ ಕಲೆಯ ವಿಲಾಸವನ್ನು ಮೊಗ್ಗೆಯ ಮಾಯಿದೇವರು ತಮ್ಮ ಶತಕತ್ರಯದಲ್ಲಿ ಇಂತು ಚಿತ್ರಿಸಿದ್ದಾರೆ.

ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಂ
ಲಿಂಗದಿನೊಲ್ದು ವಿಸ್ತರಿಸಿ ಲಿಂಗಕೆ ಅಂಗಮನರ್ಪಿಸುತ್ತು ಮಾ ।
ಲಿಂಗ ಪದಾರ್ಥಮಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ
ಲಿಂಗನಿಜೈಕ್ಯನಯ್ಯ ಪರಮ ಪ್ರಭುವೇ ಮುಪಷ್ಪೈಪುರೀಶ್ವರ ॥

ಇಂತಹ ವಿಶಿಷ್ಟ ಸಂಸ್ಕೃತಿ ಮತ್ತು ಸಾಂಪ್ರದಾಯದಲ್ಲಿ ಬೆಳೆದು ಬಾಳಿದ ಸಾವಿರಾರು ಶಿವಶರಣರು, ಬಸವಾದಿ ಪ್ರಮಥರು ಚರಿಸಿ ತೋರಿದ ಷಟ್ಸ್ಥಲ ಮಾರ್ಗದಲ್ಲಿ ಸಾವಧಾನವಾಗಿ ನಡೆದು, ನಡೆದಂತೆ ನುಡಿದು ಶಿವಾನಂದ ಸಾಮ್ರಾಜ್ಯವನ್ನು ಸೂರೆಗೊಂಡರು. ಆ ಅಪ್ರತಿಮ ಶಿವಾನಂದವು ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರಿಗೂ ದೊರೆಯಲೆಂಬ ವಿಶ್ವಪ್ರೇಮದಿಂದ ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಪದ-ಪದ್ಯ ಮೊದಲಾದ ವಿವಿಧ ರೂಪವಾಗಿ ತಮ್ಮ ಆನಂದಾನುಭವವನ್ನೇ "ಹಾಡಿದಲ್ಲದೆ ಸೈರಿಸೆ" ನೆಂಬ ಭಾವದಿಂದ ಹಾಡಿ ಹಾಡಿ, ಮೂಢ ಪ್ರೌಢರೆಂಬ ಭೇದವಿಲ್ಲದೆ ನೀಡಿ ನೀಡಿ, ಶಿವಭಕ್ತಿಜ್ಞಾನದ ಸಾರವನ್ನು ಪ್ರಸಾರಕ್ಕೆ ತಂದರು. ಶರಣರಿಗೆ ಜಾತಿಯ ಸೂತಕವಿಲ್ಲ; ಕುಲದ ಛಲವಿಲ್ಲ; ಮೇಲು ಕೀಳೆಂಬ ಭಾವನೆಯಿಲ್ಲ; ಹೆಣ್ಣು-ಗಂಡೆಂಬ ಭೇದವಿಲ್ಲ. ಅಂತೆಯೇ ಕುಲವೊಂದೇ ಶಿವಕುಲವೆಂದು ಸರ್ವಸಮತೆಯನ್ನು ಜಗತ್ತಿಗೇ ಸಾರಿಹೇಳಿ, ಮರ್ತ್ಯಲೋಕ-ದೇವಲೋಕಗಳ ಭೇದವನ್ನು ತೊಡೆದು ಭೂಲೋಕವನ್ನು ಶಿವಲೋಕಕ್ಕೆತ್ತಲು ಯತ್ನಿಸಿದರು. ಇಂತಹ ಶಿವಶರಣರ '**ಮಾತೆಂಬ ಜ್ಯೋತಿರ್ಲಿಂಗ**'ವು ಕನ್ನಡ ಸಾಹಿತ್ಯಕ್ಕೆ ದಿವ್ಯಪ್ರಭೆಯನ್ನು ತಂದೊದಗಿಸಿದೆ. ಇವರ ನುಡಿಗಡಣವು ಕನ್ನಡಿಗರ ನಾಲಿಗೆಯಲ್ಲಿ ಇಂದಿಗೂ ನಲಿಯುತ್ತಿವೆ. ಅವರ ಬಾಳನ್ನು ಸವಿಗಡಲಲ್ಲಿ ಮುಳುಗಿಸಿ ತೇಲಿಸುತ್ತಿವೆ.

ಶ್ರೀ ಘನಮಠ ನಾಗಭೂಷಣ ಶಿವಯೋಗಿಗಳು ಇಂತಹ ಅತ್ಯುಜ್ವಲವಾದ ಸತ್ಪರಂಪರೆಯಲ್ಲಿ ಬೆಳೆದು ಬಾಳಿ ಬದುಕಿದರು. ಕೃಷಿಜ್ಞಾನ ಪ್ರದೀಪಿಕೆಯ ಕರ್ತೃವಾದ ಸಿದ್ಧರಾಮಪ್ಪ ಕುನ್ನಾಳ * ಇವರು ತಮ್ಮ ಗ್ರಂಥದಲ್ಲಿ ಸೂಚಿಸಿರುವಂತೆ ಶರಣರ ಸಾಂಪ್ರದಾಯವನ್ನು (೧) ಪೂರ್ವ ಪುರಾತನರು (೨) ಬಸವಾದಿ ಪುರಾತನರು (೩) ನೂತನ ಪುರಾತನರು ಎಂದು ವಿಭಾಗಿಸುವುದಾದರೆ ಶ್ರೀ ನಾಗಭೂಷಣ ಶಿವಯೋಗಿಗಳನ್ನು ನೂತನ ಪುರಾತನರ ಪಂಙ್ತ್ತಿಯಲ್ಲಿ ಸೇರಿಸಬಹುದು. ಘನಮಠರು ಭಕ್ತಿ-ಜ್ಞಾನ-ಸದ್ವಿರತಿ ಸಂಪದವನ್ನು ಅಳವಡಿಸಿಕೊಂಡು, ಬಸವಾದಿ ಪುರಾತನರು ತೋರಿದ ಷಟ್ಸ್ಥಲ ಮಾರ್ಗವನ್ನೇ ಅನುಸರಿಸಿ, ಸದ್ಭಕ್ತರ ಪ್ರಾಣವಾಗಿ, ಸ್ವತಂತ್ರಶೀಲರಾಗಿ ಚರಿಸಿದ ಜಂಗಮವರೇಣ್ಯರು.

I ತಿರುನೀಲಕಂಠ, ಕಣ್ಣಪ್ಪ ಮೊದಲಾದ ಅರವತ್ತುಮೂರು ಪುರಾತನರು.

II ಬಸವ, ಚನ್ನಬಸವ, ಪ್ರಭುದೇವ ಮೊದಲಾದ ಪುರಾತನರು ಮತ್ತು ನೂರೊಂದು ವಿರತರು.

೧ III ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು.
೨ ಶ್ರೀ ಲಿಂಗನಾಯಕನಹಳ್ಳಿ ಚನ್ನವೀರಸ್ವಾಮಿಗಳು.
೩ ಶ್ರೀ ಅನಂತಪುರದ ಗುರುಬಸವಸ್ವಾಮಿಗಳು
೪ ಶ್ರೀ ದೇವನೂರು ಗುರುಮಲ್ಲೇಶ್ವರರು
೫ ಶ್ರೀ ಮೈಲಾರದ ಬಸವಲಿಂಗ ಶರಣರು
೬ ಶ್ರೀ ನೀರಡಗುಂಭದ ಸಿದ್ಧಲಿಂಗಸ್ವಾಮಿಗಳು
೭ ಶ್ರೀ ಸೊಲ್ಲಾಪುರದ ವೀರೇಶ್ವರ ಶರಣರು
೮ ಶ್ರೀ ಬಳ್ಳಾರಿ ಸಕ್ಕರಿ ಕರಡೆಪ್ಪನವರು
೯ ಶ್ರೀ ಅಥಣಿ ಮುರುಗೇಂದ್ರ ಶಿವಯೋಗಿಗಳು
೧೦ ಶ್ರೀ ಬಿದರಿಯ ಕುಮಾರಸ್ವಾಮಿಗಳು

* ಕೃಷಿಜ್ಞಾನ ಪ್ರದೀಪಿಕೆಯನ್ನು ರಚಿಸಿದವರು ಘನಮಠ ಶಿವಯೋಗಿಗಳಲ್ಲ. ಸಿದ್ಧರಾಮಪ್ಪ ಕುನ್ನಾಳ ಇವರೇ ಎಂಬ ವಿಷಯುವನ್ನು ಮುಂದೆ ಚರ್ಚಿಸಿದೆ.

೧೧ ಶ್ರೀ ಎಳಂದೂರು ಬಸವಲಿಂಗಸ್ವಾಮಿಗಳು
೧೨ ಶ್ರೀ ಕಂಕಲಗಿ ಅಡವಿಸ್ವಾಮಿಗಳು
೧೩ ಶ್ರೀ ಮಹಾಲಿಂಗಪುರದ ಮಹಾಲಿಂಗೇಶ್ವರರು
೧೪ ಶ್ರೀ ಸಾವಳಗಿ ಶಿವಲಿಂಗಸ್ವಾಮಿಗಳು
೧೫ ಶ್ರೀ ಅರಭಾವಿ ದುರದುಂಡೀಶ್ವರರು
೧೬ ಶ್ರೀ ಆದಿ ಸಿದ್ಧೇಶ್ವರ ಸ್ವಾಮಿಗಳು
೧೭ ಶ್ರೀ ಮುಧೋಳ ಚರಮೂರ್ತಿಗಳು
೧೮ ಶ್ರೀ ನಾವಲಗಿ ರೇವಪ್ಪನವರು
೧೯ ಶ್ರೀ ಎಮ್ಮಿಗನೂರ ಜಡೆಯಪ್ಪನವರು
೨೦ ಶ್ರೀ ಗರಗದ ಮಡಿವಾಳಸ್ವಾಮಿಗಳು
೨೧ ಶ್ರೀ ಹಾಳಕೆರೆಯ ಅನ್ನದಾನಸ್ವಾಮಿಗಳು
೨೨ ಶ್ರೀ ಇಲ್ಲಕಲ್ಲ ಮಹಾಂತ ಶಿವಯೋಗಿಗಳು
೨೩ ಶ್ರೀ ಸೊಲ್ಲಾಪುರದ ಕಿರೀಟಮಠದ ಸ್ವಾಮಿಗಳು
೨೪ ಶ್ರೀ ತಾಳೀಕೋಟಿ ಖಾಸಗತಸ್ವಾಮಿಗಳು
೨೫ ಶ್ರೀ ಮಣಕವಾಡದ ಅನ್ನದಾನಸ್ವಾಮಿಗಳು
೨೬ ಶ್ರೀ ಬೀಳೂರು ಗುರುಬಸವಸ್ವಾಮಿಗಳು
೨೭ ಶ್ರೀ ಡಾವಣಗೆರೆ ಚೌಕಿ ಬಕ್ಕಪ್ಪಸ್ವಾಮಿಗಳು
೨೮ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು
೨೯ ಶ್ರೀ ಬಾಗಲಕೋಟಿ ವೈರಾಗ್ಯ ಮಲ್ಲಯ್ಯನವರು
೩೦ ಶ್ರೀ ಖಾನಾಮಡಗು ಶರಣರು
೩೧ ಶ್ರೀ ಹೊನ್ನಾಳಿ ಪಟ್ಟದ ಸ್ವಾಮಿಗಳು
೩೨ ಶ್ರೀ ಅಥಣಿ ಶೆಟ್ಟರಮಠದ ಮರುಳಸಿದ್ಧಸ್ವಾಮಿಗಳು
೩೩ ಶ್ರೀ ಬಳ್ಳಾರಿ ಮರಿಸ್ವಾಮಿಗಳು
೩೪ ಶ್ರೀ ಗಡ್ಡಿ ಶಾಂತವೀರಸ್ವಾಮಿಗಳು
೩೫ ಶ್ರೀ ಧಾರವಾಡದ ಮುರುಘಾಮಠದ ಗಡ್ಡದ ರುದ್ರಸ್ವಾಮಿಗಳು
೩೬ ಶ್ರೀ ಕಿತ್ತೂರು ಬಸವಲಿಂಗ ಶರಣರು ಧಾರವಾಡ

೩೭ ಶ್ರೀ ಉತ್ತೂರು ಶರಣರು
೩೮ ಶ್ರೀ ಹೆಬ್ಬಾಳು ರುದ್ರಸ್ವಾಮಿಗಳು (ದಾವಣಗೆರೆ ತಾ||)
೩೯ ಶ್ರೀ ಬನಹಟ್ಟಿ ರುದ್ರಸ್ವಾಮಿಗಳು (ನರಗುಂದ ಪೇಠಾ)
೪೦ ಶ್ರೀ ಸಿದ್ಧಗಂಗೆಯ ಅಡವೀಸ್ವಾಮಿಗಳು

(ಈ ಪಟ್ಟಿಯು ಇನ್ನೂ ಮುಂದುವರಿಯುಬಹುದು)

"ಭಕ್ತರ ಹರಣದೋಳ್ ವ್ಯಕ್ತದಿ ನೆಲಸಿ ಸನ್
ಮುಕ್ತಿ ತೋರುವ ಮದ್‌ವಿರಕ್ತ ಜಂಗಮುದ ಶ್ರೀ ||
ನೂತನ ಬಸವ ಪುರಾತನನೆನಿಪ ಪ್ರ-
ಖ್ಯಾತ ಶ್ರೀ ಘನಮಠನಾಥ ಜಂಗಮುದ ಶ್ರೀ ||

ಎಂಬ ಅವರ ಪದ್ಯಗಳೇ ಅವರ ದಿವ್ಯ ವ್ಯಕ್ತಿತ್ವವನ್ನು ವ್ಯಕ್ತಗೊಳಿಸುತ್ತವೆ. ಈ ಮಾತುಗಳು ಘನಮಠರು ತಮ್ಮನ್ನು ಇಲ್ಲವೆ ತಮ್ಮ ಗುರುವನ್ನು ಕುರಿತು ಹೇಳಿಕೊಂಡ ಹೆಮ್ಮೆಯ ಮಾತುಗಳಲ್ಲ. ಘನಮಠರ ಕಾಲದ ಜನರು ಅವರನ್ನು 'ಕಾರಣಿಕ'ರೆಂದು ಬಗೆದಿದ್ದರು. ಅವರನ್ನು ಕುರಿತು ಹುಟ್ಟಿದ ಪುರಾಣವೇ ಇದಕ್ಕೆ ಸಾಕ್ಷಿ. ಮತ್ತು ಆ ಪುರಾಣದಲ್ಲಿ ಘನಮಠರು ನಂದೀಶ್ವರನ ಅವತಾರವೆಂದು ಹೇಳಿದೆ. ಇದಲ್ಲದೆ ಘನಮಠರ ಕರಕಮಲ ಸಂಜಾತರಾದ ಸಿದ್ಧರಾಮಪ್ಪ ಕುನ್ನಾಳ ಇವರು ಘನಮಠರನ್ನು '**ನೂತನಲ್ಲಮದೇವರವತಾರ**' * ವೆಂದು ಎಷ್ಟೋ ಕಡೆ ಹೇಳಿದ್ದಾರೆ. ಅವರ ದೃಷ್ಟಿಯಲ್ಲಿ ನಾಗಭೂಷಣ ಶಿವಯೋಗಿಗಳವರು.................. ಜಗತ್‌ಪಾವನ ಪ್ರಯೋಜನಾರ್ಥವಾಗಿ ಶಿವಾಜ್ಞೆಯಿಂದ........ಜಗದೋಪಕಾರ ಕರಣಾರ್ಥಕ್ಕೆ * ಅವತರಿಸಿದವರು. ಮತ್ತು ಭಕ್ತಿ ಜ್ಞಾನ ವೈರಾಗ್ಯಂಗಳ, ಸಕಲ ಸುನೀತಿಯ ಆದ್ಯರ ವಚನ ಸಾಕ್ಷಿಗಳಿಂದ ಯುಕ್ತಮಾದ ಪಾರಮಾರ್ಥ ಕೃಷಿಯೆಂಬ ಮೋಕ್ಷಶಾಸ್ತ್ರವನ್ನು ತಿಳಿಹಿಸುವುದಕ್ಕೆ ಲೋಕೋದ್ಧಾರಾರ್ಥವಾಗಿ ಭೂಲೋಕದಲ್ಲಿ ಅವತಾರವನ್ನು ಮಾಡಿದ ನೂತನಲ್ಲಮದೇವರೆಂಬ ಘನಮಠನಿವಾಸ ಶ್ರೀ ನಾಗಭೂಷಣ ಮಹಾಪ್ರಭುಗಳವರು .... ಜ್ಞಾನ ಜಂಗಮ ಲೀಲಾವೈಭವದಿಂದ ಭೂ

* ಕೃ. ಪ್ರ. ಪುಟ ೩೫.

ಸಂಚಾರ ಮಾಡುತ್ತ ರೇವಣೇಶ್ವರ ಅಲ್ಲಮದೇವರು ತೋಂಟದಾರ್ಯರು ಗಳಂತೆ ವೇದಾಗಮ ಸಕಲಶಾಸ್ತ್ರ ಪುರಾಣೇತಿಹಾಸಗಳಿಂದ ಮತ್ತು ಆದ್ಯರು ಪೇಳಿದ ವಚನಗಳಿಂದ ನಿಜವ ಬೋಧಿಸಿದರು. ವರಶಿಷ್ಯನ ಬಗೆಯಲ್ಲಿ ಇಂತು ಮೂಡಿದ ದಿವ್ಯಮೂರ್ತಿಯನ್ನು 'ನೂತನ ಪುರಾತನ' ಮಾಲಿಕೆ ಯಲ್ಲಿ ಸೇರಿಸಿದರೆ ಎಳ್ಳಷ್ಟು ತಪ್ಪಲ್ಲವೆಂದು ನಮ್ಮ ಭಾವನೆ.

ಜಗದುದ್ಧಾರಕ್ಕೆ ಹೆಣಗದ ಆತ್ಮೋದ್ಧಾರವು ಅಪೂರ್ಣವೆಂದು ಬಗೆದ ನಾಗಭೂಷಣರು ಅನೇಕ ಕಡೆ ಸಂಚರಿಸುವಾಗ ಸಂದರ್ಭಕ್ಕೆ ತಕ್ಕಂತೆ ಎದೆದೆರೆದು ಹಾಡಿದ ಪದಪದ್ಯಗಳು ಕನ್ನಡ ನಾಡಿನ ಮೂಲೆ ಮೂಲೆಗಳಲ್ಲಿ ಪ್ರಚಾರದಲ್ಲಿವೆ. ದಕ್ಷಿಣಭಾರತದಲ್ಲಿ ಶಿವಾನುಭವ, ಶಿವಭಕ್ತಿ ಶಿವಾಚಾರಗಳ ಪ್ರಚಾರಕ್ಕಾಗಿ ಇವರು ಸಂಚರಿಸದ ಭಾಗವಿದ್ದಂತೆ ತೋ-ರುವುದಿಲ್ಲ. ಅಂತೆಯೇ ಇವರು ರಚಿಸಿದ "ತತ್ವಪದಗಳು" ಇಲ್ಲವೆ ಭಕ್ತಿಯ ಭಜನೆಗಳು ಇಲ್ಲವೆ ಗೀತೆಗಳು ಹಳ್ಳಿ ಮತ್ತು ಪಟ್ಟಣಗಳಲ್ಲಿ ಕಲಿತ ಮತ್ತು ಕಲಿಯದ ನಾಲಗೆಗಳ ಮೇಲೆ ಇಂದಿಗೂ ನಲಿಯುತ್ತಿವೆ. ಇವರ ಪದಗಳನ್ನೆಲ್ಲ ಒಂದುಗೂಡಿಸಿ ಧಾರವಾಡ ಜಿಲ್ಲೆಯ ಗದಗ ತಾಲೂಕು ಮುಳಗುಂದ ಗವಿಮಠಾಧ್ಯಕ್ಷರಾದ ಮತ್ತು ಧಾರವಾಡದ ಶ್ರೀ ಮನ್ನಿರಂಜನ ಜಗದ್ಗುರು ಮುರುಘಾಮಠದ ಮತ್ತು ಪ್ರಸಾದ ನಿಲಯದ ಸಂಸ್ಥಾಪಕರಾದ ಶ್ರೀ ನಿ. ಪ್ರ. ಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯದರ್ಪಣ' ದೊಡನೆ ಕ್ರಿ. ಶ. ೧೯೩೨ ರಲ್ಲಿ ಪ್ರಕಟಿಸಿದರು. ಅದೇ ಮಹಾಸ್ವಾಮಿಗಳವರ ಅಪ್ಪಣೆಯಮೇರೆಗೆ ಕೈವಲ್ಯದರ್ಪಣವು ಪ್ರೊ. ಶಿ. ಶಿ. ಬಸವನಾಳರ ಸಂಪಾದಕತ್ವದಲ್ಲಿ ಸಂಸ್ಕರಣವನ್ನು ಹೊಂದಿ ಅವರ ವಿಚಾರ ಮತ್ತು ಸೂಚನೆಗಳಿಂದ ತುಂಬಿದ ಪ್ರಸ್ತಾವನೆಯೊಡನೆ ಹೋದ ವರುಷ ಪ್ರಕಟವಾಗಿದೆ. ಮತ್ತು ಅದೇ ಮಹಾತ್ಮರ ಆಜ್ಞಾನುಸಾರವಾಗಿ ಶ್ರೀ ಘನಮಠ, ನಾಗಭೂಷಣರ 'ತತ್ವಪದ'ಗಳು '**ಭಕ್ತಿಸುಧಾಸಾರ**' ವೆಂಬ ಹೆಸರಿನಿಂದ ಬೆಳಕು ಕಾಣುವ ಸಾಹಸ ಮಾಡಿವೆ.

ಶ್ರೀ ಘನಮಠ ಶಿವಯೋಗಿಗಳು ಲಿಂಗೈಕ್ಯರಾಗಿ ಸುಮಾರು ೬೦ ವರ್ಷ ಮಾತ್ರ ಆಗಿವೆ. ಅವರನ್ನು ತಮ್ಮ ಬಾಲ್ಯದಲ್ಲಿ ಕಂಡವರು

ಹುನಗುಂದ, ಇಲಕಲ್ಲ ಮೊದಲಾದಕಡೆ ಇನ್ನೂ ಕೆಲವರಿದ್ದಾರೆ. ನಿನ್ನೆ ಮೊನ್ನೆ ಆಗಿಹೋದವರಂತೆ ಅವರ ನೆನಹು ಇನ್ನೂ ಹೊಸತಾಗಿಯೇ ಇದೆ. ಅವರು ಕುಳಿತುಕೊಂಡು ಪ್ರವಚನಮಾಡಿದ ಕಟ್ಟೆ, ಅವರಿದ್ದ "ಜೋಪಡಿ", ಅವರ ಹಾವುಗೆ ಮೊದಲಾದ ಕುರುಹುಗಳು ಇಂದಿಗೂ ಅಳಿಸಿಹೋಗಿಲ್ಲ. ಆದರೂ ಘನಮಠರ ಜೀವನ ಚರಿತೆ ನಮಗೆ ಸುಸ್ಪಷ್ಟ ವಾಗಿ ತಿಳಿದುಬರುವುದಿಲ್ಲ. ಇದಕ್ಕೆ ಕಾರಣವೇನು? ನಮಗಿರುವ ಐತಿ ಹಾಸಿಕ ಭಾವನೆಯ ಅಭಾವವೆ? ಅದಂತೂ ಸರಿಯೆ! ಅದರೊಡನೆ ಮಹಾತ್ಮರನ್ನು ದಿವ್ಯಾತ್ಮರೆಂದು ಬಗೆವ ನಮ್ಮ ಪೂಜ್ಯಬುದ್ಧಿಯೂ ಮತ್ತೊಂದು ಕಾರಣವೆಂದೇ ಹೇಳಬೇಕು. ಆವನೊಬ್ಬ ಮಹಾತ್ಮನ ಬಗೆಗೆ "ಅವತಾರಿ ಪುರುಷ" ಇಲ್ಲವೆ "ಕಾರಣಿಕ" ನೆಂಬ ಭಾವನೆ ಬಲಿತೊಡನೆ ಆ ವ್ಯಕ್ತಿಯನ್ನು ಅನೇಕ ಪವಾಡಗಳು ಸುತ್ತಿಮುತ್ತಿ ನಿಜ ಮೂರ್ತಿಯ ವೈಭವವನ್ನೇ ಮಸುಕು ಮಾಡುತ್ತವೆ. ಬಸವಣ್ಣ, ಪ್ರಭು ದೇವರು ಮೊದಲಾದವರ ಜೀವನಚರಿತೆಗಳು ಇದೇ ಪಾಡು ಪಟ್ಟಿವೆ ಎಂದು ಬೇರೆ ಹೇಳುವುದೇ ಬೇಡ. ಪರಸ್ಪರ ಪೂರಕವಾಗಲಿ ಇಲ್ಲವೆ ಮಾರಕ ವಾಗಲಿ ಆಗಿ ಜನಜನಿತವಾದ ದಂತಕಥೆಗಳೂ ಆ ಮಹಾತ್ಮರ ಜೀವನ ಚರಿತೆಯ ನಿಜಸ್ವರೂಪವನ್ನು ಹಲವಾರುಸಾರೆ ವಿರೂಪಗೊಳಿಸಿದ ಸಂದರ್ಭಗಳೂ ಉಂಟು. ಹೀಗಿದ್ದರೂ ನಿಜಚರಿತೆಯನ್ನು ತಿಳಿಯಲು ತವಕಪಡುವ ಬುದ್ಧಿಗೆ, ಭಕ್ತಿಪೂರಿತವಾದ ಸಂಶೋಧನೆಗೆ ಕೆಲಮಟ್ಟಿ ಗಾದರೂ ಸತ್ಯ ಸಾಕ್ಷಾತ್ಕಾರವಾಗದಿರದು.

ಘನಮಠ ಶಿವಯೋಗಿಗಳ ಜೀವನವನ್ನು ತಿಳಿಯಲು ಕೆಲವಾದರೂ ಸಾಧನ ಸಾಮಗ್ರಿಗಳು ಇವೆ. ಅದರಲ್ಲಿ ಪ್ರಮುಖವಾದುವೆಂದರೆ:—

(೧) ಘನಮಠಾರ್ಯರ 'ತತ್ವಪದ' ಗಳು.
(೨) ಕೃಷಿಜ್ಞಾನ ಪ್ರದೀಪಿಕೆ.
(೩) ಘನಮಠ ಶಿವಯೋಗಿಗಳ ಪುರಾಣ.*

---

* ಸಿಂದಿಗಿ ತಾಲ್ಲೂಕ ದೇವಣಗಾವದ ಗುರುಲಿಂಗಪಾಖ್ಯ ಕವಿ ಕ್ರಿ.ಶ.೧೯೧೩ ರಲ್ಲಿ ರಚಿಸಿದುದು.

(೪) ಘನಮಠರನ್ನು ಪ್ರತ್ಯಕ್ಷವಾಗಿ ಕಂಡವರು.

(೫) ಪ್ರಚಾರದಲ್ಲಿರುವ ಕಥೆಗಳು.

ಘನಮಠರು ರಚಿಸಿದ ಪದಪದ್ಯಗಳು ಅವರ ಅಂತರಂಗ ಜೀವನವನ್ನು ಚಿತ್ರಿಸಲು ಹೆಚ್ಚು ಸಹಕಾರಿ. ಕೆಲಕೆಲವು ಪದಗಳು ಅವರ ಜೀವನದಲ್ಲಿ ನೆಡೆದ ಸಂದರ್ಭಗಳನ್ನೂ ಸೂಚಿಸಬಹುದು. ಇನ್ನುಳಿದ ನಾಲ್ಕು ಸಾಧನಗಳಲ್ಲಿ ಕೃಷಿಜ್ಞಾನ ಪ್ರದೀಪಿಕೆಯೇ ಪ್ರಬಲವಾದ ಸಾಧನವೆಂದು ಹೇಳಬಹುದು. ಏಕೆಂದರೆ ಈ ಗ್ರಂಥವು ರಚಿತವಾದುದು ಘನಮಠರ ಜೀವನಕಾಲದಲ್ಲಿ. ಅವರ ಅಪ್ಪಣೆಯಮೇರೆಗೆ, ಶ್ರೀ ಸಿದ್ಧರಾಮಪ್ಪ ಕುನ್ನಾಳ ಇವರೇ; ಶ್ರೀಮತ್ ಚಿದ್ಘನಮಠ ನಿವಾಸ ಶ್ರೀ ನಾಗಭೂಷಣ ಮಹಾಪ್ರಭುಗಳ ಆಜ್ಞಾನುಸಾರವಾಗಿ..................ಶ್ರೀ ಗುರುದೇವನ ಪ್ರಸಾದದ ವಾಕ್ಯದಾಧಾರದಿಂದ...............ಬರೆದಿದೆ‡ ಎಂದು ಹೇಳಿರುವಂತೆ ಈ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಘನಮಠಾರ್ಯರ ಅನೇಕ ಸಲಹೆ ಸೂಚನೆಗಳು ತುಂಬಿರುವಂತೆ ತೋರುತ್ತದೆ. ಮತ್ತು ಇದೇ ಗ್ರಂಥದಲ್ಲಿ ಘನಮಠರ ಜೀವನ ಚರಿತೆಯ ಮೇಲೆ ತಿಳಿ ಬೆಳಕು ಬಿದ್ದ ಹಲವಾರು ಸಂದರ್ಭಗಳೂ ಇವೆ. ಆದರೂ ಅವರ ಸವಿಸ್ತೃತವಾದ ಜೀವನಚರಿತೆ ಇದರಲ್ಲಿ ದೊರೆಯುವುದಿಲ್ಲ. ಹಾಗೆ ಬಯಸುವುದೂ ತಪ್ಪು.

ಇನ್ನು ಘನಮಠರು ಲಿಂಗೈಕ್ಯರಾಗಿ ಎಷ್ಟೋ ವರ್ಷಗಳಾದಮೇಲೆ ಘನಮಠ ಶಿವಯೋಗಿಗಳ ಪುರಾಣವು ಬರೆದಿರುವುದರಿಂದ ಕೃಷಿಜ್ಞಾನ ಪ್ರದೀಪಿಕೆಯ ಪ್ರಮಾಣ ಪ್ರಾಬಲ್ಯವು ಪುರಾಣಕ್ಕೆಂದೂ ಬರಲಾರದು. ಇದಲ್ಲದೆ ಪುರಾಣದ ಬಹುಭಾಗವು ಅಷ್ಟಾವರಣ ಮಹಾತ್ಮ್ಯ ಮತ್ತು ಘನಮಠರು ರಚಿಸಿದ ಪವಾಡಗಳಿಗೆ ಮೀಸಲಾಗಿಬಿಟ್ಟಿದೆ. ಮತ್ತು ಪುರಾಣದಲ್ಲಿ ಇತಿಹಾಸಕ್ಕೆ ವಿಶೇಷವಾದ ಸ್ಥಾನವಿದ್ದಂತೆ ತೋರುವುದಿಲ್ಲ.† ಇವೆಲ್ಲ ಕಾರಣಗಳಿಂದ ಘನಮಠರ ಜೀವನ ಚರಿತೆಯನ್ನು ಕಟ್ಟಲು ಪುರಾಣದ ಉಪಯೋಗ ಕಡಿಮೆಯೆಂದೇ ಹೇಳಬೇಕು.

---

‡ ಕೃ. ಜ್ಞಾ. ಪ್ರ. ಪುಟ ೧.

† ಉದಾಹರಣೆಗಾಗಿ ಪುರಾಣದಲ್ಲಿ ಘನಮಠರ ಜನನ ಮತ್ತು ಲಿಂಗೈಕ್ಯರಾದ ಮಿತಿಗಳೇ ದೊರೆಯುವುದಿಲ್ಲ.

ಇನ್ನು ಶ್ರೀಗಳನ್ನು ಕಂಡವರು ಆಗ ತೀರ ಚಿಕ್ಕ ವಯಸ್ಸಿನವರು ಇದ್ದುದರಿಂದ ಶ್ರೀಗಳ ಜೀವನದ ವಿಶೇಷ ಸಂಗತಿಗಳು ಅವರಿಗೆ ಗೊತ್ತಿದ್ದಂತೆ ಕಾಣುವುದಿಲ್ಲ. ಮತ್ತು ಅವರಿದ್ದ ಭಾಗಗಳಲ್ಲೆಲ್ಲಾ ಅಡ್ಡಾಡಿ, ಅಲ್ಲಿದ್ದ ಮುಪ್ಪಿನ ಮುದುಕರೊಡನೆ ಘನಮಠರ ಬಗೆಗೆ ಏನಾದರೂ ತಿಳಿದುಕೊಳ್ಳುವ ಸುಯೋಗವು ನಮಗೆ ದೊರೆತಿಲ್ಲ. ಇನ್ನು ಹಳ್ಳಿ-ಪಟ್ಟಣಗಳಲ್ಲಿ ಪ್ರಚಾರದಲ್ಲಿರುವ ಕಥೆಗಳು ಅನೇಕ ದೊರೆತರೂ ದಿಟವನ್ನು ಸಟೆಯಿಂದ ಬೇರ್ಪಡಿಸುವುದು ಬಲು ಕಷ್ಟ. ಆದರೂ ನಮಗೆ ದೊರೆತ ಸಾಧನ ಸಾಮಗ್ರಿಯನ್ನು ಮುಂದಿಟ್ಟುಕೊಂಡು ಘನಮಠರ ಜೀವನ ಚರಿತ್ರೆಯನ್ನು ಚಿತ್ರಿಸಲು ಯತ್ನಿಸಿದೆ.

ಶ್ರೀ ನಾಗಭೂಷಣರು ಪಾಲ್ಕುರಿಕೆ ಸೋಮಾರಾಧ್ಯರು ಅವತರಿಸಿದ ಪುಣ್ಯಭೂಮಿಯಾದ ಆಂಧ್ರದೇಶದಲ್ಲಿ ಕ್ರಿ. ಶ. ೧೮೨೮ ರಲ್ಲಿ ಜನಿಸಿದರು.* ಅವರು ಹುಟ್ಟಿದೂರು ನೈಜಾಮ ಇಲಾಖೆಯಲ್ಲಿರುವ ಅತ್ರಾಫಬ ಜಿಲ್ಲೆಯ ಪಟ್ಲೂರ ತಾಲೂಕಿಗೆ ಸೇರಿದ ದೋರ್ವಾಡ ಇಲ್ಲವೆ ದೋರ್ವಢೆ ಎಂಬುದು. ಇವರ ತಂದೆ ಜಂಗಮಾಗ್ರಗಣ್ಯರಾದ ವೀರಯ್ಯನವರು. ತಾಯಿ ವೀರಾಂಬೆ. ಇವರ ಏಳನೆಯ ವರ್ಷದಲ್ಲಿಯೇ ದೀಕ್ಷೆಯಾಯಿತು. ಕೃಷಿಜ್ಞಾನ ಪ್ರದೀಪಿಕಾಕಾರರು ತಿಳಿಸುವಂತೆ ನಾಗಭೂಷಣರು ತಮ್ಮ ಹನ್ನೆರಡನೆಯ ವರ್ಷದಲ್ಲಿ "ಅನಾದಿ ವೃಷಭನ ಸ್ಮರಿಸಿ ಪ್ರಸನ್ನತೆಯ ಮಾಡಿಕೊಂಡು ಅಂದಿನ ನಿಮಿಷಂಗೆ ಲಿಂಗವನಿತ್ತ ಗುಹೇಶ್ವರನೀತನೆಂದರಿದಾತನಿಂದನುಗ್ರಹಮಂ ಪಡೆದ"ರು.‡ ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಶ್ರೀ ಗುರುವಿನಿಂದ

---

* ರಾ. ಬ. ಪಿ. ಜಿ. ಹಳಕಟ್ಟಿಯವರು ಕೃಷಿಜ್ಞಾನ ಪ್ರದೀಪಿಕೆಗೆ ಬರೆದ ಪ್ರಸ್ತಾವನೆಯಲ್ಲಿ ಘನಮಠರ ಜನನ ಕಾಲವನ್ನು ಕ್ರಿ. ಶ. ೧೮೩೬ ಎಂದು ಹೇಳುತ್ತಾರೆ. ಆವರಿಟ್ಟುಕೊಂಡ ಆಧಾರವಾವುದೋ ನಮಗೆ ತಿಳಿಯದು. ಕೃಷಿಜ್ಞಾನ ಪ್ರದೀಪಿಕಾಕಾರರು ಘನಮಠರ ಜನನ ಕಾಲವನ್ನು "ಶ್ರೀಮನ್ನೃಪ ಶಾಲಿವಾಹನ ಶಕ ಪದಿನೇಳು ನೂರೈವತ್ತರೊಳವತಾರಮಂ ಮಾಡಿ" ಎಂದು ಹೇಳಿದ್ದಾರೆ. ಎಂದರೆ ಸಿದ್ಧರಾಮಪ್ಪನವರ ಮೇರೆಗೆ ಘನಮಠರ ಜನನ ಕಾಲವು ಕ್ರಿ. ಶ. ೧೮೨೮ ಎಂಬುದು ಸುಸ್ಪಷ್ಟ.

‡ ಘನಮಠರ ಪುರಾಣವು ಶ್ರೀಜಡೆಯಸ್ವಾಮಿಗಳು ಘನಮಠರಿಗೆ ಅನುಗ್ರವನ್ನು ಕೊಟ್ಟರೆಂದು ತಿಳಿಸುತ್ತದೆ.

ಅನುಗ್ರಹವನ್ನು ಹಡೆವುದೆಂದರೆ ಘನಮಠರ ಪಾರಮಾರ್ಥದ ಕಡೆಗಿದ್ದ ಒಲವು ಅಸ್ಪಿಷ್ಟೆಂದು ಹೇಳಲಾಗದು.

ನಾಗಭೂಷಣರ ಬಾಲ್ಯ ಮತ್ತು ಯೌವನ ಜೀವನವನ್ನು ತಿಳಿಯಲು ಅವರ ತತ್ವಪದಗಳು ಬಲು ಸಹಕಾರಿ. ಇವರ ಇಪ್ಪತ್ತೊಂದು ವರ್ಷದ ಗೃಹಜೀವನದ ಬಹು ಭಾಗವು ಬಸವ ಭಕ್ತಿಗೆ ಅರ್ಪಿತವಾಗಿದೆ ಎಂದು ಹೇಳಬಹುದು. ಬಸವ ಭಕ್ತಿಯೇ ನಿಜ ಮುಕ್ತಿಗೆ ಹೆದ್ದಾರಿಯೆಂದು ಘನ ಮಠರ ಬಲವಾದ ನಂಬುಗೆ. ಬಸವನಿಗೆ ಸರಿದೊರೆಯಾದ ದೈವವಿಲ್ಲ ವೆಂದೂ ಇವರು ಮನದಲ್ಲಿ ನಿರ್ಧರಿಸಿದ್ದರೆಂದು ತೋರುತ್ತದೆ.

"ಸಮಾನ ದೈವವದಾರೋ ಬಸವ ನಿನ್ನ
ಸಮಾನ ದೈವವದಾರೋ"

"ಬೇಗದಿ ಕರುಣಿಸೋ ಭೋ ಗುರು ಬಸವ
ಮಾರಮಥನನವತಾರ ಸುಗುಣಮಣಿ
ಹಾರ ನಿಮ್ಮನು ಭವಸಾರ ಸುಖವನೆ"

"ಕಾಯುವುದೈ ಗುರುರಾಯ ಬಸವನೆ
ಕಾಯೋ ಮೋಕ್ಷ ಸದುಪಾಯ ಪ್ರಮಥ ಸಮು-
ದಾಯ ನಿತ್ಯ ನಿರ್ಮಾಯನಿರಹನೆ"

ಎಂಬಿವೇ ಮೊದಲಾದ ಪದ್ಯಗಳಲ್ಲಿ ಘನಮಠರು ಬಸವಣ್ಣನವರಲ್ಲಿದ್ದ ತಮ್ಮ ಭಕ್ತಿಯನ್ನು ಬಗೆದುಂಬಿ ಹಾಡಿದ್ದಾರೆ. ಇವರಿಗೆ ಶಿವನಲ್ಲಿ ಭಕ್ತಿ ಇದ್ದಿಲ್ಲವೆಂತಲ್ಲ. ಆದರೆ ಶಿವಭಕ್ತಿ ಭಾಂಡಾರಿಯಾದ ಬಸವಣ್ಣನವರಲ್ಲಿದ್ದ ಇವರ ಭಕ್ತಿಯ ಭರಕ್ಕೆತುದಿಮೊದಲಿರಲಿಲ್ಲ. "**ಶಿವನೇ ಬಸವಂ ಬಸವನೆ ಶಿವನೆಂದು**" ಶೃತಿ ಸಾರುತಿದೆ. ಆದರೂ "**ಹರಗಿಂದಲಧಿಕ ಸದ್ಗುರು ಬಸವ**" ನೆಂದು ಬಗೆದ ಘನಮಠರು ಬಸವ ಭಕ್ತಿಯ ರೂಪವಾಗಿ ತಮ್ಮ ತುಂಬಿದೆದೆಯನ್ನು ಧಾರಾಳವಾಗಿ ಹರಿಸಿದರು. ಪ್ರಮಥ ಪುಂಗವನಾದ, ಸಾರವೀರಶೈವ ಮತೋದ್ಧಾರಕನಾದ, ಮೂಲಮಂತ್ರ ಸ್ವರೂಪನಾದ, ಜಂಗಮ ಪದಕಮಲ ಭೃಂಗನಾದ, ಪ್ರಸಾದಮಯ ಕಾಯನಾದ, ಶಿವ

ಭಕ್ತ ಕುಲದೀಪನಾದ, "ಪುರಾರಿ ಹೃದಯದಿ ವಿರಾಜಿಸುತ"ಲಿರುವ ಬಸವಣ್ಣನವರನ್ನು ಘನಮಠರು ತಮ್ಮ ತಾರುಣ್ಯದಲ್ಲಿ ನೆನೆನೆದು, ಅವರನ್ನು ಹಾಡಿಹರಸಿ, ಅವರಲ್ಲಿ ಭಕ್ತಿಯನ್ನು ಬೇಡಿಬೇಡಿ, ಆನಂದದಿಂದ ಮೈಮರೆತಿರಬಹುದು. ತೋರಿ ಕೆಡುವ ಇಹ ಭೋಗಭಾಗ್ಯದಲ್ಲಿ ವೈರಾಗ್ಯವನ್ನು ತಾಳಿದ ಮನವನ್ನು ಪಾರಮಾರ್ಥದ ಕಡೆಗೆ ಹೊರಳಿಸಿ, "ದಯಾನಿಧೇ ಬಸವರಾಜೇಂದ್ರ ಪೋಷಿಸಯ್ಯ! ಹಿಂದೆ ನಾನಾಯೋನಿಗಳೊಳು ಬಂದು ಬಹಳ ನೊಂದೆ. ಈ ದಂದುಗವನು ತೊಲಗಿಸಿ ಪಾಲಿಸಯ್ಯ ಬಸವತಂದೇ! ಶಿವನ ಭಕ್ತಿ ಈ ಭುವಿಯೊಳು ಮೆರೆಯಲ್ಕೆ ಅವತರಿಸಿದ ಬಸವೇಶ ಭಕ್ತಿ–ಯುಕ್ತಿಯನು ದಯಪಾಲಿಸಯ್ಯ; ಎಂದೆಂದೂ ನೀನೆ ತಾಯಿ ತಂದೆ ಗುರುಬಸವ, ಆಶಪಾಶದಿ ಘಾಸಿಯಾಗುತಿಹೆ ಗುರು ಬಸವ, ನಿಜಸುಖವನಿತ್ತು ಬದುಕಿಸಯ್ ಗುರುಬಸವ" ಎಂದು ಬಗೆ ಭಾವಗಳು ತುಂಬಿದ ಘನಮಠರು ಬಸವನಲ್ಲಿ ಭಕ್ತಿಯನ್ನು ಅರ್ಥಿಯಿಂದ ಬೇಡಿ ಆತನ ಕಾರುಣ್ಯವನ್ನು ಹಡೆದು, "ಇನ್ನಂಜೆ ಭವಭಯಕ್ಕಂಜೆ ನಾಂ ಗುರುಬಸವಾ" ಎಂಬ ಧೈರ್ಯದಿಂದೆ ಭವಸಾಗರವನ್ನು ದಾಟುತ್ತಿ ಅಭವನೆಡೆಗೆ ನಡೆದಿದ್ದರು.

"ನಗುರೋರಧಿಕ"ವೆಂದು ಶೃತಿ ಸಾರುತಿಹುದಾಗಿ ಪರಮ ಶ್ರೀ ಗುರುವಿನ ಧ್ಯಾನವನ್ನು ಮಾಡಿ ಆತನಿಂದ ಭಕ್ತಿ-ಜ್ಞಾನ-ಸದ್ವಿರತಿ ಸಂಪದವನ್ನೂ ಪಡೆಯಲು ಘನಮಠರು ಹವಣಿಸುತ್ತಿದ್ದರು. "ಎನ್ನ ತನು-ಮನ ನಿಮ್ಮದೆನಿಸಿ ಪರಮಸುಖಶರಧಿಯೊಳಿಹುದನೆ ಬೇಗ ಕರುಣಿಸೋ ಗುರುವೇ ನೀ ಬೇಗ ಕರುಣಿಸೋ" ಎಂದು ಬೇಡಿ ಗುರು ಕರುಣವನ್ನು ಪಡೆದು, ಪರಮಸುಖ ಸಾಧನವಾದ ಭಕ್ತಿ - ಜ್ಞಾನ - ವೈರಾಗ್ಯಗಳನ್ನು ಅಳವಡಿಸಿಕೊಂಡರು. ಪಾಪರೂಪವಾದ ವಿಷಯದಕಡೆ ಮನ ಹರಿದಾಗ ಪಾಪದ ಭಯದಿಂದೆ ಘನಮಠರು ಎಷ್ಟೋ ಸಲ ಶಿವನಿಗೂ ಮೊರೆಯಿಟ್ಟುದುಂಟು.

"ನೋಡಬಾರದೇನೋ ಶಿವನೇ ನೋಡಬಾರದೇನೋ
ನೋಡಬಾರದೀ ರೂಢಿಯೊಳಗೆ ನಾಂ
ಬೇಡಿಕೊಳ್ಳುವೆನಯ್ಯ ಕಾಡದೆ ಕರುಣದಿ ||ಪ||

ಶರಣ ಶರೀರ ಮಮ ಶರೀರಮೆಂಬ ಶೃತಿ
ಇರುವುದಿದನು ಮಮಕರಿಸಿ ಮುದದಿ ನೀ ೧
ದುರಿತ ಭಯದಿ ಹರಹರ ಎಂದುರೆ
ಮೊರೆಯಿಡುತಿರೆ ಸಾದರದಿ ಪರಮ ನೀ" ೨

ಭವವೆಂಬ ಘೋರಕಾನನದಲ್ಲಿ ತೊಳಲಿ ತೊಳಲಿ ದುರ್ಲಭವಾದ ಮಾನವ ಜನ್ಮವನ್ನು ಸುಮ್ಮನೇ ಹಾಳುಮಾಡುತ್ತಿರುವೆನಲ್ಲ ಎಂಬ ಭಾವನೆಯಿಂದ ಎದೆಯನ್ನು ಹಿಂಡಿಕೊಂಡು "ಇಂತಹ ದಾರುಣ ಸಮಯದಲ್ಲಿ ಕೈಬಿಡುವುದೇನಯ್ಯ ಹರನೇ" ಎಂದು ಸೆರಗೊಡ್ಡಿ ಶಿವನನ್ನು ಬೇಡುತ್ತಿದ್ದರು.

"ಬಿಡದಿರ್ಕೆ ಎನ್ನ ಲಿಂಗೇಶ ನೀಂ ಬಿಡದಿರ್ಕೆ ಎನ್ನ ನೀಂ
ನುಡುರಾಜಧರ ಭವದಡವಿಯೊಳ್ ಸಿಲ್ಕಿ ಬಾಯ್-
ಬಿಡುವೆನೆನ್ನಯ ಕೈಯ"

ಎಂದು ಭವದಡವಿಯಲ್ಲಿ ದಾರಿತಪ್ಪಿಗಾರಾದ ಘನಮಠರು ಮತ್ತೊಮ್ಮೆ ಶಿವನ ಕೈಹಿಡಿದು ಶರಣಪದದಲ್ಲಿ ಮುಂದಡಿಯಿಡುತ್ತಿದ್ದರು.

ಅಂದಿನ ಘನಮಠರ ದಿನಚರಿಯೆಂದರೆ ನಿತ್ಯ ಶಿವಾರ್ಚನೆ, ಜಂಗಮ ದಾಸೋಹ, ಬೇರೆಬೇರೆ ಶಾಸ್ತ್ರಗಳ ವ್ಯಾಸಂಗ, ಮತ್ತು ಆದ್ಯರ ಅಮಲ ವಚನದ ಆಳವಾದ ಅಭ್ಯಾಸ. ವಚನಶಾಸ್ತ್ರದಲ್ಲಿ ತುಂಬಿತುಳುಕುತ್ತಿರುವ ಅನುಭವಾಮೃತವನ್ನು ಮನವಾರೆ ಸವಿದ ಘನಮಠರಲ್ಲಿ ವಿಷಯ ಸಂತಾಪ ದಿಂದ ಬಳಲುತ್ತಿರುವ ಮಾನವರಿಗೂ ಆ ಅನುಭವ ಸುಧೆಯನ್ನು ನೀಡಿ ಧನ್ಯರಾಗಬೇಕೆಂಬ ಬಯಕೆ ಮೊಳೆತು ಬಲಿತು ಬಲವಾಗತೊಡಗಿತು.

"That indivisual perfection and liberation are not the whole sense of God's intention"* *(Sri Aurobindo)* ಎಂದು ಪರಮ ಯೋಗೀಶ್ವರರಾದ ಅರವಿಂದರು ಹೇಳುವಂತೆ "ವೈಯಕ್ತಿಕ ಪರಿಪೂರ್ಣತೆ ಮತ್ತು ಮೋಕ್ಷವು ಪರಮಾ

---

* Arya Vol. P. 182

ತ್ಮನ ಇಚ್ಛೆಯ ಪೂರ್ಣ ಭಾವವಲ್ಲ." ನಿಜಸುಖವನ್ನು ಏಕಾಂತಿಕವಾಗಿ ಅನುಭವಿಸುತ್ತಿದ್ದ ದಿವ್ಯವ್ಯಕ್ತಿಗೂ ನಿತ್ಯತೃಪ್ತಿಯೆಂಬುದಿಲ್ಲ.

" ಶಿವಯೋಗಿನಿ ಸಂತೃಪ್ತೇ............
-ವಿಶ್ವಂ ತೃಪ್ತಿಮೇತಿ ಚರಾಚರಂ "

ಎಂದು ದಿವ್ಯವಾಣಿಯು ಹೇಳುವಂತೆ ಚರಾಚರವೆಲ್ಲ ತೃಪ್ತಿವಡೆವುದೇ ನಿಜ ತೃಪ್ತಿ. " ಅಖಿಲ ಜೀವಾತ್ಮರಿಗೆ ಲೇಸನೇ ಬಯಸುವ " ಕೂಡಲಸಂಗನ ಶರಣರಾದ ಬಸವಣ್ಣನವರೂ, ರೇವಣಸಿದ್ಧೇಶ್ವರ, ಅಲ್ಲಮಪ್ರಭುದೇವರೂ, ತೋಂಟದಾರ್ಯ ಮೊದಲಾದ ವಿರತರೂ, ಇದೇ ದಿವ್ಯ ತತ್ವವನ್ನು ಮುಂದಿಟ್ಟುಕೊಂಡು ವೀರಶೈವಮತ ಪ್ರಚಾರಕ್ಕೆ ತೊಡಗಿದ್ದರು. ಜಗದುದ್ಧಾರವನ್ನು ಬಗೆಯದ ಭಾವವು ಶಿವಭಾವವೂ ಅಲ್ಲ. ಈ ತತ್ವವನ್ನು ಅರವಿಂದಯೋಗೀಶ್ವರರೂ ತಮ್ಮ ಮತ್ತೊಂದು ಸುಧಾಸೂಕ್ತಿಯಲ್ಲಿ ಹೀಗೆ ಹೇಳಿದ್ದಾರೆ;

"The progressive mind is seen at its noblest when it strives to elevate the whole race to its level, whether by sowing broad-cast the image of its own thought or by changing the material life of the race into fresh forms religious, intelectual, social or political, intended to represent more nearly that ideal of truth, beauty, justice, righteousness with which the man's own soul is illumined."† *(Sri Aurobindo)*

ತಿಳಿದು ಹೊಳೆದ, ಕಂಡು ಉಂಡ ಜ್ಞಾನಾನುಭವ ಪ್ರಭಾಸುಧೆಯನ್ನು ಸಮಾಜಕ್ಕೆಲ್ಲಾ ನೀಡಬೇಕೆಂದು ಅವಿರಳಾತ್ಮಕರಾದ ನಾಗಭೂಷಣ ಶಿವ

† Arya Vol. 2 P. 178.

ಯೋಗಿಗಳು "ಅಖಿಳ ಜಂಜಡವ ಪರಿದೊತ್ತಿ ಭುವನದೊಳು ಭಕ್ತರೆಲ್ಲೆಲ್ಲಿರ್ಪರಲ್ಲಲ್ಲಿ ಸಂಚರಿಸ "§ ತೊಡಗಿದರು. ‡

ಎತ್ತರವಾದ ನಿಲವು, ದೃಢವಾದ ಕಾಯ, ತೇಜಃಪುಂಜವಾಗಿ ಶಿವಭಾವವನ್ನೇ ಸೂಸುವ ಮುಖ. ತ್ರಿಪುಂಡ್ರಧಾರಿಗಳಾಗಿ ಬೆನ್ನಲ್ಲಿ ಬಸವಣ್ಣನವರ ವಚನಗ್ರಂಥವನ್ನು ಕಟ್ಟಿಕೊಂಡು "ಬಸವಾದಿ ಪ್ರಮಥರಾಚಾರವಿಡಿದು ಭವದೂರನಾಗಿ ಪಾರಮಾರ್ಥದಲ್ಲಿರುವವಗೆ ಆರಗೊಡವೆ ಇನ್ನೇನು" ಎಂದು ಬಸವ ಭಕ್ತಿಯನ್ನು ಜಗತ್ತಿಗೆ ಬೀರಲು "ಭಕ್ತಿ ಜ್ಞಾನ ವೈರಾಗ್ಯಯುತನಾಗಿ" ಬಸವ ಭಕ್ತಿಯು ತನಗೆ ಪ್ರಾಣಪ್ರದವಾಗಿರ್ದು, ಬಸವನಾಮಾಮೃತವ ಸವಿದುಂಡು ಬೆಳೆದ ಘನಮಠರು ಬಸವ ಗುರು ಸಕಲ ಲೋಕಕ್ಕೆಂಬುದನು ಅರಿದು, ವನಿತಾದಿ ವಿಷಯದೊಳುಳ್ಳ ಮೋಹವನು ತೊರೆದು, ತಮ್ಮೂರನ್ನು ಬಿಟ್ಟು ಬಸವ ಭಕ್ತಿಯ ಮೇಲ್ಮೆಯನ್ನು ಕೊಂಡಾಡುತ್ತ ಸಂಚಾರಮಾಡತೊಡಗಿದರು. ಹೀಗೆ ಹೆಂಡರು ಮಕ್ಕಳು ಮನೆಮಾರನ್ನು ಬಿಟ್ಟು ವಿರಾಗಿಯಾಗಿ ಸಂಚರಿಸುವಾಗ ಘನಮಠರಿಗೆ ಸ್ತುತಿಯೊಡನೆ ನಿಂದೆಗಳೂ ಬಂದಿರಬಹುದು. ಆದರೆ ಅಲ್ಲಮಪ್ರಭು ಮೊದಲಾದವರಂತೆ ಘನಮಠರು ಲೋಕದ ಸ್ತುತಿ ನಿಂದೆಗೆ ತಮ್ಮ ಮನವನ್ನು ಮಾರುಗೊಡಲಿಲ್ಲ. ಪ್ರಭುವು "ಲೋಕದ ಸ್ತುತಿ ನಿಂದೆಗೆ ನೊಂದೆನಾದರೆ ಅಂಗೈಯಲ್ಲಿದ್ದ ಗುಹೇಶ್ವರ ಲಿಂಗಕ್ಕೆ ದೂರ" ಎಂದು ಪ್ರತಿಜ್ಞೆಗೈದಂತೆ ಘನಮಠರೂ

"ದೂಷಣೆಮಾಡಲದೊಂದೇ ಜನರತಿ
ಭೂಷಣೆಮಾಡಲದೊಂದೇ,
ಈಷಣತ್ರಯದಾ ದೋಷವಳಿದು ನಿರ್-
ದೋಷಿಯಾದ ಪರದೇಶಿಗೆ ಜಗದೊಳು"

---

§ ಕೃ. ಜ್ಞಾ. ಪ್ರ. ಪುಟ ೩೫೯.

‡ ಮನೆಯನ್ನು ಬಿಟ್ಟಾಗ ಘನಮಠರ ವಯಸ್ಸು ೨೧. ಇಷ್ಟರೊಳಗೆ ಅವರ ಪೂರ್ವಾಶ್ರಯದ ತಂದೆ-ತಾಯಿಗಳು ಶಿವೈಕ್ಯರಾಗಿದ್ದರೆಂದೂ, ಮನವಿಲ್ಲದ ಮನದಿಂದ ಲಗ್ನವಾಗಿ ಸಂಸಾರಮಾಡಿದ ಹೆಂಡತಿಯ ಹೊಟ್ಟೆಯಲ್ಲಿ ಒಂದು ಹೆಣ್ಣುಕೂಸು ಹುಟ್ಟಿತ್ತೆಂದೂ ಘನಮಠರ ಪುರಾಣವು ತಿಳಿಸುತ್ತದೆ.

ಎಂಬ ಸ್ಥಿತಪ್ರಜ್ಞೆಯಿಂದ ಜನಕಂಜಿ ನಡೆಯದೆ ಮನದೊಳು ಮನೆಮಾಡಿ ಕೊಂಡಿರುವ ಚಿನುಮಯ ಶಿವನಿಗಂಜುತ್ತೆ, ಅನೇಕ ಕಡೆ ಸಂಚಾರ ಮಾಡಿದರು.

" ಶ್ರೀಕಂಠಸಮಯಾಬ್ಧಿಕೋಕನದ ಪ್ರಿಯ " ನಾದ ಬಸವಣ್ಣನ ವರ ದಿವ್ಯಜೀವನವು ಅವರ ಬಗೆ ಭಾವವನ್ನೆಲ್ಲ ಇಕ್ಕುಳಿಗೊಂಡುದರಿಂದ ಕಲ್ಯಾಣ ಮತ್ತು ಅದರ ಸೀಮೆಯ ಸುತ್ತ ಮುತ್ತಣ ಪ್ರದೇಶವಾದ ನೈಜಾಂಕರ್ನಾಟಕ, ವಿಜಾಪುರ ಜಿಲ್ಹೆ, ರಾಯಚೂರು ಪ್ರಾಂತ ಮೊದ ಲಾದಕಡೆ ಅವರು ಹೆಚ್ಚಾಗಿ ಸಂಚರಿಸುತ್ತಿದ್ದರು. ಸಿದ್ಧರಾಮಪ್ಪ ಕುನ್ನಾಳ ಇವರು ತಮ್ಮ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ತಿಳಿಸುವಂತೆ ಘನಮಠಾರ್ಯರು "ಕಲ್ಯಾಣಮಂಡಲದ ನಾಲ್ವತ್ತೆಂಟು ಗಾವುದ ವಿಸ್ತೀ ರ್ಣವಾಗಿ ಪೂರ್ವ ಪಶ್ಚಿಮ ಸಮುದ್ರದವರೆಗೂ ಭಕ್ತಜನೋಪಕಾರಾರ್ಥ ವಾಗಿ ಸದ್ಬೋಧೆಯಂ ಬೋಧಿಸುತ್ತ ಸ್ವತಂತ್ರದಿಂ ಚರಿಸಿ "* ದರು.

ಗಾನಕಲಾ ಕುಶಲರಾದ ಘನಮಠರು ಕವಿತೆ, ಪದಪದ್ಯ, ಆದ್ಯರ ವಚನಗಳಿಂದ ಶಿವನ ಮಹಿಮೆಯನ್ನು ಭಕ್ತರಿಗೆ ತಿಳಿಸಿಹೇಳಿ, ಶಿವಾಗಮ ಗಳಲ್ಲಿ ವರ್ಣಿತವಾದ ಶಿವಭಕ್ತಿ ಸಾರವನ್ನೂ ಬಸವಾದಿಪ್ರಮಥರ ಪುರಾಣ ಗಳಲ್ಲಿ ಪ್ರತಿಪಾದಿತವಾಗಿರುವ ಶರಣರ ದಿವ್ಯಜೀವನವನ್ನೂ "ಹಗಲಿರಳು ಹೊತ್ತು ಸಾಲದಾಗಿ ಬೋಧಿಸುತ್ತ ಪರಿಪೂರ್ಣಜ್ಞಾನ ಜಂಗಮಲೀಲೆ ಯಿಂದ ಅನೇಕ ಕಡೆ ಸಂಚರಿಸುವಾಗ ವಿಷಯ ವ್ಯಾಮೋಹವೆಂಬ ನಿದ್ರೆ ಯಲ್ಲಿ ಮರೆದು ಒರಗಿರುವ ಸಮಾಜವನ್ನು ತಮ್ಮ ಮಧುರ ಗಂಭೀರವಾಣಿ ಯಿಂದ ಬಡಿದೆಬ್ಬಿಸಿದರು. " ಈ ಶಿವಸಮಯ, ಈ ಮಾನುಷಜನ್ಮವಿ ನ್ನೇಸುಕಾಲಕೆ ಸಿಗದು " ಎಂದು ಸಾರಿಹೇಳಿ;

" ಏಳಿ ಮನುಜರಿರಾ ಶಿವಲಿಂಗಪೂಜೆಯ ಮಾಳ್ಪ
ವೇಳೆಯಾಯಿತು ಮೋಹನಿದ್ರೆಯದು ಸಾಕಿನ್ನು
................ಶಿವಲಿಂಗಪೂಜೆಯ ಮಾಳ್ಪರಿಗೆ ಭವಭಯವಿಲ್ಲ

* ಕೃಷಿಜ್ಞಾನ ಪ್ರದೀಪಿಕೆ ಪುಟ ೩೬೦.

ಶಿವಲಿಂಗಪೂಜೆಯ ಮಾಳ್ಪರಿಗೆ ಮೃತ್ಯುಗಳಿಲ್ಲ
ಶಿವಲೀಂಗಪೂಜೆಯ ಮಾಳ್ಪರಿಗೆ ದಾರಿದ್ರ್ಯ ದೋಷಂಗಳು
— ಮುನ್ನಿಲ್ಲವೈ

ಶಿವಲಿಂಗ ಪೂಜೆಮಾಳ್ಪ ಶ್ವಪಚನಾದೊಡಂ-
ತವನೆ ಮುನಿ ಮುಖ್ಯ ಶಿವಲಿಂಗಪೂಜೆಯ ಮಾಡದವನೆ
ಭವಿ ಚಾಂಡಾಲನೆಂದು ಶೃತಿ ಶಾಸ್ತ್ರಾಗಮ ಪುರಾಣತತಿ ಪೊಗಳಲು
ದುರಿತ ಶೇಷದ ಫಲದಿ ಸಚರಾಚರಂಗಳೊಳ್
ಪರಿಭವಿಸುತಲ್ಲಿ ಕಡಲೇಳನಿತ ಮೊಲೆವಾಲ
ಪರಿದುಂಡು ಬರಲು ಬಹುಪುಣ್ಯ ವಶದಿಂದೆ ನರಜನ್ಮದಿ ವಿವೇಕಾ
ದೊರೆವುದದರಿಂದ ಹರಸಮಯ ಭಕ್ತಿಜ್ಞಾನ
ದಿರವಪ್ಪುದೀಗ ಪರಶಿವಲಿಂಗ ಪೂಜೆಯಂ
ಭರದಿ ಮಾಡೆಚ್ಚರದಿ ಕನಸಿನೊಳಗಣ ದುಃಖ
ವಿರದೆ ಪೋಪಂದವಪುದು

ದಿನವಿಂದೆ ಶಿವನ ಕರುಣವಂ ಪಡೆವಂಗೆ
ದಿನವಿಂದೆ ದುಷ್ಕರ್ಮ ಪಾಶಮಂ ಕಡಿವಂಗೆ
ದಿನವಿಂದೆ ಸದ್ಭಕ್ತಿ ಸಾಮ್ರಾಜ್ಯವಾಳ್ವ ಸುವ್ರತವ ನಡೆವಿಡಿವವಂಗೆ
ದಿನವಿಂದೆ ಹಣೆಯ ದುರ್ಲಿಖಿತಮಂ ತೊಡೆವಂಗೆ
ದಿನವಿಂದೆ ಚಾಂಚಲ್ಯಮನವ ನೆರೆ ತಡೆವಂಗೆ
ದಿನವಿಂದೆ ತನ್ನತಾನರಿದು ಭೋಂಕನೆ ಪಾರಮಾರ್ಥದಿಂ
ನಡೆವವಂಗೆ

ಎಂದು ಮಾನವಜನ್ಮದ ಮಹಿಮೆಯೊಡನೆ ಅದರ ಚರಮಧ್ಯೇಯ, ಆಧ್ಯೇಯವನ್ನು ಸಾಧಿಸಲು ಅತ್ಯವಶ್ಯವಾದ ಧರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮೊದಲಾದುವುಗಳ ಮಹಿಮೆಯನ್ನು ಹಾಡಿ ಹಾಡಿ ಜನತೆಯ ಭಾವ-ಬುದ್ಧಿಗಳನ್ನು ದಿವ್ಯದತ್ತ ಹೊರಳಿಸಲು ಹವಣಿಸಿದರು.

ಪುರಾಣ ಹೇಳಿ, ವಚನ ಪ್ರವಚನಮಾಡಿ, ಪದ ಪದ್ಯಗಳನ್ನು ಮಾಡಿ ಹಾಡಿ, ಹಗಲಿರಳು ಪುರುಸೊತ್ತಿಲ್ಲದೆ ಸಮಾಜದಲ್ಲಿ ಭಕ್ತಿಬೀಜವನ್ನು ಬಿತ್ತಲು ಹೆಣಗಿದರು. ಮರುಭೂಮಿಯಲ್ಲಿ ಬಿದ್ದ ಬೀಜದಂತೆ ಆ

ಭಕ್ತಿಬೀಜವು ಫಲಿಸದಿರಲು ಘನಮಠ ಶಿವಯೋಗಿಗಳ ಹೃದಯವು ಎಷ್ಟೋ ಸಲ ನೊಂದುಕೊಂಡಂತೆ ತೋರುತ್ತದೆ. ಆಗ ಅವರು ನಿರಾಶೆಗೊಂಡು "ನರರಿಗೆಂತಹುದಯ್ಯ ಹರಭಕ್ತಿ? ಬಸವಾಂಶಗಲ್ಲದೆ, ನರರಿಗೆಂತಹುದಯ್ಯ" ಎಂದುಕೊಂಡು "ನೆರೆ ಘನಮಠೇಶನಿಂದು ಜಂಗಮ ರೂಪವ ಧರಿಸಿ ಬಂದವನೆಂದು ಅರಿಯದೆ, ಕಸವಿರುವ ಸ್ಥಾನದಿ ಕೆಟ್ಟ ಕುರುಡನದಾಗಿ ಪೋದ ನರನ ತೆರನಾದ ಈ ಮನುಜರಿಗೆ ಉಂಟೇ ಭಕುತಿ ಮುಕುತಿ" ಎಂದು ಕಂಡುದನ್ನು ಕಂಡಂತೆ ನಿಷ್ಠುರವಾಗಿ ಆಡಿಯೂ ತೋರಿಸಿದರು. ಕೆಲಸಲ ಮಗುವಿನಮೇಲೆ ರೇಗಿದ ತಂದೆಯಂತೆ ಸಿಟ್ಟಿಗೆದ್ದು ಗಜರಿಗರ್ಜಿಸಿ "ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೋ ಈ ಸೂಳೆಮಕ್ಕಳಿಗೆಲ್ಲಿ ಭಕ್ತಿ ಎಲ್ಲಿ ಮುಕ್ತಿಯದೋ?" ಎಂದು ಬೈದು ಭಂಗಿಸಿದ್ದೂ ಉಂಟು. ಸಿದ್ಧರಾಮಪ್ಪ ಕುನ್ನಾಳ ಇವರೂ ಈ ಮಾತನ್ನು ತಮ್ಮ ಗ್ರಂಥದಲ್ಲಿ ಮನಂಬುಗುವ ರೀತಿಯಿಂದ ಹೇಳಿದ್ದಾರೆ.† "ಮಲಮಯವಾದ ಹೊಲೆ ಕುಲಮದ" ವಳಿಯದೆ ನಿಜಭಕ್ತರಾಗದಿದ್ದವರಲ್ಲಿ ಪ್ರಸಾದವನ್ನು ಕೊಳ್ಳದೆ ಸ್ವಯಂಪಾಕ ಪ್ರಸಾದವನ್ನು ಸ್ವೀಕರಿಸಿ ಒಂದು ತರಹದ ಸತ್ಯಾಗ್ರಹವನ್ನು ಘನಮಠರು ಆಚರಿಸಿದುದುಂಟು. ತಂದೆಯ ಮುನಿಸಿನ ಮರೆಯಲ್ಲಿದ್ದ ಮೋಹದಂತೆ ಇಂತಹ ನಡೆ-ನುಡಿಯಲ್ಲಿಯೂ ಘನಮಠರಿಗೆ ಜನತೆಯಲ್ಲಿದ್ದ ಸಹಜಪ್ರೇಮವು ಸ್ಪಷ್ಟವಾಗಿ ತೋರುತ್ತದೆ.

ಹೀಗೆ ಶಿವಭಕ್ತಿ, ಶಿವಾನುಭವಗಳ ಪ್ರಸಾರವನ್ನು ಮಾಡುವಲ್ಲಿ ಎಡೆತಡೆಗಳು ಬಂದಾಗ ಘನಮಠರು ತಮ್ಮಲ್ಲಿದ್ದ ನಿರುಪಮವಾದ ಬಸವಭಕ್ತಿಯ ಬಲದಿಂದ ಅವನ್ನೆಲ್ಲ ದೂರುಮಾಡಿದಂತೆ ತೋರುತ್ತದೆ. ಬಿಜಾಪುರ ಜಿಲ್ಲೆಯಲ್ಲಿರುವ ಕುಂಟೋಜಿಯಲ್ಲಿ ಘನಮಠರು ಅರವತ್ತು ಮೂರು ಪುರಾತನರ ಪುರಾಣವನ್ನು ತಾವೇ ಆನಂದದಿಂದ ನೆನೆನೆನೆದು ಹೇಳುತ್ತಿದ್ದರು. ಆ ಪುರಾತನರ ನೆನಹಿಗೆ ಅರವತ್ತುಮೂರು ಮಂಟಪಗಳನ್ನೂ ರಚಿಸಲು ತೊಡಗಿದರು. ಮಂಟಪದ ರಚನೆಗೆ ಬೇಕಾದ ಹಣವೆಲ್ಲಿ ಎಂದು ಅನೇಕರು ಶಂಕಿಸಿದಾಗ "ಭಕ್ತಂಗೆ ಬಡತನವೇ" ಎಂದು

† ಕೃಷಿಜ್ಞಾನ ಪ್ರದೀಪಿಕೆ ಪುಟ ೩೩೨.

ಹೇಳಿ ಮಂಟಪಗಳನ್ನು ಪೂರೈಸಿದರು. ಇದರಂತೆ ಕಲಬುರ್ಗಿ ಜಿಲ್ಲೆಯಲ್ಲಿರುವ ಚಿಂಚೋಳಿ ಎಂಬ ಗ್ರಾಮದಲ್ಲಿ ಬಸವ ಪುರಾಣ ಸಮಾಪ್ತಿಯಾಗಿ ಪುರಾಣದ ಮೆರವಣಿಗೆಯ ಕಾಲಕ್ಕೆ ಪರಮತೀಯರಿಂದ ಅಡ್ಡಿ-ಆತಂಕಗಳು ಬಂದಾಗ ನಿಂದಲ್ಲಿಯೇ "ಬಸವಪೂರ್ಣಸಶಿವ" ಎಂಬ ಹನ್ನೊಂದು ನುಡಿಯ ಬಸವಸ್ತೋತ್ರವನ್ನು ರಚಿಸಿ, ಬಂದ ಕಂಟಕವನ್ನು ನಿವಾರಿಸಿದರು. ಘನಮಠರ ಭಕ್ತಿಯ ಸ್ಥೈರ್ಯಕ್ಕೆ ಪರಮತೀಯರೂ ತಲೆದೂಗಿ ಎಲ್ಲರೂ ಸೇರಿ ಮೆರವಣಿಗೆಯ ಮಂಗಲಕಾರ್ಯವನ್ನು ಸಾಂಗಗೊಳಿಸಿದರೆಂದು ಇಂದಿಗೂ ಬಲ್ಲವರು ಹೇಳುತ್ತಾರೆ.

ಘನಮಠರು ಸಂಚಾರ ಮಾಡುತ್ತ ಮಕ್ತಲ್ ತಾಲೂಕ ನೀರಡಗುಂಭಕ್ಕೆ ಬಂದು, ಅಲ್ಲಿ ಶಾಂತವೀರಗೌಡರಲ್ಲಿದ್ದುಕೊಂಡು ಶಿವಾನುಭವವನ್ನು ಬೋಧಿಸಿದರು. ಮುಂದೆ ಯಾದಗಿರಿ ತಾಲೂಕ ಬಾಡದಲ್ಲಿರುವಾಗ ತೋರ್ವಡೆ ಮಠಾಧಿಕಾರಕ್ಕೆ ವಳಪಟ್ಟ ಘನಲಿಂಗ ಚರವರ್ಯ ಚೆನ್ನವೀರ ಸ್ವಾಮಿಗಳಿಂದ ಅರವತ್ತುಮೂರು ಪುರಾತನರ ಪುರಾಣವನ್ನು ಹೇಳಿಸಿದರು. ರಾಯಚೂರು ತಾಲೂಕ ಗೂಗಲ್ ಎಂಬ ಗ್ರಾಮದ ಬಳಿಯಲ್ಲಿ ಕೃಷ್ಣಾ ನದೀತೀರದಲ್ಲಿರುವ ಪ್ರಭುದೇವರ ದೇವಾಲಯದಲ್ಲಿ ಭಕ್ತಮಂಡಳಿಗೆ ಶಿವಭಕ್ತಿಯ ಮಹಿಮೆಯನ್ನು ಬಗೆದುಂಬಿ ಬೋಧಿಸಿದರು. ಪ್ರಭುದೇವರ ಸ್ತೋತ್ರಪದ್ಯಗಳನ್ನು ಘನಮಠರು ಇಲ್ಲಿಯೇ ರಚಿಸಿರಬಹುದು. ಏಕಂದರೆ ಇವರ ಪದಪದ್ಯಗಳೆಲ್ಲ ಪ್ರಸಂಗಸ್ಫೂರ್ತವಾಗಿ ಹಾಡಿದವೆಂಬಂತೆ ತೋರುತ್ತದೆ. ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರನ ದರುಶನಕ್ಕೆ ಹೋದಾಗ ಗುಡಿಯ ಪೂಜಾರಿಗಳು ಯಾವನೋ ಒಬ್ಬ ಬೈರಾಗಿಯೆಂದು ಬಗೆದು ಗುಡಿಯ ಕದ ತೆರೆಯದಿರಲು ಘನಮಠರು ಗುಡಿಯ ಮುಂದೇ ನಿಂತು ನಾಲ್ವತ್ತೆರಡು ನುಡಿಯ ಪದ್ಯವನ್ನು ಹಾಡಿ, ಸಿದ್ಧರಾಮನನ್ನು ಒಲಿಸಿಕೊಂಡರೆಂದು ಪುರಾಣವು ಹೇಳುತ್ತದೆ.

"ಸಿದ್ಧರಾಮ ಹೋ ! ನಿಜಗುರು ಸಿದ್ಧರಾಮ ಹೋ !" ಎಂಬ ನಾಲ್ವತ್ತೊಂದು ನುಡಿಯ ಭಜನೆಯ ಸ್ತೋತ್ರವೇ ಪುರಾಣಕಾರರು ಹೇಳುವ ಪದ್ಯಗಳಿದ್ದಿರಬಹುದು.

ವಚನಶಾಸ್ತ್ರದಲ್ಲಿ ಘನಮಠರಿಗೆ ನಿಸ್ಸೀಮವಾದ ಪ್ರೇಮ. ಶರಣರ ವಚನಗಳೇ ಅವರ ಜೀವನಸೂತ್ರ. ಒಮ್ಮೆ ಘನಮಠರು ದೇವದುರ್ಗ ತಾಲೂಕ ಜಾಲೀಹಾಳಿಯಲ್ಲಿದ್ದಾಗ, ಅಲ್ಲಿದ್ದ ವೀರಭದ್ರಶಾಸ್ತ್ರಿಗಳೆಂಬುವರು ವಚನಶಾಸ್ತ್ರಗಳ ನಿಂದೆಯನ್ನು ಮಾಡಲು, ಅವರಿಗೆ ಒಂದು ರೋಗ ಉತ್ಪನ್ನವಾಯಿತಂತೆ. ಆ ರೋಗನಿವಾರಣೆಗೆ "ಪುರಾತನರ ಪುರಾಣವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿ ಬಾಡದ ಮೂಲೆಯ ಮಠಾಧ್ಯಕ್ಷರಿಗೆ ಸಮರ್ಪಿಸಲು" ಘನಮಠರೇ ತಿಳಿಸಲು, ಅವರ ಆಜ್ಞೆಯಂತೆ ಪುರಾಣ ರಚಿಸಿ ಶಾಸ್ತ್ರಿಗಳು ರೋಗಮುಕ್ತರಾದರೆಂದು ಅಲ್ಲಿಯ ಜನರಲ್ಲಿ ವಾಡಿಕೆ ಇದೆ.

ಘನಮಠರು ಶ್ರೀಶೈಲ, ರಾಮೇಶ್ವರ, ಮೈಸೂರು ‡ ಸೀಮೆಯ ಬಹುಭಾಗದಲ್ಲಿ ಸಂಚಾರಮಾಡಿದಂತೆ ತಿಳಿಯುತ್ತದೆ. ಅವರು ರಚಿಸಿದ

---

‡ ಇಲ್ಲಿ ನೆನಪಿಡುವುದು ಒಂದು ಸಂಗತಿ. ಕೃಷಿಜ್ಞಾನ ಪ್ರದೀಪಿಕೆಯ ಸಂಪಾದಕರಾದ ರಾ. ಬ. ಫ. ಗು. ಹಳಕಟ್ಟಿಯವರು ತಮ್ಮ ಪ್ರಸ್ತಾವನೆಯಲ್ಲಿ "ಸ್ವಾಮಿಗಳವರು ಒಮ್ಮೆ ಮೈಸೂರು ಸೀಮೆಯಲ್ಲಿ ಬರಿದಾಗ ಮುಮ್ಮಡಿ ಕೃಷ್ಣರಾಜರು (ಕ್ರಿ. ಶ. ೧೭೯೪ ರಿಂದ ೧೮೬೮) ಅವರನ್ನು ಕಾಣಲು ಬಯಸಿದರು. ಆಗ ಸ್ವಾಮಿಗಳವರು ರಾಜರಿಗೆ ಕೆಳಗೆ ಕಾಣಿಸಿದಂತೆ ಷಟ್ಪದಿಗಳನ್ನು ರಚಿಸಿ ಕಳುಹಿಸಿದರು" ಎಂದು ಹೇಳಿದ್ದಾರೆ. ಆದರೆ ಆ ಷಟ್ಪದಿಗಳು ಘನಮಠರಿಂದ ರಚಿತವಾದವುಗಳಲ್ಲ. ಬಾಲಲೀಲಾ ಮಹಾಂತಸ್ವಾಮಿಗಳಿಂದ ರಚಿತವಾದುವೆಂದು ಪ್ರೊ. ಶಿ. ಶಿ. ಬಸವನಾಳರು ಕೈವಲ್ಯ ದರ್ಪಣದ ಪ್ರಸ್ತಾವನೆಯಲ್ಲಿ ಪ್ರತಿಪಾದಿಸುವುದು ಸಾಧುವೆಂದೇ ಹೇಳಬೇಕು. ಆದರೆ ಪ್ರೊ. ಶಿ. ಶಿ. ಬಸವನಾಳರು ಅದೇ ಪ್ರಸ್ತಾವನೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಉತ್ತರಾರ್ಧದಲ್ಲಿ ಬಾಲಲೀಲಾ ಮಹಾಂತಸ್ವಾಮಿಗಳಂತೆ ಘನಮಠ ಶಿವಯೋಗಿಗಳೂ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದರುಶನಾಶೀರ್ವಾದವಿತ್ತಿರಬಹುದೆಂದು ಊಹೆ ಮಾಡಿದ್ದಾರೆ. ಈ ಊಹೆಗೆ ಯಾವ ಆಧಾರವೂ ಇದ್ದಂತೆ ತೋರುವದಿಲ್ಲ. ಘನಮಠರ ಪದ್ಯಗಳೇ ಆಗಲಿ ಕೃಷಿಜ್ಞಾನ ಪ್ರದೀಪಿಕೆ, ಘನಮಠರ ಪುರಾಣವೇ ಆಗಲಿ ಈ ಊಹೆಗೆ ಎಳ್ಳಷ್ಟು ಅವಕಾಶವನ್ನು ಕೊಡುವುದಿಲ್ಲ. ಜನರ ವಾಡಿಕೆಯ ಬೆಂಬಲವೂ ಅದಕ್ಕಿಲ್ಲ. ಇನ್ನೊಂದು ಸೋಜಿಗದ ಮಾತೆಂದರೆ ಸಮಕಾಲೀನರಾದ ಶ್ರೀ ಬಾಲಲೀಲಾ ಮಹಾಂತಸ್ವಾಮಿಗಳಿಗೂ ಘನಮಠರಿಗೂ ಸಂದರ್ಶನವಾದಂತೆ ತೋರುವದಿಲ್ಲ.

"ಮಲ್ಲಿಕಾರ್ಜುನ ಪಂಡಿತಾರಾಧ್ಯರ ಜೋಗುಳಪದ, ತೋಂಟದ ಸಿದ್ಧ ಲಿಂಗೇಶ್ವರ ಸ್ತವನ" ಮೊದಲಾದವು ಜನರಲ್ಲಿರುವ ಪ್ರತೀತಿಗೆ ಬೆಂಬಲ ವನ್ನು ಕೊಡುತ್ತವೆ.

ಘನಮಠರಿಗೂ ಮತ್ತು ಭಕ್ತರಿಗೂ ಇದ್ದ ಸಂಬಂಧವು ಘನಮಠರ ಸಹಜಭಾವ, ಪರಿಶುದ್ಧ ಶೀಲ, ವೀರವೈರಾಗ್ಯಗಳನ್ನು ಸ್ಪಷ್ಟವಾಗಿ ಬಯ ಲಿಗೆಳೆಯುತ್ತದೆ. ಒಮ್ಮೆ ಒಬ್ಬ ಭಕ್ತನು ಒಂದು ತಂಬಿಗೆಯನ್ನು ಘನ ಮಠರಿಗೆ ದಾನವಾಗಿ ಕೊಟ್ಟನಂತೆ. ಘನಮಠರು ಅದನ್ನು ತೆಗೆದುಕೊಂಡು ನೋಡಿದಾಗ ಅದರಮೇಲೆ ಭಕ್ತನ ಹೆಸರು ಬಂದುದನ್ನು ನೋಡಿ, ಅವರು ಭಕ್ತನ "ಉಪಾಧಿಮಾಟ"ಕ್ಕೆ ಮೆಚ್ಚದೆ, "ಈ ತಂಬಿಗೆಯೆಲ್ಲಿ ಹೊರ್ಲಿ, ಮತ್ತೆ ನಿನ್ನೆಲ್ಲಿ ಹೊರ್ಲಿ" ಎಂದು ಕಡಾಖಂಡಿತವಾಗಿ ಹೇಳಿ "ಸಹಜ ಮಾಟ"ವನ್ನರಿಯದ ಆ ಭಕ್ತನಿಗೆ ತಂಬಿಗೆಯನ್ನು ತಿರಿಗಿ ಕೊಟ್ಟರಂತೆ. ಮತ್ತೊಮ್ಮೆ ಫಕೀರಪ್ಪನೆಂಬ ಒಬ್ಬ ಸೂಡಿಯ ಭಕ್ತನು ಪ್ರಸಾದಕ್ಕೆ ದಯ ಮಾಡಿಸಬೇಕೆಂದು ಬಿನ್ನವಿಸಿಕೊಂಡನಂತೆ. ಘನಮಠರು ಫಕೀರಪ್ಪನ ಮನೆಗೆ ಹೋದಾಗಲೇ ಆತನ ಹೆಸರು ಫಕೀರಪ್ಪನೆಂಬುದು ಗೊತ್ತಾಯಿ ತಂತೆ. ಶಿವಸಂಸ್ಕೃತಿಗೆ ದೂರವಾದ ಹೆಸರಿನ ಭಕ್ತನ ಮನೆಯಲ್ಲಿ ಪ್ರಸಾದ ವನ್ನೆಂದೂ ಕೊಳ್ಳಲಾಗದೆಂದು ನಿರ್ಧರವಾಗಿ ಹೇಳಿ, ಆತನ ಹೆಸರು ಬದ ಲಿಸಿ "ಶಿವಪ್ಪ"ನೆಂದು ಹೆಸರಿಡಿಸಿದರಂತೆ. ಆಗ ನಾಮಕರಣ ಸಮಾ ರಂಭವೂ ಸಾಂಗವಾಗಿ ಮುಗಿದಮೇಲೆಯೇ ಘನಮಠರು ಪ್ರಸಾದವನ್ನು ಕೊಂಡರೆಂದು ಅಲ್ಲಿಯವರು ಹೇಳುತ್ತಾರೆ. ಮತ್ತೊಬ್ಬ ಭಕ್ತನ ಮನೆಯಲ್ಲಿ ಘನಮಠರ ಲಿಂಗಪೂಜೆಯು ನಡೆದಿತ್ತು. ಇತ್ತ ಅಡುಗೆಯ ಮನೆಯಲ್ಲಿ ಎಷ್ಟು ಹೊತ್ತಾದರೂ ಕುದಿಯದ ಬೇಳೆಯನ್ನು ನೋಡಿ ಸಿಟ್ಟಿಗೆದ್ದು ಅಡು ಗೆಯವನ ಬಾಯಿ ಗೊಣಗುಡುತ್ತಿತ್ತು. "ಇವನೌನ ಬ್ಯಾಳೀನ ಕುದಿವ ಲ್ಲದು" ಎಂದು ಎರಡುಮೂರು ಸಲವೂ ಅವನ ಬಾಯಿ ಧಡಧಡಿಸಿತು. ಅವನ ಮಾತು ಘನಮಠರ ಕಿವಿಗೂ ಬಿದ್ದುವು. "ಬೈಸಿಕೊಳ್ಳುವ ಬೇಳೆ ಪ್ರಸಾದಕ್ಕೆಂದೂ ಸಲ್ಲದು" ಎಂದು ಮನೆಯವರಿಗೆ ತಿಳಿಸಿ ಆ ಬೇಳೆಯನ್ನು ತೆಗೆಸಿ ಮತ್ತೊಮ್ಮೆ ಅಡುಗೆಗೆ ಪ್ರಾರಂಭ ಮಾಡಿಸಿದರಂತೆ. ಇವೇ ಮೊದ

ಪರಮ ವೈರಾಗ್ಯಶೀಲರಾದ
ಶ್ರೀ ಘನಮಠ ಶಿವಯೋಗಿಗಳ ಗದ್ದುಗೆ

ಸಂತೇಕೆಲ್ಲೂರು.

ತಾಲೂಕ- ಲಿಂಗಸೂರು

ಜಿಲ್ಹಾ- ರಾಯಚೂರ

ಲಾದ ಸಂಗತಿಗಳಿಂದ ಘನಮಠರಿಗೆ ಲಿಂಗಪ್ರಸಾದದಲ್ಲಿ ಯಾವ ಪರಿಶುದ್ಧ ಭಾವನೆ ಇತ್ತೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಹೀಗೆ ಶಿವಭಕ್ತಿ, ಶಿವಜ್ಞಾನ, ಶಿವಾನುಭವ ಶಿವಾಚಾರಗಳ ಪ್ರಚಾರಕ್ಕಾಗಿ ಮೂವತ್ತು ಮೂವತ್ತೈದು ವರುಷಗಳವರೆಗೆ ಅವಿಶ್ರಾಂತವಾಗಿ ದುಡಿದ ಘನಮಠ ಶಿವಯೋಗಿಗಳು ಕೊನೆಗೆ ವಿಜಾಪುರ ಜಿಲ್ಲೆಯ ಕುಂಟೋಜಿ, ಇಲಕಲ್ಲ, ಅಮೀನಗಡ ಮೊದಲಾದಕಡೆ ವಾಸಮಾಡುತ್ತಿದ್ದು, ತಮ್ಮ ದಿವ್ಯಜೀವನದ ಅಂತಿಮಾವಸ್ಥೆಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನಲ್ಲಿರುವ ಸಂತೆಕೆಲೂರು ಎಂಬ ಗ್ರಾಮದಲ್ಲಿ ಬೋಳರಡ್ಡಿ ಗೌಡರ ಮನೆಯಲ್ಲಿರುತ್ತಿದ್ದರು. ಅಲ್ಲಿರುವಾಗ ನೀರಡಗುಂಭದ ಚೆನ್ನವೀರಸ್ವಾಮಿಗಳು (?) ಲಿಂಗೈಕ್ಯರಾದುದನ್ನು ಕೇಳಿ, ತಾವೂ ಲಿಂಗೈಕ್ಯರಾಗುವುದನ್ನು ಜನರಿಗೆ ತಿಳಿಸಿ, ಅಂಗಳದಲ್ಲಿ ಅಡ್ಡಾಡುವಾಗ ಏನೋ ವಿಚಾರಮಾಡಿ " ಶಿವನು ಅಲ್ಲುಂಟು ಇಲ್ಲಿಲ್ಲವೇ ? " ಎಂದು ಹೇಳಿ ಅಲ್ಲಿಯೇ ಪಾವಟಿಗೆಗಳಮೇಲೆ ಕಂಬಳಿ ಹಾಸಿ ತಮ್ಮ ಇಷ್ಟಲಿಂಗದಲ್ಲಿ ದೃಷ್ಟಿಯನ್ನಿಟ್ಟು ಶಿವಪಂಚಾಕ್ಷರಿಯನ್ನು ಉಚ್ಚರಿಸುತ್ತ ಕ್ರಿ. ಶ. ಸು. ೧೮೮೪ ರಲ್ಲಿ ಲಿಂಗೈಕ್ಯರಾದರು. *

---

* (ಅ) ಅವರು ಲಿಂಗೈಕ್ಯರಾದುದು ಕ್ರಿ. ಶ. ೧೮೪೪ ರಲ್ಲಿ ಎಂದು ರಾ. ಬ. ಫ. ಗು. ಹಳಕಟ್ಟಿಯವರು ಕೃಷಿಜ್ಞಾನಪ್ರದೀಪಿಕೆಯ ಪ್ರಸ್ತಾವನೆಯಲ್ಲಿ ಹೇಳುತ್ತಾರೆ. ಆದರೆ ಅದೇ ಗ್ರಂಥದಿಂದ ಶ್ರೀಗಳು ಶಿವೈಕ್ಯರಾದ ಬಗೆಗೆ ಏನೂ ತಿಳಿಯುವದಿಲ್ಲ. ಅವರು ಕ್ರಿ. ಶ. ೧೮೭೪ ರ ವರೆಗೆ ಜೀವಿಸಿದ್ದರೆಂದು ಕೃಷಿಜ್ಞಾನ ಪ್ರದೀಪಿಕೆಯಿಂದ ಸ್ಪಷ್ಟವಾಗಿ ತಿಳಿಯುತ್ತದೆ.

(ಆ) ಘನಮಠರು ಸಂತೆಕೆಲೂರಲ್ಲಿ ೨೧ ದಿವಸಗಳು ಇದ್ದರು. ಕೊನೆಯದಿನ ನೀರಡಗುಂಭದ ಚೆನ್ನಬಸವಸ್ವಾಮಿಗಳಿಗೂ ಅವರಿಗೂ ಶಂಕರಪ್ಪಗೌಡರ ಮನೆಯಲ್ಲಿ ಕರುಣಪ್ರಸಾದ ಪಡಕೊಳ್ಳುವ ಸಮಯದಲ್ಲಿ ವಾಗ್ವಾದ ನಡೆಯಿತು. ಘನಮಠರು ಕೊನೆಗೆ " ವಾದದ ನಿರ್ಣಯವು ಕೈಲಾಸದಲ್ಲಿಯೇ ಆಗಲಿ, ಶಂಕರಪ್ಪಗೌಡರು ಸಾಕ್ಷಿ ಹೇಳಲಿ " ಎಂದು ಹೇಳಿದೊಡನೆಯೇ ಚೆನ್ನಬಸವಸ್ವಾಮಿಗಳು ಲಿಂಗೈಕ್ಯರಾದರಂತೆ. " ಅವರು ಕೈಲಾಸಕ್ಕೆ ಹೋದರು; ನಾವೂ ಅಲ್ಲಿಗೆ ಹೋಗುವೆವು. " ಎಂದು ಹೇಳಿ ಘನಮಠರು ಶಾಲಿವಾಹನ ಶಕ ೧೮೦೩ ರ ಪುಷ್ಯ ಶು. ೪ ಬುಧವಾರ (ಕ್ರಿ.ಶ.೧೮೮೦) ಲಿಂಗೈಕ್ಯರಾದರೆಂದು ಅಲ್ಲಿಯ ಜನರಿಂದ ತಿಳಿಯುತ್ತದೆ.

ಘನಮಠರ ಗ್ರಂಥಗಳು

ಘನಮಠರು "ತತ್ವಪದ"ಗಳನ್ನು ರಚಿಸಿದುದಂತೂ ಸರಿಯೇ. ಅವುಗಳ ವಿಮರ್ಶೆಯನ್ನು ಮುಂದೆ ಹಾಕಿ, ಮೊದಲು ಕೃಷಿಜ್ಞಾನ ಪ್ರದೀಪಿಕೆಯನ್ನು ರಚಿಸಿದವರಾರು ಎಂಬುದು ವಿಚಾರಿಸತಕ್ಕ ವಿಷಯ.

ಕೃಷಿಜ್ಞಾನ ಪ್ರದೀಪಿಕೆಯ ಸಂಪಾದಕರಾದ ರಾ. ಬ. ಫ. ಗು. ಹಳಕಟ್ಟಿಯವರು ಶ್ರೀ ನಾಗಭೂಷಣ ಘನಮಠಾರ್ಯರೇ ಈ ಗ್ರಂಥವನ್ನು ಬರೆದರೆಂದು ಭಾವಿಸಿದ್ದಾರೆ. † ಕವಿಚರಿತೆಕಾರರಾದ ಪ್ರಾಕ್ತನ ವಿಮರ್ಶ ವಿಚಕ್ಷಣ ರಾ. ಬ. ಆರ್. ನರಸಿಂಹಾಚಾರ್ಯರು ÷ ಮತ್ತು ಪ್ರೊ. ಶಿ. ಶಿ. ಬಸವನಾಳ ‡ ಮೊದಲಾದವರು, ರಾ. ರಾ. ಪಿ. ಎಮ್. ದಾನಯ್ಯ

† ರಾ. ಬ. ಹಳಕಟ್ಟಿಯವರಿಗಿಂತ ಮೊದಲು ರಾ. ರಾ. ಪಿ. ಎಮ್. ದಾನಯ್ಯ ಬಿಜಾಸ್ಪುರ (?) (ಬಿಜಾಪುರ?) ಮಾಸ್ತರ ಕಚೇಗುಂಟಿ ಇವರು ೧೯೧೭ರಲ್ಲಿ ಕೃ. ಜ್ಞಾ. ಪ್ರದೀಪಿಕೆಯನ್ನು ಪ್ರಕಟಿಸಿದುದಾಗಿ ರಾ. ಬ. ಹಳಕಟ್ಟಿಯವರು ತಿಳಿಸುತ್ತಾರೆ. ಆ ಪ್ರತಿ ನಮಗೆ ದೊರೆಯಲಿಲ್ಲ. ಪಿ. ಎಮ್. ದಾನಯ್ಯನವರು ಘನಮಠರೇ ಕೃ. ಜ್ಞಾ. ಪ್ರದೀಪಿಕೆಯನ್ನು ರಚಿಸಿದರೆಂದು ಬಗೆದಿರಬಹುದು.

× ಕರ್ನಾಟಕ ಕವಿಚರಿತೆ. ತೃತೀಯ ಸಂಪುಟ. ಪುಟ ೩೫೯.

‡ ಕೈವಲ್ಯದರ್ಪಣ ಪ್ರಸ್ತಾವನೆ ಪುಟ ೧೦.

(ಇ) ಘನಮಠರು ಲಿಂಗೈಕ್ಯರಾದ ಬಗೆಗೆ ಪುರಾಣವು ಹೀಗೆ ಹೇಳುತ್ತದೆ—"ಸಂತೆಕೆಲೂರಲ್ಲಿರುವ ವೀರಭದ್ರ ದೇವಾಲಯದಲ್ಲಿ "ವೀರಭದ್ರ ವಿಜಯಂ" ಎಂಬ ಪುರಾಣವನ್ನು ಘನಮಠರೇ ಹಚ್ಚಿಸಿದ್ದರು. ಎಂಟು ದಿವಸಗಳ ವರೆಗೆ ಪುರಾಣಶ್ರವಣ ನಡೆದಿತ್ತು. ಶಿವಯೋಗಿಗಳಿಗೆ ಶಿವಲೋಕಕ್ಕೆ ಬರಲು ಶಿವನ ಅಪ್ಪಣೆಯಾಗಲು, ಪುರಾಣವನ್ನು ಸಾಂಗಗೊಳಿಸಲು ಭಕ್ತರಿಗೆ ತಿಳಿಸಿ ಅಣ್ಣಿನಗಡ (?) ಮಠದ ಪಾತಾಳ ಅಂಕಣದಲ್ಲಿ ಪದ್ಮಾಸನವನ್ನಿಕ್ಕಿ ಪರಶಿವಲಿಂಗ ಧ್ಯಾನವನ್ನು ಮಾಡುತ್ತ ಶ್ರೀ ರುದ್ರವನ್ನು ಪಠಿಸುತ್ತ ಪರಮಾನಂದದಿಂದ ಇಷ್ಟಲಿಂಗಕ್ಕೆ ಮಜ್ಜನಮಾಡಿ ತಮ್ಮ ಶಿವಾತ್ಮಲಿಂಗದಲ್ಲಿ ಮನವನ್ನು ನೆಲೆಗೊಳಿಸಿ ಶಿವಪಂಚಾಕ್ಷರಿಯನ್ನು ಉಚ್ಚರಿಸುತ್ತ ತಮ್ಮ ಕರದಿಷ್ಟಲಿಂಗದಲ್ಲಿ ದೃಷ್ಟಿಯನ್ನೂರಿ ಲಿಂಗೈಕ್ಯರಾದರು." ಇದೆಲ್ಲವನ್ನು ಪುರಾಣವು ತಿಳಿಸಿದರೂ ಅವರು ಶಿವೈಕ್ಯರಾದ ಕಾಲವನ್ನು ಅದು ಹೇಳಿಯೇ ಇಲ್ಲ.

ನವರನ್ನು ಇಲ್ಲವೆ ರಾ. ಬ. ಹಳಕಟ್ಟಿಯವರನ್ನು ಅನುಸರಿಸಿ ನಾಗಭೂಷಣ ಘನಮಠದಾರ್ಯರೇ ಕೃಷಿಜ್ಞಾನ ಪ್ರದೀಪಿಕೆಯನ್ನು ರಚಿಸಿದವರೆಂದು ಇಟ್ಟುಕೊಂಡಿದ್ದಾರೆ. ಆದರೆ ಆಗ್ರಂಥದುದ್ದಕ್ಕೂ ಸಿಂದಿಗಿ ತಾಲೂಕ ಚಿಕ್ಕನಾಳ ಗ್ರಾಮದ ಸಿದ್ಧರಾಮಪ್ಪ ಕುನ್ನಾಳ ಇವರೇ ಈ ಗ್ರಂಥ ರಚಿಸಿದರೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ. ಆ ಎಲ್ಲ ಆಧಾರಗಳನ್ನು ಪರಿಶೀಲಿಸಿದರೆ ಘನಮಠರು ಗ್ರಂಥಕರ್ತೃಗಳಾಗಿರಬಹುದೇನೋ ಎಂಬ ಊಹೆಯೂ ಗಾಳಿಗೋಪುರವಾಗುತ್ತದೆ. ಗ್ರಂಥಕರ್ತೃ ಯಾರಿರಬಹುದೆಂಬ ಬಗೆಗೆ ರಾ. ಬ. ಫ. ಗು. ಹಳಕಟ್ಟಿಯವರಿಗೂ ಸಂದೇಹ ಬಾರದಿಲ್ಲ. ಅವರು ತಮ್ಮ ಕೊನೆಯ ತೀರ್ಮಾನವನ್ನು "ಗ್ರಂಥದ ಮೂಲ ಕರ್ತೃಗಳು ಘನಮಠದಾರ್ಯರೆಂದು ಭಾವಿಸಿ ಮೇಲ್ಕಂಡ ಉಭಯತರು ಕಾಲಕಾಲಕ್ಕೆ ಸೇರಿಕೊಂಡು ಈ ಗ್ರಂಥವನ್ನು ಸಿದ್ಧಪಡಿಸಿದರೆಂದು ತಿಳಿಯುವುದು ಹೆಚ್ಚು ಸಯುಕ್ತಿಕವಾಗಿದೆ." ಎಂಬ ಹೇಳಿಕೆಯಲ್ಲಿ ಕೊಟ್ಟಿದ್ದಾರೆ. ಆದರೆ ಅವರ ತೀರ್ಮಾನ ಸತ್ಯಕ್ಕೆ ದೂರವೆಂದು ನಮ್ಮ ಭಾವನೆ.

ಕೃಷಿಜ್ಞಾನ ಪ್ರದೀಪಿಕೆಯ ಪೀಠಿಕೆಯಲ್ಲಿ ಸಿದ್ಧರಾಮಪ್ಪ ಕುನ್ನಾಳ ಇವರು ಹೀಗೆ ಹೇಳುತ್ತಾರೆ.

೧. ಶ್ರೀಮತ್ ಚಿದ್ಘನಮಠನಿವಾಸ ಶ್ರೀ ನಾಗಭೂಷಣ ಮಹಾಪ್ರಭು ಆಜ್ಞಾನುಸಾರವಾಗಿ............ಬರೆದಿದೆ. (ಪು.೧)

೨. ಶ್ರೀ ಗುರುದೇವನಾಜ್ಞಾನುಸಾರದಿಂ ನಿರ್ಮಿಸಲ್ಪಟ್ಟ ಲೋಕಹಿತವಾದ ಈ ಕೃಷಿಜ್ಞಾನ ಪ್ರದೀಪಿಕೆಯೆಂಬ ಗ್ರಂಥವನ್ನು (ಪು.೨)

೩. ಶ್ರೀಮನ್ನಾಗಭೂಷಣ ಮಹಾಪ್ರಭುಗಳಾದ ಶ್ರೀಮನ್ನಾಗಭೂಷಣರವರ ಲೌಕಿಕಪಾರಮಾರ್ಥಾನಂದ ಪಾರಮಾರ್ಥಮಯವಾದ ಜ್ಞಾನ ಬೀಜವನ್ನು ತನ್ನ ಕುಮಾರನಾದೆನ್ನ ಚಿದ್‌ಹೃದಯಕ್ಷೇತ್ರದೊಳ್ ಬಿತ್ತಿ ಬೆಳೆಮಾಡಿ ಅಖಂಡಪರಿಪೂರ್ಣ ಘನರಾಶಿಯನ್ನು ಕೈವಶಮಾಡಿಕೊಟ್ಟು ಅತ್ಯಾನಂದದಿಂದಾಜ್ಞಾಪಿಸಿದ್ದೇನಂದರೆ............ಭೋಗ

ಮೋಕ್ಷಪ್ರದಮಾದ ಕೃಷಿಜ್ಞಾನ ಪ್ರದೀಪಿಕೆಯೆಂಬ ಗ್ರಂಥವನ್ನು ....ರಚಿಸಿ ಜಗತ್ಪ್ರಸಿದ್ಧ ಮಾಡಬೇಕೆಂದು ಆಜ್ಞೆಯನಿತ್ತಕಾರಣ ಗುರುವಾಜ್ಞೆಯಂ ಶಿರಸಾಮಾನ್ಯ ಮಾಡಿಕೊಂಡು ಶ್ರೀಗುರುಪ್ರಸಾದ ವಾಕ್ಯಬಲದಿಂದಲವರ ಅನುಮತವಿದ್ದಂತೆ + + + + ಶ್ರೀಮನ್ಮಹಾ ಗುರು ನಾಗಭೂಷಣ ಪ್ರಭುಗಳವರ ಚಿನ್ಮಯಪದಗಳನ್ನೀ ಎನ್ನಯ ಚಿತ್‌ಕಲಾ ಹೃತ್ಕಮಲ ಪೀಠದೋಳ್ ನೆಲೆಗೊಳಿಸಿ× × × × ಸೂತ್ರ ಧಾರಿಯನುಮತದಿಂ ಚೇಷ್ಟಿಸುವ ನಾಟಕದ ಬೊಂಬೆಯಂತೆ ಶಿವನು ಹೃದಯಮುಖದಿಂದ ಸೂಚಿಸಿದ ಜ್ಞಾನಯುಕ್ತಿಗಳಿಂದ ಗ್ರಂಥರಚ ನೋದ್ಯೋಗಕ್ಕೆ ಪ್ರಾರಂಭಿಸಿರುವೆನು. (ಪು. ೧೫ ಮತ್ತು ೧೬)

೪. ಇತಿ ಶ್ರೀಮತ್‌ಪರಮ ನಿರಂಜನ ಲೀಲಾವತಾರ ನೂತನಲ್ಲಮ ಪ್ರಭು ಸ್ವರೂಪಿಗಳಾದ ಶ್ರೀ ಘನಮಠನಿವಾಸ ನಾಗಭೂಷಣ ಶಿವಯೋಗಿ ಗಳೆಂಬ ಮಹಾಪ್ರಭುಗಳಪ್ಪಣೆಯಮೇಲಿಂದ ಸಿದ್ಧರಾಮಪ್ಪ ಕುನ್ನಾಳ ಮುಕ್ಕಾಂ ಚಿಕ್ಕನಾಳ ಈತನಿಂದ ರಚಿಸಲ್ಪಟ್ಟ ಈ ಕೃಷಿಜ್ಞಾನ ಪ್ರದೀ ಪಿಕೆಯೆಂಬ ಲೋಕಹಿತವಾದ ಗ್ರಂಥದ ಪ್ರಥಮಭಾಗ ಸಮಾಪ್ತ.

(ಪು.೯೬)

೫. × × × × ಆ ಪರಶಿವಯೋಗಿಗಳ ಕರಕಂಜೋದ್ಭವ ಸಿದ್ಧರಾಮ ನಿಂದೀ ಭೂಲೋಕಹಿತಮಾಗೆ ನಿರ್ಮಿತವಾದುದೀ ಲೌಕಿಕ ಪಾರ ಮಾರ್ಥ ಕೃಷಿಜ್ಞಾನ ಪ್ರದೀಪಿಕೆಯೆಂಬ ಪುಣ್ಯಗ್ರಂಥವು. (ಪು.೩೫೬)

೬. × × × × ಕೃಷಿಜ್ಞಾನ ಪ್ರದೀಪಿಕೆಯೆಂಬ ಪುಣ್ಯಗ್ರಂಥವು ಗುರುವಾ ಜ್ಞೆಯ ಪ್ರಕಾರ ಸಿದ್ಧರಾಮಪ್ಪ ಕುನ್ನಾಳ ಮುಕ್ಕಾಂ ಚಿಕ್ಕನಾಳ ಇವ ರಿಂದ ಶ್ರೀಮನ್ನೃಪ ಶಾಲಿವಾಹನ ಶಕ ೧೮೦೧ ಪ್ರಮಾಥಿ ಸಂವತ್ಸರ ಮಾಘ ಶುದ್ಧ ೧೫ ರಲ್ಲಿ ಸಂಪೂರ್ಣಮಾದುದು.

ಈ ಎಲ್ಲಾ ಆಧಾರಗಳನ್ನು ನೋಡಿದರೆ "ನೂತನಲ್ಲಮದೇವರವ ತಾರ"ವೆನಿಸಿದ ಘನಮಠರು ಸಿದ್ಧರಾಮಪ್ಪ ಕುನ್ನಾಳ ಇವರ ಗುರುಗ ಳೆಂದೂ ಅವರ ಆಜ್ಞಾನುಸಾರವಾಗಿ ಸಿದ್ಧರಾಮಪ್ಪನವರೇ ಈ ಗ್ರಂಥವನ್ನು

ರಚಿಸಿದರೆಂದೂ ಸ್ಪಷ್ಟವಾಗದಿರಲಾರದು. ಘನಮಠರೂ ಕೃಷಿಜ್ಞಾನದಲ್ಲಿ ಬಲ್ಲಿದರೆಂಬದಕ್ಕೆ ಯಾವ ಸಂಶಯವೂ ಇಲ್ಲ. ಹೊಲಗಳಲ್ಲಿ ದೊಡ್ಡ ಹಳ್ಳಗಳಿದ್ದರೆ ಅವನ್ನು ತುಂಬಿಕೊಳ್ಳುವ ಸುಲಭ ಯುಕ್ತಿಯನ್ನು ಹೇಳು ವಾಗ ಸಿದ್ಧರಾಮಪ್ಪನು "ಹೀಗೆ ಕೆಲವು ಸ್ಥಲಗಳಲ್ಲಿ ಶ್ರೀ ಘನಮಠನಿವಾಸ ಮಹಾಪ್ರಭುಗಳ ಅಪ್ಪಣೆಯಪ್ರಕಾರ ಮಾಡಿ ಮಹತ್ತರವಾದ ಹಳ್ಳಗಳನ್ನು ಹೂಳಿ ಹೊಲವನ್ನು ಮಾಡಿಕೊಂಡಿದ್ದಾರೆ. * ಎಂದು ಘನಮಠರ ಕೃಷಿ ಜ್ಞಾನದ ನೈಪುಣ್ಯವನ್ನು ಹೊಗಳಿದ್ದಾರೆ. ಇದಲ್ಲದೆ—

ಅನ್ನರಸಂಜಾತ ಅತಿವೆಲು ಪುರುಷುಲು
ಯೇಪುರೇಗಿನ ಮೊದನಡೆ ಚನಂಚು
ಅನ್ನಮುಡುಗಿ ನಯನಕ ಅತಡೇದು ಬೋಯನೋ
ವಿಶ್ವತಾಭಿರಾಮ ವಿನರವೇಮ. †

ಎಂಬ ವೇಮಳ ಪಂಡಿತರ ಪದ್ಯವನ್ನೂ ಮತ್ತು

ಅನ್ನಪರಬ್ರಹ್ಮ ಮೈಯುನ್ನದನ್ನಂ
ಅನುಚುಮೆಮಿನ್ನಂ ಆತ್ಮಲೋಗನ್ನಂ. ×

ಎಂಬ ಆಂಧ್ರಪಂಡಿತರ ವಚನವನ್ನೂ ಇದಲ್ಲದೆ ಇನ್ನೂ ಅನೇಕಾನೇಕ ಸಲಹೆ ಸೂಚನೆಗಳನ್ನೂ ಆಂಧ್ರ ದೇಶದಲ್ಲಿ ಹುಟ್ಟಿದ ಘನಮಠರು ಕೊಟ್ಟಿ ರಬಹುದು. ಇದಲ್ಲದೆ ಸಿದ್ಧರಾಮಪ್ಪನವರು ವೇಧಾ ದೀಕ್ಷೆಯ ಕ್ರಮ ವನ್ನು ಹೇಳುವಾಗ "ಇದಕ್ಕಾ ಶ್ರೀಗುರು ಘನಮಠೇಶನ ವಾಕ್ಯವೇ ಸಾಕ್ಷಿ". ಪದ— "ಕುಲವೇ ಶಿವಕುಲವು ಭಕ್ತನ । ಕುಲವೇ ಶಿವಕು ಲವು" ‡ ಎಂದು ಹೇಳಿದ್ದಾರೆ. ಭಾವಲಿಂಗದ ವಿಚಾರದಲ್ಲಿ ಘನಮಠರ ವಿಚಾರವನ್ನೇ ಸಿದ್ಧರಾಮಪ್ಪನವರು ತಮ್ಮ ಗ್ರಂಥದಲ್ಲಿ ವಿಸ್ತೃತಗೊಳಿಸಿ ದ್ದಾರೆ. ÷ ತಮ್ಮ ಕಾಲದಲ್ಲಿ ಸಹಜ ವೈರಾಗ್ಯದಾಚರಣೆಯುಳ್ಳ

---

* ಕೃಷಿಜ್ಞಾನ ಪ್ರದೀಪಿಕೆ ಪುಟ ೪೦ (ಘನಮಠರೇ ಗ್ರಂಥಕಾರರಾಗಿದ್ದಾರೆ. ಹೀಗೆ ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಿರಲಿಲ್ಲ.)

† ಕೃ. ಜ್ಞಾ. ಪ್ರ. ಪುಟ ೧೩ × ಕೃ. ಜ್ಞಾ. ಪ್ರ. ಪುಟ ೧೩

‡ ಕೃ. ಜ್ಞಾ. ಪ್ರ. ಪುಟ ೩೪ ÷ ಕೃ. ಜ್ಞಾ. ಪ್ರ. ಪುಟ ೨೭

ವರು* ಮತ್ತು ವೇಧಾ,ಮಂತ್ರ, ಕ್ರಿಯಾದೀಕ್ಷೆಯನ್ನು‡ ಕೊಟ್ಟುಭಕ್ತರನ್ನು ಉದ್ಧಾರಮಾಡುವ ಸಾಮರ್ಥ್ಯವುಳ್ಳವರು ಶ್ರೀ ಘನಮಠರೇ ಎಂದು ಸಿದ್ಧ ರಾಮಪ್ಪನವರು ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಎಷ್ಟೋ ಕಡೆ ಹೇಳಿದ್ದಾರೆ. ಇದೆಲ್ಲವನ್ನು ಪರಿಶೀಲಿಸಿದರೆ ಸಿದ್ಧರಾಮಪ್ಪ ಕುನ್ನಾಳ ಇವರೇ ಕೃಷಿಜ್ಞಾನ ಪ್ರದೀಪಿಕೆಯ ಕರ್ತರೆಂದು ಸುಸ್ಪಷ್ಟವಾಗುತ್ತದೆ.

ಇನ್ನು ಘನಮಠಾರ್ಯರು ಹಾಡಿದ "ತತ್ವಪದ"ಗಳ ವಿಷಯ. ಎಲ್ಲ ತೋರ್ಕೆಯ ಹಿಂದೆ ಹುದಿಗಿರುವ ಪರಮಾರ್ಥವನ್ನು ಶೋಧಿಸಿ ಸಾಧಿಸುವುದೇ ತತ್ವಶಾಸ್ತ್ರದ ತಿರುಳು. ತತ್ವಶಾಸ್ತ್ರವು ಸಾರಿದ ಪರಮ ಸತ್ಯವನ್ನೇ ಹೃದಯನಳಿನದ ಮೇಲಿಟ್ಟು ದಿವ್ಯಪ್ರೇಮದಿಂದ ಆರಾಧಿಸುವುದೇ ಭಕ್ತಿಯಭಾಗ್ಯ. ಭಕ್ತಿ ಜ್ಞಾನಗಳ ಈ ಲಕ್ಷಣಗಳನ್ನು ಮುಂದಿಟ್ಟುಕೊಂಡು ಘನಮಠರ ಹಾಡುಗಳನ್ನು ವಿಮರ್ಶಿಸುವದಾದರೆ ಅವನ್ನು ತತ್ವಪದಗಳೆಂದೆನ್ನುವುದಕ್ಕಿಂತ ಭಕ್ತಿಗೀತೆಗಳೆಂದು ಕರೆವುದು ಹೆಚ್ಚು ಸಮಂಜಸ. ಏಕೆಂದರೆ ಈ ಹಾಡುಗಳಲ್ಲಿ ತತ್ವಕ್ಕಿಂತ ಭಕ್ತಿಯೇ ಹೆಚ್ಚು ಪ್ರಬಲವಾಗಿ ಒಡಮೂಡಿದೆ. ಘನಮಠರ ಸದ್ಭಕ್ತಿಭಾವ ಅರಳಿ ಅದರಿಂದ ಮಧುರ ಮಧುಬಿಂದುವಿನಂತೆ ಹೊರಹೊಮ್ಮಿದ ಗೀತಗಳು ಭಕ್ತಿಭಾವ ಗೀತಗಳೇ. ಅಂತೆಯೇ ಘನಮಠರ ಪದಗಳ ಈ ಸಂಕಲನಕ್ಕೆ "ಭಕ್ತಿಸುಧಾಸಾರ" ಎಂಬ ಹೆಸರನ್ನಿಟ್ಟಿದೆ. ಇದು ತಪ್ಪೋ ಒಪ್ಪೋ ಎಂಬ ವಿಷಯವನ್ನು ವಿಮರ್ಶಕರಿಗೇ ಬಿಟ್ಟಿದೆ.

---

* "ಸಹಜ ವೈರಾಗ್ಯದಾಚರಣೆಯು ಈಗಿನ ಸಮಯದಲ್ಲಿ ನೂತನಲ್ಲಮದೇವರವತಾರ ಶ್ರೀ ಘನಮಠನಿವಾಸ ಶ್ರೀಮನ್ಮಹಾಗುರು ನಾಗಭೂಷಣ ಪ್ರಭುಗಳೋರ್ವರಿಗೆ ಸಲ್ಲುವದಲ್ಲದೆ ಮತ್ತಾರಿಗೂ ಬಾರದು." ಕೃ. ಜ್ಞಾ. ಪ್ರ. ಪು. ೩೩೬

‡ ಮತ್ತು ವೇಧಾಮಂತ್ರಕ್ರಿಯೆಗಳೆಂಬ ತ್ರಿವಿಧ ದೀಕ್ಷೆಯಿಂದ ಶಿಷ್ಯನ ಪೂರ್ವಜನ್ಮವಳಿದು ಪುನರ್ಜಾತನ ಮಾಡುವ ಸಾಮರ್ಥ್ಯವು ಈಗಿನಕಾಲದಲ್ಲಿ ನೂತನಲ್ಲಮದೇವರವತಾರ ಶ್ರೀ ಘನಮಠನಿವಾಸ ಶ್ರೀಮನ್ಮಹಾಗುರು ನಾಗಭೂಷಣ ಪ್ರಭುಗಳೋರ್ವರಿಗಲ್ಲದೆ ಸಹಜೋಪದೇಶವಮಾಡಿ ಶಿಷ್ಯನ ಮಲಮಾಯಾ ಜಾಡ್ಯಮಂ ಪರಿಹರಿಸುವ ಸಾಮರ್ಥ್ಯ ಸಾಲದು. ಕೃ. ಜ್ಞಾ. ಪ್ರ. ಪುಟ ೩೪೪

ಸಂದರ್ಭ ಸನ್ನಿವೇಶಗಳಿಗನುಗುಣವಾಗಿ ಭಾವೋದ್ರೇಕದಿಂದಲೇ ಹೊರಹೊಮ್ಮಿದ ಘನಮಠರ ಈ ಹಾಡುಗಳು ಅವರ ಸುಂದರ ಜೀವನ ವನ್ನು ಮತ್ತು ಅವರ ದಿವ್ಯವ್ಯಕ್ತಿತ್ವವನ್ನು ಎಷ್ಟೋ ಕಡೆ ಬಯಲಿಗೆಳೆಯು ತ್ತವೆ. ಬಸವಪರವಾದ ಹಾಡುಗಳಲ್ಲಿ ಘನಮಠರ ಭಕ್ತಿಭಾವವು "ಹಾಲು ಕ್ಕಿಮೇಲುವರಿದಂತಾಗಿದೆ." ಬಸವಣ್ಣನವರನ್ನು ಕುರಿತು ಎಷ್ಟು ಹಾಡಿ ದರೂ ಘನಮಠರ ನಾಲಿಗೆ ದಣಿದಂತೆ ತೋರುವುದಿಲ್ಲ. ಅದರಂತೆ ಚೆನ್ನ ಬಸವ, ಪ್ರಭುದೇವರು, ಸಿದ್ಧರಾಮ, ತೋಂಟದ ಸಿದ್ಧಲಿಂಗ ಮೊದಲಾದ ಪುರಾತನರನ್ನೂ ಒಲವಿಂದ ಹಾಡಿ ಹಾಡಿ ನಲಿದಿದ್ದಾರೆ. ಇದಲ್ಲದೆ ರೇವ ಣಸಿದ್ಧ, ಪಂಡಿತಾರಾಧ್ಯ ಮೊದಲಾದವರ ಜೀವನವನ್ನೂ ಪದ್ಯರೂಪವಾಗಿ ಹಾಡಿ ತಮ್ಮ ಭಕ್ತಿಯಕಾಣಿಕೆಯನ್ನು ಅವರಿಗೂ ಸಲ್ಲಿಸಿದ್ದಾರೆ. ಇದಲ್ಲದೆ ಸದ್ಗುರುಮಹಿಮೆ, ಜ್ಞಾನಜಂಗಮಲೀಲಾವೈಭವಗಳನ್ನು ಸಾಮಾನ್ಯ ಜನ ರಿಗೂ ತಿಳಿವ ತಿಳಿಯಾದ ಶೈಲಿಯಲ್ಲಿ ಬಣ್ಣಿಸಿದ್ದಾರೆ.

ಹಿಂದೆ ತಿಳಿಸಿದಂತೆ ಚಿಂಚೋಳಿಗ್ರಾಮದಲ್ಲಿ ಬಸವಪುರಾಣದ ಮೆರ ವಣಿಗೆಯ ಕಾಲಕ್ಕೆ "ಬಸವಪೂರ್ಣಸಶಿವ" ಎಂದು ಹಾಡಿ ಬಂದ ಎಡ ರನ್ನು ಬಯಲುಮಾಡಿದರೆ "ಓದಿ ಓದಿ ಏನಾದೆ ಮರುಳೇ" ಎಂಬ ಪದ್ಯ ದಲ್ಲಿ ವೀರಭದ್ರಶಾಸ್ತ್ರಿಗಳಂತಹ ಪಂಡಿತರ ಅಹಂಕಾರವನ್ನು ನೆಲಸಮ ಮಾಡಿರಬಹುದು. ಆಗಿನ ಕಾಲದಲ್ಲಿ ಪ್ರಬಲರಾಗಿದ್ದ "ಫ್ರೆಂಚ ದೇಶದ ಸನ್ಯಾಸಿಗಳ" (ಕ್ರಿಶ್ಚಿಯನ್ ಪಾದ್ರಿಗಳ) ಮತ್ತು ಬಾಯಬ್ರಹ್ಮವ ನುಡಿವ ವಾಗದ್ವೈತಿಗಳ ದುರಾಚಾರವನ್ನು ಕಟುವಾಗಿ ಟೀಕಿಸಲು ಘನಮಠ ಹಿಂದೆ ಮುಂದೆ ನೋಡಲಿಲ್ಲ. ವೇಶ್ಯೆಯರ ಸಂಗದಿಂದ ಮನುಷ್ಯನ ಅಧೋಗತಿ ಕಟ್ಟಿಟ್ಟದ್ದೆಂದು ವೇಶ್ಯಾವಿಡಂಬನ ಲಾವಣಿಯಿಂದ ಜನಸಾಮಾನ್ಯಕ್ಕೆ ಎಚ್ಚರ ಕೊಟ್ಟರು. ಇದನ್ನೆಲ್ಲ ನೋಡಿದರೆ ಶ್ರೀ ಘನಮಠ ಶಿವಯೋಗಿ ಗಳಿಗೆ ಸಮಾಜೋದ್ಧಾರದಲ್ಲಿ ನೈಜವಾದ ಆಸಕ್ತಿಯಿತ್ತೆಂದು ಸ್ಪಷ್ಟವಾಗಿ ತೋರುತ್ತದೆ. ಅಂತೆಯೇ ಅವರ ಹಾಡುಗಳಲ್ಲಿ ಕಲೆಯ ವಿಲಾಸವನ್ನು ಉಪದೇಶಭಾವವು ಮುಚ್ಚಿಬಿಟ್ಟಿದೆ ಎಂದು ಹೇಳಬಹುದು.

ಯೋಗ-ಜ್ಞಾನ-ಅನುಭವ-ಆನಂದ ಕಲಾನಿಧಿಯಾದ ನಿಜಗುಣ ಶಿವಯೋಗಿಗಳಂತಹ ಕವಿತತ್ವಜ್ಞಾನಿಗಳೊಡನೆ, ಅವರ ಬಲಗೈಯಂತಿದ್ದ ಸರ್ಪಭೂಷಣ ಶಿವಯೋಗಿಗಳೊಡನೆ ಘನಮಠರನ್ನು ಹೋಲಿಸುವುದು ಸರಿಯಲ್ಲವೆಂದೇ ನಮ್ಮ ಭಾವನೆ. ಮುಪ್ಪಿನ ಷಡಕ್ಷರಿ ದೇವರದು ಸಿದ್ಧ ಪುರುಷನ ಸಿದ್ಧವಾಣಿ. ಅವರೊಡನೆಯೂ ಘನಮಠರನ್ನು ಹೋಲಿಸುವುದು ಅನ್ಯಾಯವೇ. ಆದರೆ ಸಮಕಾಲೀನರಾದ ಬಾಲಲೀಲಾ ಮಹಾಂತ ಸ್ವಾಮಿಗಳಿಗೂ ಘನಮಠ ಶಿವಯೋಗಿಗಳಿಗೂ ಕೆಲಮಟ್ಟಿಗೆ ಸಾಮ್ಯವನ್ನು ಕಾಣಬಹುದು. ಜೀವನದ ದೃಷ್ಟಿಯಿಂದ ನೋಡುವುದಾದರೆ ಬಾಲಲೀಲಾ ಮಹಾಂತಸ್ವಾಮಿಗಳವರದು ಏಕಾಂತ ಜೀವನ, ಬಾಲಲೀಲಾ ಜೀವನ. ಆದರೆ ಘನಮಠರದು ಸಹಜವೈರಾಗ್ಯದ ಜ್ಞಾನಜಂಗಮಲೀಲಾ ಜೀವನ. ಇನ್ನು ಮಹಾಂತಶಿವಯೋಗಿಗಳ ಕೈವಲ್ಯದರ್ಪಣದಲ್ಲಿ ಅವರು ಹಾಡುವ ಶೈಲಿಯಲ್ಲಿ ಭಾವದ ತೀವ್ರತೆ ಇದೆ. ಶಿವಯೋಗದ ವಿಲಾಸವಿದೆ. ಆದರೆ ಘನಮಠರ ಹಾಡಿನ ಶೈಲಿಯಲ್ಲಿ ಒಂದು ತರಹದ ಗತಿ (Rhythem) ಇದೆ. ಹಾಡುಗಳ ಧಾಟಿಯಲ್ಲಿ ವೈವಿಧ್ಯವಿದೆ. ಒಟ್ಟಾರೆ ಹೇಳುವದಾದರೆ ಘನಮಠರು ಗಾನಕಲೆಯಲ್ಲಿ ಹೆಚ್ಚು ಕುಶಲರೆಂದು ತೋರುತ್ತದೆ.

ಘನಮಠರ ಜೀವನವನ್ನು ತಿಳಿಯಲು ಸಾಧನಸಂಪತ್ತಿಯನ್ನು ಒದಗಿಸಿಕೊಟ್ಟ ದಾವಣಗೆರೆ ವಿರಕ್ತಮಠಾಧ್ಯಕ್ಷರಾದ ಶ್ರೀ ನಿ. ಪ್ರ. ಸ್ವ. ಪ್ರಭು ಸ್ವಾಮಿಗಳವರಿಗೆ, ಹಾಡುಗಳ ಸಂಸ್ಕರಣ ನಡೆದಾಗ ಸಹಾಯಮಾಡಿದ ಗದುಗಿನ ಶಿ. ಪಂ. ನಾಗಭೂಷಣಶಾಸ್ತ್ರಿಗಳವರಿಗೆ ನಮ್ಮ ಸಪ್ರೇಮ ವಂದನೆಗಳು. ಕರಡುಗಳನ್ನು ತಿದ್ದುವ ಶ್ರಮವಹಿಸಿದುದಕ್ಕೆ ಮತ್ತು ಘನಮಠರ ಈವರೆಗೆ ಅಚ್ಚಾಗದ ಹಾಡುಗಳನ್ನು ದೊರಕಿಸಿ ಕೊಟ್ಟದ್ದಕ್ಕೆ ಶ್ರೀಮಾನ್ ಗುರುಸಿದ್ಧಪ್ಪನವರು ಬಳ್ಳಾರಿ ಇವರಿಗೆ, ಮತ್ತು ಘನಮಠ ಶಿವಯೋಗಿಗಳ ಪುರಾಣವನ್ನು ದಯವಿಟ್ಟು ಕೊಟ್ಟ ಮುದ್ದೇಬಿಹಾಳ ಮೋಟಗಿ ಸಂಗಪ್ಪನವರಿಗೆ ಮತ್ತು ಘನಮಠರ ಪದಗಳ ಹಳೇ ಕೈಬರಹದ ಪ್ರತಿಯನ್ನು ಕೊಟ್ಟವರಿಗೆ ಮತ್ತು ಇವನ್ನು ದೊರೆಕಿಸುವಲ್ಲಿ ಪ್ರಯತ್ನಪಟ್ಟ ಶ್ರೀ. ಜ. ಮುರುಘಾಮಠದ ಕಾರಕೂನ ವೀರಯ್ಯನವರಿಗೆ ನಮ್ಮ

ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ. ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಶಿವಾನಂದ ಮುದ್ರಣಾಲಯದ ಒಡೆಯರಾದ ಶ್ರೀಮಾನ್ ಮಡಿವಾಳಪ್ಪನವರು ವೀಣೇಕರ ಇವರಿಗೂ ನಮ್ಮ ವಂದನೆಗಳು.

ಕೊನೆಯ ಮಾತು:-

ಕನ್ನಡನಾಡಿನ ವಿಶಿಷ್ಟ ಸಂಸ್ಕೃತಿಯ ಪ್ರಸಾರಕ್ಕಾಗಿ ಹಗಲಿರುಳು
ತಮ್ಮ ದಿವ್ಯಜೀವನವನ್ನು ಮೀಸಲಾಗಿರಿಸಿರುವ ಧಾರವಾಡದ
ಶ್ರೀಮನ್ನಿರಂಜನ ಪ್ರಣವಸ್ವರೂಪಿ ಮೃತ್ಯುಂಜಯ
ಮಹಾಸ್ವಾಮಿಗಳವರನ್ನು ಕೊಂಡಾಡುವ ಶಕ್ತಿ
ಶಬ್ದಕ್ಕಿಲ್ಲ.

ಬೆಳಗಾವಿ, — ಸಂ. ಶಿ. ಭೂಸನೂರುಮಠ.

ಪದಗಳ ಅನುಕ್ರಮಣಿಕೆ

೧	ಶ್ರೀ ಗುರುನಾಥ ಬೇಗದಿ ಸಲಹು . . .	೧
೨	ಧ್ಯಾನವ ಮಾಡೋ ನಿಜ ಗುರು ಧ್ಯಾನವ ಮಾಡೋ .	೨
೩	ಗುರುವೇ ನೀ ಕರುಣಿಸೋ ಬೇಗ . . .	,,
೪	ಪೊರೆವುದೈ ಗುರುವೆನ್ನನುರುತರದ . . .	,,
೫	ಗುರುವರ ಪಾಹಿ ಸದಾ ಮಾಂ ಭೋ . . .	೩
೬	ಮಾಡೋ ಗುರುಭಜನೆ ನಿಜದೊಳು ಕೂಡುತಲಿ ನರನೆ .	೪
೭	ಶ್ರೀಗುರು ಬಸವಲಿಂಗಾಯ ನಮೋ ನಿಗ . .	,,
೮	ಬಸವೇಶಾ ಪಾಲಿಸೋ ಶಶಿಭೂಷಾಕಾರನೇ . .	೫
೯	ಬೇಗದಿ ಕರುಣಿಸೋ ಭೋ ಗುರುಬಸವ . .	,,
೧೦	ಕಾಯೋ ಬಸವ ಶುಭಾಗಾರ । ಜ್ಞಾನ . .	೬
೧೧	ಬಸವೇಶ ಮಾಂ ಪಾಹಿರೇ	,,
೧೨	ಬಸವ ಗಣಾಧಿಪತೆ ನಮೋ ಗುರು . . .	,,
೧೩	ಪೋಷಿಸಯ್ಯ । ಈಶಾಂಘ್ರಿಶಯ್ಯ . . .	೭
೧೪	ಬಸವರಾಜ ಪಾಲಿಸಯ್ಯ ಶಶಿಧರಾವತಾರ . .	೮
೧೫	ಕಾಯೊದೈ ಗುರುರಾಯ ಬಸವನೆ . . .	,,
೧೬	ಏತಕ್ಕೆ ಚಿಂತೆ ಮನವೆ । ವೃಷನಾಥನಿರಲೇತಕೆ .	೯
೧೭	ಸಮಾನ ದೈವವದಾರೋ ಬಸವ ನಿನ್ನ . .	೧೦
೧೮	ದಯಮಾಡೋ ಬಸವ ಸುಕುಮಾರನೆ ನೀ . .	,,
೧೯	ಶ್ರೀಗುರು ಬಸವನ ಸ್ಮರಿಸಲು ನಿಜಪದ . .	೧೧
೨೦	ಕಾಯೋ ಬಸವಕುಮಾರ ಭೋ । ಮಾಯ ಸಂಹಾರ .	,,
೨೧	ಬಸವರಾಜ ರಾಜೇಂದ್ರ ದಯಾನಿಧೆ . .	೧೨
೨೨	ಬಸವ ಕುಮಾರ । ಸಶಿವಾಘದೂರ . .	೧೩

೨೩ ಬಸವೇಶನಿಷ್ಟವಸ್ತು ಪ್ರದಾತ । ಮತ್ತೊಂದಿನ್ನೇಕೆ ವೃಥಾ ೧೪
೨೪ ಬಸವ ಪೂರ್ಣ ಸಶಿವ । ಭಕ್ತವಿಹಾರಭಿಮಾನಿ . . ,,
೨೫ ಬಸವ ನಾಮಾವಳಿ ೧೫
೨೬ ಬಸವೇಶ್ವರ ಜೋಗುಳಪದ ೨೦
೨೭ ಎಣ್ಣೆ ಹಚ್ಚುವ ಪದ ೨೪
೨೮ ಶೋಭಾನದ ಹಾಡು ೨೫
೨೯ ಬಸವ ಮಹಿಮಾ ತ್ರಿವಿಧಿ ೨೮
೩೦ ಮಂಗಲಂ ಬಸವಲಿಂಗ ಮಹಿಮಾಂತರಂಗ . . ೪೧
೩೧ ಮಂಗಲಂ ಗಣೇಶ ಬಸವಲಿಂಗ ಶುಭಕರ ಜಯ . ,,
೩೨ ಬೆಳಗಿರೆ ಕರ್ಪೂರ ಜ್ಯೋತಿ ೪೨
೩೩ ಬಸವ ಮಹೇಶ ಮಂಗಲಂ । ಈಶಮತ ಶರಧಿಭೇಶ ಬಸವ ,,
೩೪ ಭಸವ ಮಂಗಲಂ ಬಸವ ಬಸವ ಮಂಗಲಂ . . ೪೩
೩೫ ಚೆನ್ನಬಸವೇಶ ಚಿದಮೃತಸಾಗರ . . . ,,
೩೬ ಬೆಳಗಿರಾರತಿಯ ಬೀರುತಲ್ಲಮಗಮಳ ಭಕ್ತಿರತಿಯ . ೪೪
೩೭ ಸಿದ್ಧರಾಮೇಶ್ವರ ಸಿದ್ಧರಾಮಹೋ . . . ,,
೩೮ ಸಿದ್ಧರಾಮಘವಿರುದ್ಧಾ ಜಯತು ಜಗ . . . ೪೮

ತೋಂಟದ ಸಿದ್ಧಲಿಂಗ

೩೯ ಶುದ್ಧಾರತಿ ಪಿಡಿದೆತ್ತಿರಿ ತೋಂಟದ ಸಿದ್ಧಲಿಂಗನಿಗೆ . ೪೯
೪೦ ಗುರು ತೋಂಟದ ಸಿದ್ಧಗೆ ಬೆಳಗಿರಿ ಕ- . . ,,

ರೇವಣ ಸಿದ್ಧೇಶ್ವರ

೪೧ ಸಿದ್ಧಗುರುವರೇಣ್ಯ । ರೇವಣ . . .

ಪಂಡಿತಾರಾಧ್ಯರು

೪೨ ಶ್ರೀಗುರು ಮಲ್ಲಿಕಾರ್ಜುನ ಪಂಡಿತೇಂದ್ರನೆ . . ೫೩

ಪರಮೇಶ್ವರ

೪೩ ಶ್ರೀ ಮಹಾದೇವ ಪಾಹಿಮಾಂ ಕರುಣಾಕರ ಭವ . ೫೭
೪೪ ಸೋಮಶೇಖರ ಶುಭನಾಮ ಮಹೇಶ . . ೫೮
೪೫ ಹರ ಹರ ಭೋ ಭೋ ಭೋ . . . ,,
೪೬ ಪರಮೇಶ ಪಾಹಿ ಜೀಯಾ ಸುಖಕರ ಶಿವ ಮಹಸೀಯ . ,,
೪೭ ಪರಮೇಶ ಮಾಮವ ಶಾಶ್ವತ . . . ೫೯
೪೮ ಶಾಂಕರಿ ಪ್ರೀತ ಶಂಕವಿಧೂತ . . . ,,
೪೯ ಪೊರೆಯಯ್ಯ ದೇವದೇವ ಜನನ ಮರಣ ವಿರಹಿತ . ೬೦
೫೦ ಬಾಲಶಶಿಧರ ಪರಮೇಶಾ ಗಜಾವರ . . . ,,
೫೧ ಸ್ವಾಮಿ ನೀ ಸಲಹಯ್ಯ ಸೋಮಶೇಖರನೆ . . ,,
೫೨ ಪಾವನನಾಮ ಭೋ ದೇವ ಪಾಹಿಮಾಂ . . ೬೧
೫೩ ಶಿವಾಭವ ಶಾಶ್ವತಾರ್ಯಾಧವಾ ಪಾಹಿಮಾಂ . . ,,
೫೪ ಪಾಹಿ ಪರಮೇಶ ಶಿವ ದೇವ ದೇವ . . . ೬೨
೫೫ ದಯಾನಿಧೆ ದಯಾನಿಧೆ ದಯಾನಿಧೆ ಶಿವ . . ,,
೫೬ ಪಾಹಿ ಮಹೇಶ ಪಾಪವಿನಾಶ . . . ,,
೫೭ ಗಿರಿಜಾರಮಣ ಮಹೇಶ ಚಿರಮಾಮವ ಜಗದೀಶ . ೬೩
೫೮ ಶರಣ ಸಹಾಯ ಶಿವ ಶಾಶ್ವತಾಘಹರ . . ೬೪
೫೯ ಶಮನ ಶಮನ ಶಿವ ಶ್ಯಾಮಲಗ್ರಿವ . . . ,,
೬೦ ಮಾಮವ ಸಾಂಬಸದಾಶಿವ ಭೋ . . . ,,
೬೧ ಮಹಾದೇವ ಮಾಮವ ಜಗದೀಶ ಭೋ . . ೬೫
೬೨ ಮಾಯ ವಿರಹಿತ ಮೋಕ್ಷೋಪಾಯ ಶಂಕರ . . ,,
೬೩ ಗಿರಿಜಾರ್ಧಾಂಗ ಶ್ರೀಕರ ಶಿವಲಿಂಗ . . . ೬೬
೬೪ ಗೌರೀರಮಣ ಭೋಶನೆ ಕಾಯೋ . . . ,,
೬೫ ಪಾಲಿಸೆನ್ನನು ಶಂಕರ ಕಾಲಸಂಹರ . . . ,,
೬೬ ಪರಮ ದಯಾಲ ಪರಿಪಾಲಿಸ ಭವನೆ . . . ೬೭
೬೭ ಕರುಣಸಾಗರ ದೇವ ಕಾಯೋ ನಿತ್ಯ . . . ೬೮
೬೮ ದೇವ ಮಾಮವ ಭವ ಭಾವಜ ನಾಶ . . . ,,

೭೯ ಶಿವ ದಯಾಲ ಮಾಂ ಪಾಹಿಭೋ ಶಿವಶಿವ . . ,,
೨೦ ದೇವ ದೇವ ಪಾಲಿಸಯ್ಯ ಪಾವನಾಕಾರ . . ೭೦
೨೧ ಶ್ರೀವರವರ ಭಾವಜಹರ ಗೋವರಗಮನ . . ,,
೭೨ ಕಾಯೊನೀ ಕಾಲ-ಕಾಲ . . . . ,,
೭೩ ಸೋಮಶೇಖರ ಮಾಮವಾಭವ ಭೋ . . ೭೧
೭೪ ಕಾಲಹರ ಭೋ ಕಾಳಿಕಾವರ ಪರಶಿವ . . ,,
೭೫ ಹರಶಂಭೋ ಶಂಕರ ಸಾಂಬ ಮಾಂ ಪಾಹಿ . . ೭೨
೭೬ ಬಿಡದಿರ್ರೈ ಎನ್ನ ಲಿಂಗೇಶ ನೀಂ ಬಿಡದಿರ್ರೈಯೆನ್ನ . . ,,
೭೭ ಶಂಕರನೆ ಸಲಹೊ ನೀ ಬೇಗನೆ . . . ೭೩
೭೮ ನೋಡಬಾರದೇನೊ ಶಿವನೇ ನೋಡಬಾರದೇನೊ . ,,
೭೯ ಭೂತೇಶಾವ ಮಮ ದೇವದೇವ . . . ೭೪
೮೦ ಪಾಲಯರೇ ಪಾರ್ವತೀಶ್ವರ . . . ,,
೮೧ ಸೋಮಶೇಖರ ಶುಭನಾಮ ಮಹೇಶ . . . ೭೫
೮೨ ಪಾಹಿದೇವ ಪಾರ್ವತೀಶ ಶ್ರೀ ವೃಷವಾಹಗಗನಕೇಶ . ,,
೮೩ ಸೋಮಧರಸ್ವಾಮಿ ಪಾಲಯ . . . ,,
೮೪ ಶ್ರೀ ವೀರಭದ್ರನ ಪಾವನ ಚರಿತೆಯ . . . ೭೬
೮೫ ಶಿವ ಶಿವ ಶಿವ ಎನ್ನಲೆ ಮನುಜ ಭವ . . . ೭೯
೮೬ ಮೃಡನ ಪೂಜಿಸೋ ಬೇಗ ಮೃಡನ ಪೂಜಿಸೋ . ೮೦
೮೭ ಮೃತ್ಯುಂಜಯನಾಗೋ ಎಲೊ ಎಲೊ ಮೃತ್ಯುಂಜಯ-
ನಾಗೋ . ,,
೮೮ ನಿಟಿಲಾಕ್ಷನ ಭಜಿಸೋ ಹೇ ಮನುಜ ನಿಟಿಲಾಕ್ಷನ ಭಜಿಸೋ ೮೧
೮೯ ಕುಲವೆ ಶಿವ ಕುಲವೈ ಭಕ್ತನ . . . ,,
೯೦ ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೋ . . . ೮೩
೯೧ ನುಡಿಯದಿರಣ್ಣಾ ಜಡ ಮನುಜರೋಳ್ . . ೮೪
೯೨ ನರರಿಗೆಂತಹುದಯ್ಯ ಹರಭಕ್ತಿ । ಬಸವಾಂಶಗಲ್ಲದೆ . ೮೫
೯೩ ಯೋಗಿಗೆ ದೂಷಕ ಭೂಷಕರತಿ ಹಿತರಾಗಿಹರೀ-
ಜಗದೊಳು ನೋಡಾ . ೮೬

೯೪ ಉಂಟೆ ಭಕುತಿ ಮುಕುತಿ ಈ ಜನರಿಗದುಂಟೇ
ಭಕುತಿ ಮುಕುತಿ . ೮೭
೯೫ ಓದಿ ಓದಿಯೇನಾದಿ ಮರುಳೆ ಯಿದರಾದಿ ತಿಳಿಯಲಿಲ್ಲ . ೮೮
೯೬ ಹೆಡ್ಡನಾರೊ ಜಗದೊಳು ಹೆಡ್ಡನಾರೊ . . ೯೧
೯೭ ಹೊತ್ತಿರಲಿಕೆ ಊರಿಗೆ ಸೇರೋ । ದಾರಿ . . ೯೪
೯೮ ಲಿಂಗಪೂಜಾ ಮಹಿಮಾ ಷಟ್ಪದಿ . . . ೯೫
೯೯ ಲಿಂಗವನಗಲಿರ ಬೇಡೆಲೊ ಪ್ರಾಣಲಿಂಗವನಗಲಿರ ಬೇಡೆಲೊ ೯೯
೧೦೦ ಭಾವಲಿಂಗವೋ ಸದ್ಭಕ್ತಜನರ ಭಾವಲಿಂಗವೋ . ೯೯
೧೦೧ ಪಾದಪೂಜೆಯ ಮಾಡುವೆ ಜಂಗಮದ ಶ್ರೀ . . ೧೦೦
೧೦೨ ಏನಾದಿ ಮನುಜ ಏನಾದಿ ಶಿವ । . . . ೧೦೨
೧೦೩ ನಿನ್ನ ನಿಜವನರಿಯದೆ ಜೀವನಾದೆನಾ . . . ೧೦೨
೧೦೪ ಪರಮ ವಿರತರ ಜರಿಯಲುಂಟೇನೋ ಹೇ ಮರುಳಮಾನವ ೧೦೩
೧೦೫ ಶರಣೆಂಬೆ - ಶರಣೆಂಬೆ . . . ೧೦೪
೧೦೬ ಮಾರಹರನೆ ನಿನ್ನ ಚಿದಾಕಾರಗಲ್ಲದೆ ಕೈ . . ೧೦೬
೧೦೭ ಶರಣನಾಗಬಾರದಾರಿಗೆ ಈ ಜಗದಿ ಸತ್ಯಶರಣನಾಗ-
ಬಾರದಾರಿಗೆ . ೧೦೬
೧೦೮ ಗುರುಕರ ಜಾತರು ನಮ್ಮವರು ಭವಮರಣವ ಗೆಲಿದರು
ನಮ್ಮವರು . ೧೦೭
೧೦೯ ಕೊಡು ಕೊಡು ಕೊಡು ಕೊಡು ಕೊಡು ಬೇಗ . ೧೦೯
೧೧೦ ಇತರರರಿಯದಿರ್ದರೇನೆಲಾ ನಿನ್ನಂತರಂಗ . . ೧೧೦
೧೧೧ ವರುಷಕ್ಕೊಮ್ಮೆ ಹಿರಿಯರಿಗೆ ಮಾಳ್ಪೆವೆಂ . . ೧೧೨
೧೧೨ ಕೇಳಿರೆ ಶರಣಗಣಾಳಿ ಸುವಚನವ ಮೇಲು ಸುಖವು
ನಿಮಗಾಗುವದು . ೧೧೫
೧೧೩ ಸಾರವಚನಾರ್ಥವನು ಬೋಧಿಪರೆ ಅಜ್ಞಾನ ಜನರಿಗೆ . ,,
೧೧೪ ಸಾಕೊ ಹೇ ಭ್ರಾಂತ ಯಾವನೊ ನಿಶ್ಚಿಂತ . ೧೧೬
೧೧೫ ಮೂಢ ಮನುಜ ಕೆಡಬೇಡ ಸತಿಯ . . ೧೧೮
೧೧೬ ಆರಗೊಡವೆಯಿನ್ನೇನವಗೆ ಪಾರಮಾರ್ಥದೋಳಿರುವವಗೆ ೧೨೨

೧೧೭ ದೂಷಣೆ ಮಾಡಲದೊಂದೆ ಜನರತಿ ಭೂಷಣೆ
ಮಾಡಲದೊಂದೆ . ೧೨೩
೧೧೮ ಜಯ ಜಯ ಜಯ ಶಿವಲಿಂಗ ಜಯ ಪಾಂಡುರಂಗ . ,,
೧೧೯ ಮಂಗಲಂ ಶಂಕರ ಮಾ । ತಂಗ ಸುಚರ್ಮಾಂಬರ . ೧೨೪
೧೨೦ ಆರತಿ ಬೆಳಗೀಶ್ವರಗೆ ಸು- । ಶರೀರ ಸಾಂಬನಿಗೆ . ,,
೧೨೧ ಜಯ ಶಂಕರ ಜಯ ಶುಭಾಕರ . . . ,,
೧೨೨ ಜಯ ಜಯ ಜಯ ಶಿವಲಿಂಗ . . . ೧೨೫
೧೨೩ ಜಯ ದೇವದೇವ ದೇವದೇವ ಜಾಹ್ನವೀ ಜೂಡ . ,,
೧೨೪ ಆರತಿ ಬೆಳಗಿರೆ ನೀರೆಯರಾರತಿ ಬೆಳಗಿರೆ . . ೧೨೬
೧೨೫ ಬೆಳಗಿರಾರತಿ ಕಲುಷಸಂಹರಗೆ . . . ,,
೧೨೬ ಆರತಿಯನೆತ್ತಿರೆ ಶಿವಗೆ ಮಂಗಳಾರತಿಯನೆತ್ತಿರೆ . . ,,
೧೨೭ ಶ್ರೀಶ ವರ ಪರಮೇಶ ಮಂಗಲಂ . . ೧೨೭
೧೨೮ ಕರ್ಪುರಾರತಿಯನು ಬೆಳಗಿ ಸರ್ಪಭೂಷಗೆ . . ,,
೧೨೯ ಕರ್ಪುರ ಜ್ಯೋತಿ ಪ್ರಭಾಮಯ ಭೋ ಶಿವ . ೧೨೮
೧೩೦ ಗಂಗಾಧರ ಮಂಗಲಂ ಗಾನಲೋಲ ಗಂಗಾಧರ ಮಂಗಲಂ ,,
೧೩೧ ಜಯದೇವ ಜಯಶಂಕರ ನಿರ್ಭಯ ಮಹಾದೇವ . ,,
೧೩೨ ಜಯ ಜಯ ಶ್ರೀ ಮಹೇಶ ಜಯ ಪರಮ ಪ್ರಕಾಶ . ೧೨೯
೧೩೩ ಆರತಿಯೆತ್ತಿರೀಶಗೆ ಮಾರಸಂಹರಗೆ . . ,,
೧೩೪ ಜಯ ಮಂಗಳಾರತಿ ಶಿವಲಿಂಗ ತೇ . . ೧೩೦
೧೩೫ ಆರತಿ ಬೆಳಗಿ ಶಿವಗೆ ಮಂಗಳಾರತಿ ಬೆಳಗಿ . . ,,
೧೩೬ ಅಂಗನೆಯರಾರತಿಯನೆತ್ತಿರೆ ಶಿವಗೆ ಪಾವನಾಂಗ ದ್ವಯಗೆ ೧೩೧
೧೩೭ ಜಯತೇ ಸದಾಶಿವ ಜಯ ಜಯ ಶಿವಾಧವ . . ,,

ಕೈಬರಹದ ಪ್ರತಿಯಲ್ಲಿಯ ಹೆಚ್ಚಿನ ಪದ್ಯಗಳು

೧೩೮ ಲೀಲೆಯಲಿ ನೂತನ ಪುರಾತನ . . . ೧೩೨
೧೩೯ ಶ್ರೀ ಶರಣ ಸತಿಯರ ನೂರೆಂಟು ನಾಮಗಳು . . ೧೩೫
೧೪೦ ಶ್ರೀ ಮಹಾದೇವ ಪಾಹಿಮಾಂ ಕರುಣಾಕರ ಭವ . ೧೩೮

೧೪೧ ಶಿವಭೋ ಮಾಮವ ಸದಾ | ಭವಹರ ಶಾಂಕರಿ ವರ . ೧೩೯
೧೪೨ ಗೌರೀವರ ಪುಣ್ಯಮಯ ಶರೀರ ಭೋ | ಸುಖಸಾರ . ,,
೧೪೩ ಶಿವನ ಭಜಿಸಿ ನೀ ಬಾಳೋ | ಪರಶಿವನ ಭಜಿಸಿ ನೀ ಬಾಳೊ ,,
೧೪೪ ಜಯತೆ ಸದಾಶಿವ | ಜಯ ಜಯ ಶಿವಾಧವ . . ೧೪೦
೧೪೫ ನಂಬಬಾರದು ಇವರ ನಂಬಬಾರದು . . . ,,
೧೪೬ ಲೋಭಿಗಿಂದಿತರವಾಗಿ | ದುರ್ಗುಣಗಳೀ ಭುವಿ-
ಯೊಳುಂಟೆ ನೋಡೆ | ಮತ್ತೆ . ,,
೧೪೭ ಪಶುಪಸುಷಮುಗಾತ್ರ ೧೪೧
೧೪೮ ಧೂಪದಗಟ್ಟಿ ಕ್ರಮದಾರತಿ ಪದ . . . ೧೪೨

ಪರಮ ವೈರಾಗ್ಯಶೀಲರಾದ

ಶ್ರೀ ಘನಮಠ ಶಿವಯೋಗಿಗಳು

॥ ಶ್ರೀಗುರು ಬಸವಲಿಂಗಾಯನಮಃ ॥

ಶ್ರೀ ಘನಮಠ ಶಿವಯೋಗಿಗಳ

ಭಕ್ತಿಸುಧಾಸಾರ

.... ೧ ....

ಶ್ರೀಗುರುನಾಥ ಬೇಗದಿ ಸಲಹು ।
ರಾಗವಿರಹಿತ ವಿರಾಗಿಜನನಮಿತ ॥ ಪಲ್ಲ ॥

ಘೋರಭವಮರಣವಾರಿಸಿ ನಿಮ್ಮಯ ।
ಚಾರುಪದಾಬ್ಜದೊಳಾರಡಿಯೆನಿಸುತೆ ೧

ಪಾಪಹೃದಯಸಂತಾಪವಳಿದು ಕರು- ।
ಣಾಪಯೋನಿಧೆ ನಿಜರೂಪವರುಪಿಚಿರ ೨

ಭೂಸುತ ಘನಮಠೇಶಾನತಜನಪ್ರಿಯ ।
ಸ್ವಾನುಭಾವದ ಸುಖದಾನವ ಕೊಡುತಲಿ ೩

.... ೨ ....

ಧ್ಯಾನವ ಮಾಡೋ ನಿಜಗುರು ಧ್ಯಾನವ ಮಾಡೋ ।
ಮಾನವ ನೀನತಿಮತಿಯುತನೆನಿಸುತೆ ॥ ಪಲ್ಲ ॥

ಜಗದೊಳಗನುದಿನ ನಗುರೋರಧಿಕಮೆಂದು ।
ಪೊಗಳುವ ಶ್ರುತಿಮತವಗಲದೆ ಮುದದೊಳು ೧

ವರಕರುಣದೊಳಡಿಗೆರಗಿದವರ ಸ್ಮರ- ।
ಹರನೆನಿಸುವ ಶರಣರ ಸುರಭೂಜನ ೩

ಮನುಮುನಿಜನಸುರಗಣರಿಗೆ ಮೊದಲಿಗ- ।
ನೆನಸಿದನಘ ಶ್ರೀಘನಮತೇಶನ ೨

.... ೩ ....

ಗುರುವೇ ನೀ ಕರುಣಿಸೋ ಬೇಗ ॥ ಪಲ್ಲ ॥

ಪರಮಪಾವನ ನಿಮ್ಮ ಉರುಭಕ್ತಿಜ್ಞಾನಸ- ।
ದ್ವಿರತಿಸಂಪದವೆನ್ನ ದೊರೆಯೇ ನೀ ಕರುಣಿಸೊ.... ೧

ಅನುಮಾನವಳಿದೆನ್ನ ತನುಮನಧನವ ನಿಮ್ಮ ।
ದೆನಿಸಿ ಪರಮಸುಖವನಧಿಯೊಳಿಹುದನೆ ೨

ಘನಮತವಾಸನೆನ್ನನು ಪರಿಕಿಸದೆ ಸ- ।
ಜ್ಜನಶರಣರ ಸಂಗವನುದಿನದಯದಿ ನೀ ಕರುಣಿಸೊ ೩

.... ೪ ....

ಪೊರೆವುದೈ ಗುರುವೆನ್ನನುರುತರದ
ಕರುಣದಿ ಸುಪ್ರಸನ್ನವರದ ।
ಪರಮಪಾವನ ಸರ್ವಮಾನ್ಯ ।
ಶರಣು ಶರಣೈ ಶರಣವರೇಣ್ಯ ॥ ಪಲ್ಲ ॥

ನಾನಾಯೋನಿಮುಖದ ಜನನವಟ್ಟು ।
ಮಾಣಿಸುವ ಭಸಿತವಘಣೆಯೊಳಿಟ್ಟು ॥
ಸ್ವಾನುಭಾವದ ದೀಕ್ಷೆಯ ಕೊಟ್ಟು ।
ಆಣವಾದಿಮಲವನೆರೆಸುಟ್ಟು ೧

ತಂದೆತಾಯಿ ಬಂಧುಬಳಗ
ಎಂದು ನೀನೆಂದೆಂಬಸುಖಿಗ ।
ಕೊಂದುಗೂಡಿರುವದು ನೀನೆನಗಾ ।
ನಂದಬೋಧಾಂಬುನಿಧೆ ಕೊಡುತೀಗ ೨

ದೇವ ಘನಮಠವಾಸ ಎಂದು ।
ಭಾವದೊಳು ಸ್ಮರಣೆ ಮಾಡಲಿಂದು ।
ಆವರಿಸೆ ಭವಜಾಲವು ಬಂದು ।
ತೀವಿ ನನಗಾಗುವುದು ಬಲು ಕುಂದು ೩

.... ೫ ....

ಗುರುವರ ಪಾಹಿ ಸದಾ ಮಾಂ ಭೋ ।
ಭೋ ಭೋ ಭೋ ಭೋ ॥ ಪಲ್ಲ ॥

ಭಾವಭವಾಹಿತ ಭವಭಯಕುಲಹತ ।
ಪಾವನಮಯ ಚರಿತ । ಗುರುವರ ಪಾವನಮಯ ಚರಿತ ೧

ತ್ರಿಗುಣವಿದೂರ ಜಗದುಪಕಾರ ।
ಅಗಣಿತಾಘಾಪಹಾರ ಭೋ । ಗುರುವರ ಅಗಣಿತಾ ಭೋ ೨

ಘನಮಠವಾಸ । ಮುನಿಗಣಪ್ರೋಕ್ತ ।
ಜನನ ಮರಣ ನಾಶ । ಗುರುವರ ಜನನಮರಣ ನಾಶ ॥ ೩

.... ೬ ....

ಮಾಡೋ ಗುರುಭಜನೆ ನಿಜದೊಳು ಕೂಡುತಲಿ ನರನೇ ।
ಮಾಡೋ ಗುರುಭಜನಾಡಿ ಪಾಡುತೆ
ಗಾಢಜಗದೊಳು ಪ್ರೌಢಿಯಿಂದಲಿ ।
ಮೂಢಮತಿಗಳ ಕೂಡಿಯಾಡದೆ ।
ನಾಡೆ ಭಕ್ತರ ನೋಡಿ ಮುದದೊಳು || ಪಲ್ಲ ||

ಕೋಪಗುಣಸಂತಾಪವೆಂಬತಿ ।
ಪಾಪವತಿಗಳೆದಾ ಪರಮ ಗುರು ।
ಶ್ರೀ ಪದಾಬ್ಜಪ್ರತಾಪನಂ ನೆರೆ ।
ಸ್ಥಾಪಿಸುತೆ ಚಿದ್‌ರೂಪನಾಗಿ ೧

ತೋರಿಕೆಡುವತಿ ಘೋರತರ ಸಂ ।
ಸಾರ ಭೋಗಕೆ ಹಾರದೆ ಸುವಿ ||
ಚಾರದಿಂ ನಗುರೋರಧಿಕವೆಂ ।
ಬೀ ರಹಸ್ಯವ ಮೀರದನುದಿನ ೨

ಮೋಸ ಮಾಡುತಿಹಾಸೆಮೂರನು ।
ಹೇಸಿ ತನುಗುಣರಾಶಿಯೊಳು ನೀ ||
ಗಾಸಿಯಾಗದಲಾ ಸಘನಮತ
ವಾಸಗನುದಿನವಾಸನಾಗುತೆ || ೩

.... ೭ ....

ಶ್ರೀಗುರು ಬಸವಲಿಂಗಾಯ ನಮೋ ನಿಗ ।
ಮಾಗಮನುತ ಜಗದೀಶ ಭೋ || ಪ ||

ಕಾರಣಕಾರಣ ಕಾರುಣ್ಯಾಕರ ।
ಸಾರಷಟ್‌ಸ್ಥಲಧೀರ ಭೋ ೧

ಮಂಗಲನಾಮ ಚಿದಂಗ ಪರಾತ್ಪರ ।
ಜಂಗಮಲಿಂಗಸುಸಂಗ ಭೋ ೨

ಇಷ್ಟಪ್ರದಾಯಕ ವಿಶಿಷ್ಟವೀರಮತ- ।
ಶ್ರೇಷ್ಠ ಶ್ರೀಘನಮಠದಿಷ್ಟ ಭೋ ೩

.... ೮ ....

ಬಸವೇಶಾ ಪಾಲಿಸೋ ಶಶಿಭೂಷಾಕಾರನೇ ।
ಬಸವೇಶಾ ಪಾಲಿಸೋ ॥ ಪಲ್ಲ ॥

ಲೋಕಪಾವನ ಪಿ- । ನಾಕಿ ಭಕ್ತಗಣ ।
ಶೇಖರ ಪರಮದಯಾಕರಗುಣ ೧

ನೆನೆದಾಕ್ಷಣ ಮುಕು । ತನ ಮಾಡುವ ನಿ ।
ಮ್ಮನಘನಾಮವನುದಿನವೋದಿಸಿ ೨

ದ್ವೇಷರಹಿತ ಸ । ರ್ವೇಶ ಘನಮಠ ನಿ ।
ವಾಸ ನಿಮ್ಮವರ ದಾಸನೆನಿಸಿ ೩

.... ೯ ....

ಬೇಗದಿ ಕರುಣಿಸೋ ಭೋ ಗುರುಬಸವ ॥ ಪಲ್ಲ ॥

ಮಾರಮಥನನವತಾರ ಸುಗುಣಮಣಿ ।
ಹಾರ ನಿಮ್ಮನುಭವ ಸಾರಸುಖವನೆ ೧

ಕ್ರೂರಮದನಸಂಚಾರವಳಿದು ಭವ ।
ದೂರನೆನಿಸಿ ತವ ಚಾರುಪದವನೆ ೨

ಶ್ರೀ ಘನಮಠನಿವಾಸಗಣನಾಯಕ ।
ರಾಗರಹಿತ ಶಿವಯೋಗದನುವನೆ ೩

.... ೧೦ ....

ಕಾಯೋ ಬಸವ ಶುಭಾಗಾರ । ಜ್ಞಾನ- ।
ಕಾಯ ಸಗುಣಮಣಿಹಾರ ॥ ಪಲ್ಲ ॥

ಶ್ರೀಕಂಠಸಮಯಾಬ್ಧಿ ಕೋಕನದಪ್ರಿಯ ।
ಲೋಕೇಶ ಪ್ಮಾದಾಂಚಿತನಯ ೧

ಮೋಕ್ಷಪ್ರದಾತ ಮುಮುಕ್ಷುಪ್ರಖ್ಯಾತ ।
ಸಾಕ್ಷಾತ್ಪರಬ್ರಹ್ಮಜಾತ ೨

ಪ್ರಣವಸ್ವರೂಪ ಚಿದ್ಘನ ಸುಪ್ರತಾಪ ।
ಘನಮತವಾಸಾಘಲೋಪ ೩

.... ೧೧ ....

ಬಸವೇಶ ಮಾಂ ಪಾಹಿ ರೇ ।
ಶಶಿಭೂಷ ಹೃದಯವಾಸ ರೇ ॥ ಪಲ್ಲ ॥

ಚಿತ್ರಚರಿತಗಣಕದಂಬ- । ಮಿತ್ರ ಚಿನ್ಮಯಾಮಿತಪುಣ್ಯ- ।
ಗಾತ್ರ ಜಂಗಮಾಂಘ್ರಿಭಕ್ತಿ ।
ಕ್ಷೇತ್ರ ಮತ್ಪವಿತ್ರ ರೇ ೧

ಸುಪ್ರಶಸ್ತ ಸಂಗಮೇಶ್ವ- । ರ ಪ್ರಸನ್ನ ಹೃದಯನಿತ್ಯ ।
ಅಪ್ರಮೇಯಜ್ಞಾನ ಜಂಗ- । ಮಪ್ರಸಾದಭೋಗಿ ರೇ ೨

ಭಾಷಪಾಲಕಾತ್ಮಜ್ಞಾನ । ಭೂಷಪರಾತ್ಪರ ಜಗತ್ಪ್ರ ।
ಪೋಷ ಮಹಾಪ್ರಕಾಶ ಘನಮ ।
ತೇಶ ಭವವಿನಾಶರೇ ೩

.... ೧೨ ....

ಬಸವ ಗಣಾಧಿಪತೆ ನಮೋ ಗುರು ।
ಬಸವ ಗಣಾಧಿಪತೆ ॥
ಅಸಮನಯನ ಸಮಯಶಶಧಿವಿಧು ಗುರು ॥ ಪಲ್ಲ ॥

ನಿತ್ಯನಿರಾಮಯ ನಿರುಪಮ ನಿರ್ಗುಣ ।
ಮೃತ್ಯುವಿಜಯ ಪರಮಾರ್ಥಚರಿತ ಗುರು ೧

ಚರಲಿಂಗಾರ್ಪಿತಶರೀರಕರಣ ಭವ ।
ಹರ ಕರುಣಾಕರ ಶರಣಸಮೇಳ ೨

ಭಕ್ತನಿದಾನ ವಿ- । ರಕ್ತಸುಪೂಜಿತ ।
ಮುಕ್ತಿದ ಘನಮತಕರ್ತ ಪರಮಗುರು ೩

.... ೧೩ ....

ಪೋಷಿಸಯ್ಯಾ । ಈಶಾಂಘ್ರಿಶಯ್ಯಾ ।
ಭಾಷೆಪಾಲಕ ಜೀಯಾ ಬಸವರಾಜಯ್ಯಾ ॥
ದೋಷರಹಿತ ಪರಮೇಶ ನಿರುಪಮ ಪ್ರ- ।
ಕಾಶ ಭಕ್ತಪರಿತೋಷ ಈಶನೆ ॥ ಪಲ್ಲ ॥

ಧೀರ ಸಂಸಾರವೆಂಬ | ಘೋರಾರಣ್ಯ
ಮಧ್ಯದೊಳ್ । ದಾರಿ ಕಾಣೆನು ಪ್ರಭುವೆ ವಿಭುವೆ ॥
ತೋರಿ ಕೆಡುವ ದುರ್ವಿಕಾರ ವಿಷಯಂಗಳ ।
ಹಾರಿ ಕೆಟ್ಟೆನು ಗುರುವೆ । ಸುರತರುವೆ ॥
ಭೂರಿ ಕರಣಸಂಚಾರದಿಂದೆ ಬಲುಗಾರಾದೆನು |
ಕರುಣರಸಾಬ್ಧೀ ಭವದೂರನೆನಿಸುತೀ ।
ಕ್ರೂರಕರ್ಮವ ನಿವಾರಿಸಿ ಪರಮವಿಚಾರವ ತೋರಿ ೧

ಮೂರು ಮಲಗಳಿಂದೆ ಮೂರು ತಾಪಗಳಿಂದೆ ।
ಮೂರು ಗುಣಗಳಿಂದೆ ನಾನೊಂದೆ ।
ಮೂರು ಕರ್ಮಗಳಿಂದೆ ಮೂರು ದೇಹಗಳಿಂದೆ ।
ಮೂರು ಬಕುತಿಗಳನರಿಯನು ದೊರೆಯೆ ||
ಮೂರು ದೀಕ್ಷೆಯೊಳೆರಳ್ಮೂರು ಬಿಡಿಸಿ ಮೂರು ।
ಮೂರು ಚಕ್ರವರ್ಣಾಕ್ಷರದಳಗಳ ।

ಮೂರು ಲಿಂಗದನುಭಾವದಿ ಭೇದಿಸಿ ।
ಮೂರು ತತ್ವಗಳ ಮೂಲವ ತೋರಿ ೨

ಆಶೆಪಾಶೆಗಳಿಂದೆ ದೋಷದ್ವೇಷಗಳಿಂದೆ ।
ಕ್ಲೇಶಪಂಚಕದಿಂದೆ ನಾ ಬೆಂದೆ ॥
ದೋಷ ದುರ್ಗುಣದಿಂದೆ ಈಷಣತ್ರಯದಿಂದೆ ।
ಕೋಶವಿವೈದರಿಂದೆ ಗುರುತಂದೆ ।
ಗಾಸಿಯಾದೆ ಜಗದೀಶ ನಿಮ್ಮ ಪದ ।
ಧ್ಯಾಸವಿತ್ತು ಭವರಾಶಿ ಹರಿಸಿ ಪರಿ ।
ತೋಷನೆನಿಸಿ ಚಿದ್ಭೂಷ ಘನಮಠನಿ ।
ವಾಸ ಭಕ್ತಕುಲಧೀಶ ಗಣೇಶ ೩

.... ೧೪ ....

ಬಸವರಾಜ ಪಾಲಿಸಯ್ಯ ಶಶಿಧರಾವತಾರ ।
ಅಸಮಮಹಿಮಾಗಾರ ಭಕ್ತಿಕುಶಲ ಭವವಿದೂರ ॥ ಪಲ್ಲ ॥

ಹಿಂದೆ ನಾನಾ ಯೋನಿಗಳೊಳು । ಬಂದು ನೊಂದೆ ಬಹಳ ಈ
ದಂದುಗವನು ಬಿಡಿಸಿ ನಿಮ್ಮ । ಕಂದನೋಲವಿರಳ ೧

ಜ್ಞಾನಹೀನನಾಗಿ ವಿಷಯ ಕಾನನದೊಳು ದಾರಿ ನಾ ।
ಕಾಣದೆ ತಿರುಗಿದೆನು ನಿಮ್ಮ-ನೂನ ಪಥವ ತೋರಿ ೨

ಶ್ರೇಷ್ಠ ಘನಮಠೇಶ ಗುಣಗರಿಷ್ಠ ಮುಕ್ತಿಮೂಲ ನಿಜ ।
ನೈಷ್ಠೆಯಿತ್ತು ಕರ್ಮವನ್ನು ಸುಟ್ಟು ಪರಮಜಾಲ ೩

.... ೧೫ ....

ಕಾಯೊದ್ಯೆ ಗುರುರಾಯ ಬಸವನೆ ।
ಕಾಯೋ ಮೋಕ್ಷಸದುಪಾಯ ಪ್ರಮಥ ಸಮು ।
ದಾಯ ವರ್ಯ ನಿರ್ಮಾಯ ನಿರಘನೆ ॥ ಪಲ್ಲ ॥

ಯೋಗಜ್ಞಾನ ವೈರಾಗ್ಯ ಭಕ್ತಿ ಸೌ
ಭಾಗ್ಯಪೂರ್ಣ ಸರ್ವಜ್ಞ ಚಿತ್ತನೆ ೧

ಕಂದನೆಂದು ದಯದಿಂದ ಹೆದರಬೇ
ಡೆಂದಭಯವ ಕೊಟ್ಟೆಂದು ಬಂದು ನೀ ೨

ಅಕ್ಷಯಕರ ಸಂತ್ರ್ಯಕ್ಷರ ಪಾಠಕ
ಪಕ್ಷ ಭಕ್ತಸುರವೃಕ್ಷ ದಯಾನಿಧೆ ೩

ಅದ್ಭುತಚರಿತ ಜಗದ್ಭರಿತೋಜ್ವಲ
ಚಿದ್ಭಸಿತಾಂಗ ಸಮುದ್ಭೂಷಣನೆ ೪

ಸ್ಥೈರ್ಯ ಭಕ್ತಿಸೌಂದರ್ಯ ಸತ್ಪಥಾ
ಚಾರ್ಯನಸಮದೌದಾರ್ಯ ಶೌರ್ಯನೆ ೫

ಅಪ್ರಮೇಯಭಕ್ತಿಪ್ರಿಯ ಗಾನರ
ಸಪ್ರವೀಣ ಪರಮ ಪ್ರಸನ್ನನೆ ೬

ಈಶ ಘನಮಠನಿವಾಸ ದೀನಜನ
ಪೋಷ ಘೋರಭವನಾಶ ನಿತ್ಯನೆ ೭

.... ೧೬ ....

ಏತಕ್ಕೆ ಚಿಂತೆ ಮನವೆ । ವೃಷನಾಥನಿರಲೇತಕೆ
ಚಿಂತೆ ಮನವೇ ॥

ಏತಕ್ಕೆ ಚಿಂತೆ ನಿನ । ಗೋತು ಇಷ್ಟಾರ್ಥಗಳ ।
ಪ್ರೀತಿಲಿ ಕೊಡುವ ಪ್ರ । ಖ್ಯಾತ ಬಸವನಿರಲು ॥ ಪಲ್ಲ ॥

ಪುತ್ರಾರ್ಥದಿ ಮಾದಾಯಿ । ಸ್ತೋತ್ರವ ಮಾಡೆ ಸು ।
ಪುತ್ರನಾಗೆ ಸದಸ । ತ್ಪಾತ್ರ ಬಸವನಿರಲು ೧

ಮೊರನರೆಮ್ಮಯ್ಯನ । ವರ ಭಾವಕೆ ಮೆಚ್ಚಿ ।
ತರಳನೋಳ್ನಿಜವಾಗಿ ಮೆರೆದ ಬಸವನಿರಲು ೨

ಗುರುಪಂಡಿತ ಕಾಣ್ಬಾ । ತುರದಿ ಚಿಂತಿಸೆ ಮೇಣವ ।
ತರಿಸಿದ ಘನಮಠದರಸ ಬಸವನಿರಲು ೩

.... ೧೭ ....

ಸಮಾನ ದೈವವದಾರೋ ಬಸವ ನಿನ್ನ ।
ಸಮಾನ ದೈವವದಾರೋ ಬಸವ ನಿನ್ನ ।
ಸುಮಾನ ಶಿವಮತಾಭಿಮಾನನಿಧೆ ನಿನ್ನ ॥ ಪಲ್ಲ ॥

ಸದಾಸುಕವಿನುತ ಪದಾಬ್ಜ ವರದ ಸ ।
ದುದಾರ ಪರಮ ಸುಚಿದಾಂಬುನಿಧೆ ನಿನ್ನ ೧

ಗಣಾಧಿಪತಿ ಸುರ ಗಣಾಳಿವರಸುತ ।
ಪ್ರಣಾಮ ನಿಜವಾಹನಮಹಿಮ ನಿನ್ನ ೨

ಪುರಾರಿಹೃದಯದಿ ವಿರಾಜಿಸುತಲೀ ।
ಧರಾತಲದೊಳಿರುವರ ಪೋಷಿಸುವೆ ನಿನ್ನ ೩

ಪ್ರಸಾದತನು ಗುರುಪ್ರಸಾದಮನ ಶಿವ ।
ಪ್ರಸಾದಚರ ನಿಜ-ಪ್ರಸಾದಮಯ ನಿನ್ನ ೪

ಘಟಾದಿ ಗುಣವನಕುಠಾರ ವರಘನ ।
ಮಠಾಧಿಪತಿ ನಿಶ್ಚಟಾದಿ ಬಸವ ನಿನ್ನ ೫

.... ೧೮ ....

ದಯಮಾಡೋ ಬಸವಸುಕುಮಾರನೆ ನೀ ॥ ಪಲ್ಲ ॥

ಕರುಣವಿನಯ ಶರಣರ ಪದಸೇವೆ ।
ಪರಮ ವಿರತಿಯ ಸುಭಾವವೆ ೧

ಮನದೊಳಗನುದಿನವನು ನಿಮ್ಮ ಧ್ಯಾನ ।
ವನು ಹೊಳೆಸುವ ಸುಜ್ಞಾನವೆ ೨

ಘನಮತವಾಸ ಸದ್ಗುಣಮಣಿಭೂಷ ।
ಜನನರಹಿತ ಸುಖಸಾರವೆ ೩

.... ೧೯ ....

ಶ್ರೀಗುರು ಬಸವನ ಸ್ಮರಿಸಲು ನಿಜಪದ ।
ವಾಗುವದಿದು ನಂಬೋ ಮನುಜ ॥ ಪಲ್ಲ ॥

ಸತ್ತವನಿಗೆ ಮುದವೆತ್ತು ಚೆನ್ನಮ್ಮನ ।
ನಿತ್ತು ಸ್ಮಶಾನಕ್ಕೆ ಕಳುಹಿಸಲಾ ।
ಹೊತ್ತಿನೊಳಾಯಕಳ್ಮೃತ್ತಿಕೆ ವೃಷಭನ ।
ಮತ್ತೆ ಭಜಿಸೆ ನಿಜಸುಖವಿತ್ತ ೧

ಶಿರದೊಳು ತಕ್ರದ ಹರವಿಯ ತಳೆದ ।
ಪುರದೋಳ್ಕಾಳಾಯಿ ಬರುತಿರಲಾ ।
ಧರೆಯೊಳು ಚರಣವ ಜಾರಿ ಬೀಳುತಲಾ ।
ದರದಿ ಸ್ಮರಿಸೆ ಕರವಿತ್ತೊಲಿದ ೨

ಸಟೆ ದಿಟದಿಂದಾರ್ಭಟದಿಂದಾಗಲಿ ।
ಹಟಚಟದಿಂದಾತುಟಿಯಿಂದ ॥
ಸ್ಫುಟದಿಂದಲಿ ಘನಮಠವಾಸನ ನಿ ।
ಶ್ಚಟ ರೂಪವೆ ತಾನಾಗಿರುವ ೩

.... ೨೦ ....

ಕಾಯೋ ಬಸವಕುಮಾರ ಭೋ । ಮಾಯಸಂಹಾರ ॥ ಪ ॥

ಪರಮಪಾವನ ಭಕ್ತಲೋಲ ಶ್ರೀಗುರುವೆ ದಯಾಲ ।
ವರದಾತ್ರೈಜಗದಧೀಶ್ವರ ಹತಕಾಲ ಸುಶೀಲ ಭಾಸುರ-
ಮುಕ್ತಿಮೂಲ ೧

ಧೀರಸದ್ಗುಣಮಣಿಹಾರ ಭೋ । ಚಾರುಶರೀರ ।
ಘೋರ ಪಾಪೌಘಹಾರ ಚಿದಾಮೃತಸಾರ ಸಂಸಾರ-
ವಿದೂರ ೨

ಘನಮತವಾಸ ಮಹೇಶ । ದೌರ್ಗುಣಗಣನಾಶ ।
ಅನಘ ಸರ್ವಜ್ಞ ಭಂಜಿತಮೋಹ । ಪಾಶ ಗಣೇಶ
ಪಾವನ ಮುಕ್ತಿಕೋಶ ೩

.... ೨೧ ....

ಬಸವರಾಜ ರಾಜೇಂದ್ರ ದಯಾನಿಧೆ
ಬಸವರಾಜರಾಜೇಂದ್ರ ॥
ಬಸವ ಬಸವ ಗಣವಿಸರವಿನುತಪದ
ಬಿಸಜಯುಗಳ ಭೋಪಶುಪ ಸನಾತನ ॥ ಪಲ್ಲ ॥

ಈಶಹೃದಯಜನಿವಾಸ ಪರಮ ಮು- ।
ಕ್ತೀಶ ಸದ್ಗುಣವಿಭೂಷಣ ಸುಭಾಷ್ಪಯ ೧

ಪಾಪಲೋಪ ಚಿದ್ರೂಪ ಭಕ್ತಕುಲ ।
ದೀಪ ನಿರುಪಮಪ್ರತಾಪ ಭಾಪು ಗುರು ೨

ಕಾಲಸಂಹರಘಜಾಲಮೂಲ ಕು- ।
ದ್ದಾಲ ಭುವನಪರಿಪಾಲಶೀಲ ಗುರು ೩

ಮಾದಾಂಬೆಗೆ ಗರ್ಭೋದಯನೆನಿಸಿದ ।
ನಾದಮಯನೆ ಪರವಾದಿ ವಿಭಂಜನ ೪

ಕಲ್ಯಾಣದ ಚರರೆಲ್ಲಚ್ಚರಿಯೆನ- ।
ಲಲ್ಲಿ ಲಿಪಿಯ ಮುದದಲ್ಲಿಯೋದಿದ ಗುರು ೫

ಸಾರವಸ್ತುಗಳ ಭೂರಿಜಂಗಮಕೆ ।
ಸೂರೆಗೊಟ್ಟ ಗಂಭೀರ ಧೀರ ಗುರು ೬

ನೀಲಲೋಚನೆಯ ವಾಲಿ ಜಂಗಮಕೆ ।
ಸೋಲದಿತ್ತ ಕರುಣಾಲವಾಲ ಗುರು ೭

ಮರಣವಾದ ದುರ್ನರನಿಗೆ ಶೀಘ್ರದಿ ।
ಹರಣವಿತ್ತ ಬಂಧುರಸುಖಾಬ್ಧಿ ಗುರು ೮

ಕಪಟಲಾಂಛನರನಪಹರಿಸುತಲಿ ।
ಷ್ಟಪದಾರ್ಥಗಳಿತ್ತಪರಿಮಿತಾರ್ಥನೆ ೯

ಪಿರಿಯಭಕ್ತನುರುಕರದಿ ಪಾಲುಗರೆ- ।
ದರಸ ಸರಿಯದಾರ್ಗುರುವೆ ನಿನಗೆ ಶಿವ ೧೦

ಹರಗೆ ನೊಸಲಕಣ್ಕರದರ್ಪಣದೋಳ್ ।
ಭರದಿ ತೋರಿಸಿದ ಶರಣಕುಲಾಗ್ರಣಿ ೧೧

ಬಸವ ಬಸವ ಎಂದುಸುರಲ್ಕಾಳಾಯಿ ।
ಮೊಸರುಕೊಡಂ ಕರಬಿಸಜದಿ ನಿಲಿಸಿದ ೧೨

ಶಿವನಭಕ್ತಿಯೊಭುವಿಯೊಳು ಮೆರೆಯ- ।
ಲ್ಕವತರಿಸಿದ ಸತ್ಪವಿನುತಪದಯುಗ ೧೩

ಕರುಣಾಕರ ನಿಮ್ಮುರುನಾಮದ ಸಂ ।
ಸ್ಮರಣೆ ಮಾಡಲಪವರಣಹರಿವುದು ೧೪

ಘನಮತೇಶ ತ್ರೈಗುಣವಿನಾಶ ನಿ- ।
ಮ್ಮನುದಿನ ನೆನೆಯಲಹನು ಶಿವಗುರು ೧೫

.... ೨೨ ....

ಬಸವಕುಮಾರ । ಸಶಿವಾಘದೂರ ॥ ಪಲ್ಲ ॥

ತ್ರಿಭುವನಪೋಷ । ಶುಭಗುಣಕೋಶ ।
ಅಭವಹೃದಯಪರಿತೋಷ । ಕುಭಯವಿನಾಶ ೧

ವೀರಮತಾರ್ಯ ಭೂರಿಯೌದಾರ್ಯ ।
ಸಾರ ಸುಖದ ನಿಜಧೈರ್ಯ । ಚರಪರಿಚರ್ಯ ೨

ಈಶಪ್ರಕಾಶ ಭೋ ಸಕಲೇಶ ।
ಭಾಸುರ ಘನಮತವಾಸ । ಪಶುಪ ಗಣೇಶ ೩

.... ೨೩ ....

ಬಸವೇಶನಿಷ್ಟವಸ್ತುಪ್ರದಾತ | ಮತ್ತೊಂದಿನ್ನೇಕೆ ವೃಥಾ ||ಪ||

ಮಂತ್ರತಂತ್ರಸಿದ್ಧಿಕರ್ಮ- | ಭ್ರಾಂತವೇಕೆ ಮನವೆ ಬಸವ |
ಮಂತ್ರವೆಲ್ಲಾ ಮಂತ್ರಕೆಮಾತಾ | ಮತ್ತೊಂದಿನ್ನೇಕೆ ವೃಥಾ ೧

ಭಕ್ತಿವಿರತಿಜ್ಞಾನವರಿದು | ಮುಕ್ತನಾದೆನೆಂಬುದೇನಾ- |
ಭಕ್ತಿಸತಿಗೆ ಬಸವನೆ ನಾಥ | ಮತ್ತೊಂದಿನ್ನೇಕೆ ವೃಥಾ ೨

ತತ್ವವೇತ್ತನಾಗಿ ಪರಶಿವ | ತ್ವವಡೆವೆನೆಂಬಿರಲ್ಕಾ- |
ತತ್ವಕೆಲ್ಲ ಬಸವನೆ ತಾತ | ಮತ್ತೊಂದಿನ್ನೇಕೆ ವೃಥಾ ೩

ದೀಕ್ಷೆಶಿಕ್ಷೆಯಿಂದೆಮೋಕ್ಷಾ- | ಪೇಕ್ಷದಿರಲದೇಕೆ ಬಸವ |
ನೀಕ್ಷಣದೊಳೆ ಮೋಕ್ಷವೀವಾತ | ಮತ್ತೊಂದಿನ್ನೇಕೆ ವೃಥಾ ೪

ಎಲ್ಲಘನಮತೇಶ ಬಸವ | ನಲ್ಲದಿಲ್ಲವೆಂದು ಹೃದಯ- |
ದಲ್ಲಿ ಜಪಿಸಲವನೆ ಪುನೀತ | ಮತ್ತೊಂದಿನ್ನೇಕೆ ವೃಥಾ ೫

.... ೨೪ ....

ಬಸವ ಪೂರ್ಣಸಶಿವ | ಭಕ್ತವಿಹಾರಭಿಮಾನಿ
ಮರೆದೆರೆಯ ನಿ | ಮ್ಮಯ ಜಸವ ||.ಪಲ್ಲ ||

ಪರವಾದಿಮೇಘರ್ಝಂಝಾನಿಲನುಮೆಂಬ ಬಲು |
ಬಿರುದುಮೆರದಿರಲು | ಪ್ರಾಜ್ಞರು ನಗುವರಯ್ಯ ಗುರು ೧

ಆಳಿನಪಮಾನವಾಳ್ದಂಗೆಂಬುದರಿದು ನೀಂ |
ಪಾಲಿಸದಿರಲ್ಕೊರತೆ ಕೇಳು ನಿನಗಹುದು ಗುರು ೨

ಭೂತಪಂಚಾಕ್ಷರಿಯ | ನೋತು ಸೋಂಕಿಹಪರಿಯ |
ಪಾತಕರು ನಿಮ್ಮಜರಿಯುದ ತೆರನದಾಯ್ತು ಗುರು ೩

ಅಂದು ದುರ್ಮದಜೈನ | ವೃಂದವಳಿದಿಹ ಶೌರ್ಯ- |
ವಿಂದೆಲ್ಲಿ ಪೋಯಿತೆಲೆ | ತಂದೆ ಸರ್ವಜ್ಞ ಗುರು ೪

ಸಿದ್ಧಿವಿದ್ಯೆಗಳೆಮಗೆ | ಸಾಧ್ಯವಲ್ಲವು ದಯದಿ |
ಉದ್ಧರಿಸು ಬಿಡುಶಿವ ಮ | ತೋದ್ಧಾರ ಧೀರಗುರು ೫

ಎಮ್ಮೊಳು ಸುಗುಣತತಿಯ- | ನೊಮ್ಮೆಬೆದುಕಿದರಿಲ್ಲ |
ಧರ್ಮದಿಂ ಕಾಯಿ ಬಿಡು | ಧರ್ಮಸ್ವರೂಪ ಗುರು ೬

ಮತ್ತೆ ಮುನ್ನೂರರು- | ವತ್ತು ಸುಪವಾಡಗಳ |
ನೆತ್ತಿತೋರಿದ ವೀರ- | ವೃತ್ತಿಯೇನಾಯ್ತು ಗುರು ೭

ಕಷ್ಟಪರವಾದಿಗಳಿ | ಗಿಷ್ಟಸಂಪದಬಲವ |
ಕೊಟ್ಟು ದೂಷಿಸಿಕೊಳಲಿಷ್ಟವೇ ನಿನಗೆ ಗುರು ೮

ಅಂತಕಾಂತಕನ ಪಳಿ- | ವಂತವರ ಹತಿಪೆನೆಂ- |
ಬಂತ ನಿಮ್ಮಯ ಮಹಾ | ಪಂಥವೇನಾಯ್ತು ಗುರು ೯

ಧರ್ಮಪಾಲಕನೆನಿಸಿಯು ಮರ್ತ್ಯಜೀವಿಗಳ |
ಧರ್ಮದಿಂ ನಡೆಯೆ ನೀಂ | ಸುಮ್ಮನಿರಬಹುದೆ
ಗುರು ೧೦

ಈಶಮತಶರಧಿ ತಾ- | ರೇಶ ನಿಮ್ಮಯಸತ್ಯ- |
ಭಾಷೆ ಪಾಲಿಸೊ ಘನಮ- | ಹೇಶ ಪರಮೇಶ ಗುರು ೧೧

.... ೨೫ ....

ಬಸವನಾಮಾವಳಿ

ಶ್ರೀವೀರಶೈವಜ್ಞಾನಾವಯವ ಗುರುಬಸವ | ೧
ಪ್ರಾವೀಣ ಸಹಜ ಸದ್ಭಕ್ತ ಸುಖದಾತ ಗುರುಬಸವ | ೨
ಸೋಮಾರ್ಕಕೋಟಿತೇಜೋಮಯನೆ ಗುರುಬಸವ | ೩
ಕಾಮಾರಿಮತಶರಧಿಸೋಮ ಶ್ರೀಗುರುಬಸವ | ೪
ಪ್ರಣವಸ್ವರೂಪ ತ್ರೈಗುಣದೂರ ಗುರುಬಸವ | ೫
ಅನಘಾತ್ಮ ಪರಮಪಾವನನಾಮ ಗುರುಬಸವ | ೬

ಸಗುಣನಿರ್ಗುಣತತ್ವಸಾಕ್ಷೀಶ ಗು ರು ಬ ಸ ವ | ೭
ಅಗಣಿತಾಶ್ಚರ್ಯಚರಿತಾಖಂಡ ಗು ರು ಬ ಸ ವ | ೮
ವೇದವೇದಾಂತವಿದ್ಯಾಸೌತ್ರ್ಯ ಗು ರು ಬ ಸ ವ | ೯
ನಾದಮಯ ಸಚ್ಚಿದಾನಂದ ಸದ್ಗುರುಬಸವ | ೧೦
ಘೋರದುರಿತಾಟವಿಕುಠಾರ ಶ್ರೀಗುರುಬಸವ | ೧೧
ಪಾರಮಾರ್ಥವಿಚಾರ ಧೀರ ಸದ್ಗುರುಬಸವ | ೧೨
ಯೋಗಿಹೃದಯಾಬ್ಜಸಂಯುತಪಾದ ಗುರುಬಸವ | ೧೩
ರಾಗವರ್ಜಿತ ಮುಕ್ತಿರಾಜ ಶ್ರೀ ಗು ರು ಬ ಸ ವ | ೧೪
ಅಕ್ಷಯಕಟಾಕ್ಷೇಕ್ಷಣಾರೂಢ ಗು ರು ಬ ಸ ವ | ೧೫
ಮೋಕ್ಷದಾಯಕ ಸುಜನಪಕ್ಷ ಶ್ರೀಗುರುಬಸವ | ೧೬
ಪ್ರಮಥಾಗ್ರಗಣ್ಯ ಸದ್‌ಭಾವ ಶ್ರೀಗುರುಬಸವ | ೧೭
ವಿಮಲನೆಂದೆನಿಸಿ ನಿಜವೀಯೆನಗೆ ಗುರುಬಸವ| ೧೮
ಭವಮರಣಬಾಧೆಗಿರಿಪವಿ ನಿತ್ಯ ಗು ರು ಬ ಸ ವ | ೧೯
ಕುವರನೆಂದೆನಿಸಿ ಸಲಹುವದಯ್ಯ ಗುರುಬಸವ | ೨೦
ಮಲಮಾಯಪಾಶಕರ್ಮಚ್ಛೇದ ಗು ರು ಬ ಸ ವ | ೨೧
ನಲಿದೆನ್ನ ರಕ್ಷಿಸೈ ಕಲುಷಾರಿ ಗುರುಬಸವ | ೨೨
ಧೂರ್ತಸಂಸಾರದುರ್‌ಮೃತ್ಯುಹರ ಗುರುಬಸವ | ೨೩
ಅರ್ಥಿಯಿಂ ಕೊಡುಭಕ್ತಿಯುಕ್ತಿ ಶ್ರೀಗುರುಬಸವ | ೨೪
ಚಿತ್ತಚಲನವ ಮಾಣಿಸೋತ್ತಮನೆ ಗುರುಬಸವ | ೨೫
ಭೃತ್ಯನೆಂದೆನಿಸೆನ್ನ ಪ್ರತ್ಯಕ್ಷ ಗು ರು ಬ ಸ ವ | ೨೬
ಕಷ್ಟಕರ್ಮಚ್ಛೆಯಿಂ ಕೆಟ್ಟೆನಾಂ ಗುರುಬಸವ | ೨೭
ಇಷ್ಟಾರ್ಥಸಿದ್ಧಿ ಕೈಮುಟ್ಟಿಕೊಡು ಗುರುಬಸವ | ೨೮
ಎಂದೆಂದು ನೀನೆ ತಾಯ್ತಂದೆನಗೆ ಗುರುಬಸವ | ೨೯
ಇಂದೆನ್ನ ಮನದಲ್ಲಿ ನಿಂದಿಹುದು ಗುರುಬಸವ | ೩೦
ಆಶಪಾಶದಿ ಘಾಸಿಯಾದೆನ್ನೈ ಗುರುಬಸವ | ೩೧
ಈಶ ನಿಜಸುಖವನಿತ್ತು ಪೋಷಿಸೈ ಗುರುಬಸವ | ೩೨

ಜಡವಿಷಯ ಕಡಲೊಳಗೆ ತೊಡಕಿದೆನು ಗುರುಬಸವ । ೩೩
ತಡಮಾಡದೆನ್ನ ಶಿರವಿಡಿದೆತ್ತು ಗುರುಬಸವ । ೩೪
ಕುಸಿದೆ ಹಸುತೃಷೆನಿದ್ರೆವ್ಯಸನದೊಳು ಗುರುಬಸವ । ೩೫
ಕುಶಲದಿಂ ಪೊರೆಯೊ ನೀನಸಮಾಕ್ಷ ಗುರುಬಸವ । ೩೬
ದೋಷದುರ್ಗುಣಕಪಟವೇಷಿಯಾಂ ಗುರುಬಸವ । ೩೭
ಭಾಷಪಾಲಕ ದಯದಿ ಪೋಷಿಸಯ್ಯ ಗುರುಬಸವ । ೩೮
ಬದ್ಧ ಭವಪಾಶಗಳನೊದ್ದು ಶ್ರೀ ಗು ರು ಬ ಸ ವ । ೩೯
ಶುದ್ಧಾತ್ಮನೆನಿಸೆನ್ನನುದ್ಧರಿಸು ಗು ರು ಬ ಸ ವ । ೪೦
ಹೀನವೃತ್ತಿಗಳಿಂದೆ ನಾನೊಂದೆ ಗುರುಬಸವ । ೪೧
ಸ್ವಾನುಭಾವವನಿತ್ತು ಸಲಹುಮುದ್‌ಗುರುಬಸವ । ೪೨
ಕೋಪತಾಪದ ಕುಟಿಲಗುಣವರಿಸಿ ಗುರುಬಸವ । ೪೩
ಪಾಪಹರ ಭಕ್ತಿಪ್ರತಾಪ ಶ್ರೀ ಗು ರು ಬ ಸ ವ । ೪೪
ಒಳ್ಳೇಗುಣವೆನ್ನೊಳಿಲ್ಲೆಳ್ಳನಿತು ಗು ರು ಬ ಸ ವ । ೪೫
ಬಲ್ಲಿದನೆ ನಿಮ್ಮದಯದಲ್ಲಿ ಕಾಯ್ ಗುರುಬಸವ । ೪೬
ಗರ್ವಾಂಧಕಾರದೊಳ್ ಕಂಗೆಟ್ಟೆ ಗುರುಬಸವ । ೪೭
ನಿರ್ವಾಣಪದವಿತ್ತು ನಿರ್ವಹಿಸು ಗುರುಬಸವ । ೪೮
ಬೇಸತ್ತೆ ನಾಂ ಭವದ ರಾಶಿಯೊಳ್ ಗುರುಬಸವ । ೪೯
ವಾಸಿಯಿಂ ಪೊರೆಯೋ ಭುವನೇಶ ಸದ್ಗುರುಬಸವ । ೫೦
ನೈಷ್ಠೆಯಿಲ್ಲದ ಉಭಯಭ್ರಷ್ಟನೈ ಗುರುಬಸವ । ೫೧
ಮುಟ್ಟಿಯೋನಿಜಸುಖವಸೃಷ್ಟೀಶ ಗು ರು ಬ ಸ ವ । ೫೨
ಬಳಲಿದೆನು ಪ್ರಾಪಂಚದೊಳಗಾಗಿ ಗುರುಬಸವ । ೫೩
ತಲೆದಡಹಿ ಜ್ಞಾನಕಲೆವೊಲಿದೀಯೊ ಗುರುಬಸವ । ೫೪
ಕೊರಗಿದೆನು ಭೂತಕರಣಾರಿಭಯದಿ ಗುರುಬಸವ । ೫೫
ಪೊರೆಯಯ್ಯ ಚಿದ್‌ಭಸ್ಮಧರಿಸಿಮುದ್‌ಗುರುಬಸವ । ೫೬
ವಿಕಳನಾದೆನು ದುಃಖಸುಖದೊಳಗೆ ಗುರುಬಸವ । ೫೭
ಅಕಳಂಕ ಪದವೀಯೊ ಸುಖಸಾರ ಗುರುಬಸವ । ೫೮

ಅಪರಾಧಕೋಟಿಗಳನಪಹರಿಸು ಗು ರು ಬ ಸ ವ । ೫೯
ಕೃಪೆಯಿಂದೆ ನೀನೆ ಪಾಲಿಪುದೆನ್ನ ಗುರುಬಸವ । ೬೦
ಮಾದಾಂಬಿತನಯ ಸರ್ವಾಧಾರ ಗುರುಬಸವ । ೬೧
ಮೋದದಿಂ ಸಲಹೆನ್ನ ಮೃಡಮೂರ್ತಿ ಗುರುಬಸವ । ೬೨
ಕಲ್ಲಲಿಸಿಯೋದಿದಧಿಕತ್ವದಿಂ ಗು ರು ಬ ಸ ವ । ೬೩
ಕಲ್ಯಾಣ ಪುರವಾಳ್ದ ಕ ರು ಣಿ ಸದ್ಗುರುಬಸವ । ೬೪
ಪುರಹರನ ಮೆಚ್ಚಿಸಿದ ವರದ ಶ್ರೀಗುರುಬಸವ । ೬೫
ಸರಿಯುಂಟೆ ಲೋಕದೊಳು ದೊರೆ ನಿನಗೆ ಗುರುಬಸವ । ೬೬
ಬಿಜ್ಜಳನ ಮಂತ್ರಿಪದವಿಯನಾಳ್ದ ಗುರುಬಸವ । ೬೭
ಸಜ್ಜನಾಚಾರ ಸುಖಸಾರ ಶ್ರೀಗುರುಬಸವ । ೬೮
ಜಂಗಮಪ್ರಾಣಿ ಭವಭಂಗ ಸದ್‌ಗುರುಬಸವ । ೬೯
ಮಂಗಳಾಕಾರ ಶಿವಸಂಗ ಶ್ರೀ ಗು ರು ಬ ಸ ವ । ೭೦
ತೊಗರಿ ರನ್ನವ ಮಾಡಿ ತೋರಿ ಸದ್ಗುರುಬಸವ । ೭೧
ಜಗದೊಳಗೆ ಮೆರೆದೆ ನೀ ನಿಗಮನುತ ಗುರುಬಸವ । ೭೨
ಕಾಡಹುಲಿಹಾಲ ಜಂಗಮಗೆರದೆ ಗುರುಬಸವ । ೭೩
ಪ್ರೌಢನೆನಿಸಿದ ಮಹಾಪ್ರಮಥೇಂದ್ರ ಗುರುಬಸವ । ೭೪
ನೀರಗಟ್ಟಿಯಮಾಡಿ ತೋರಿಸುತೆ ಗುರುಬಸವ । ೭೫
ಧಾರುಣೀಶನ ಗೆದ್ದ ಧನ್ಯ ಶ್ರೀಗುರುಬಸವ । ೭೬
ಧೈರ್ಯದಿಂ ಸೂರ್ಯಚಂದ್ರರತಡೆದೆ ಗುರುಬಸವ । ೭೭
ಸ್ಥೈರ್ಯಸದ್ಭಕ್ತಿ ಸೌಂದರ್ಯ ಶ್ರೀಗುರುಬಸವ । ೭೮
ನಾರಿಯಂ ಶಿವಗಿತ್ತು ನಾಚಿಸಿದ ಗುರುಬಸವ । ೭೯
ವೀರಾವತಾರ ನಿನಗಾರು ಸರಿ ಗುರುಬಸವ । ೮೦
ತೃಣದಿ ಮೀಮಾಂಸಕನ ಮಣಿಯಿಸಿದ ಗುರುಬಸವ । ೮೧
ತ್ರಿಣಿಯಸದ್ಭಕ್ತಪಾವನದೀಪ ಗು ರು ಬ ಸ ವ । ೮೨
ಉಣಿಸಿದ್ದೈ ವಿಷವಮೃತಕೆಣೆಮಾಡಿ ಗುರುಬಸವ । ೮೩
ಜಿನಕುಲಾಬ್ಜಮದೇಭ ಚಿನ್ಮಯನೆ ಗುರುಬಸವ । ೮೪

ನೋಡಿ ಚಿತ್ರವ ಚರರ ಮಾಡಿದ್ಯೆ ಗುರುಬಸವ । ೮೫
ನಾಡೊಡೆಯನಹುದೆನಿಸಿ ನಲಿದ ಶ್ರೀಗುರುಬಸವ । ೮೬
ಆರ್ಯನೀನಾಡಿಸಿದೊಲಾಡುವೆಂ ಗುರುಬಸವ । ೮೭
ಜೀಯ ಸ್ವಾತಂತ್ರ್ಯವಿಲ್ಲೈ ಎನಗೆ ಗುರುಬಸವ । ೮೮
ಹುಟ್ಟಿಸಿದ ತಾಣದೊಳ್ ಹುಟ್ಟಿದೆಂ ಗುರುಬಸವ । ೮೯
ಮುಟ್ಟಿ ರಕ್ಷಿಸಲು ಸುಖಬಟ್ಟೆನೈ ಗುರುಬಸವ । ೯೦
ನಿನ್ನನೆನೆದಾಗಲಾಂ ಧನ್ಯನೈ ಗು ರು ಬ ಸ ವ । ೯೧
ಇನ್ನಂಜೆ ಭವಭಯಕ್ಕಂಜೆ ನಾಂ ಗುರುಬಸವ । ೯೨
ದೃಢವುಳ್ಳವರ ಕಾಯ್ದೊಡಹುದೇನು ಗುರುಬಸವ । ೯೩
ಬಡವರಸು ಪೊರೆವುದದು ಬಹುಘನತೆ ಗುರುಬಸವ । ೯೪
ದುರಿತಹರನೆಂಬುದಕೆ ದೃಷ್ಟವಿದೆ ಗುರುಬಸವ । ೯೫
ದುರಿತವೆನ್ನೊಳು ಹರಸಿದೊಡೆಸಾಕ್ಷಿ ಗುರುಬಸವ । ೯೬
ಮರ್ತ್ಯದೊಳು ನಿನ್ನ ಸ್ತುತಿಸುತ್ತಿರಲು ಗುರುಬಸವ । ೯೭
ಮತ್ತೆ ಭವವಾಗಲಪಕೀರ್ತಿಯೈ ಗು ರು ಬ ಸ ವ । ೯೮
ಎನ್ನ ಚಿಂತಾಮಣಿಯೆ ಮನ್ನಿಸೈ ಗು ರು ಬ ಸ ವ । ೯೯
ಎನ್ನ ಸುರತರುವೆ ಪೊರೆಯಿನ್ನು ಸದ್ಗುರುಬಸವ । ೧೦೦
ಶರಣಾಗತತ್ರಾಣ ಬಿರುದಾಂಕ ಗು ರು ಬ ಸ ವ । ೧೦೧
ಮರೆಹೊಕ್ಕೆ ನಿಮ್ಮ ಪದದರಿವೀಯೊ ಗುರುಬಸವ । ೧೦೨
ಪ್ರತ್ಯಕ್ಷ ದೈವ ನಿ ರು ಪ ದ್ರ ಶ್ರೀ ಗು ರು ಬ ಸ ವ । ೧೦೩
ನಿತ್ಯತ್ವವೀಯೊ ಸರ್ವೋತ್ತಮನೆ ಗುರುಬಸವ । ೧೦೪
ಸುತನ ತೊದಲ್-ನುಡಿಗೇಳ್ವಪಿತನವೊಲ್ ಗುರುಬಸವ । ೧೦೫
ಹಿತದೆನ್ನ ನುಡಿಯ ಕೇಳುತೆ ಕಾಯೊ ಗುರುಬಸವ । ೧೦೬
ಶರಣಾರ್ಥಿ ಶರಣಾರ್ಥಿ ಶರಣಾರ್ಥಿ ಗುರುಬಸವ । ೧೦೭
ಶರಣಾರ್ಥಿ ಘ ನ ಮ ತೇ ಶ ನೆ ನಿತ್ಯಗುರುಬಸವ । ೧೦೮

.... ೨೬ ....

ಬಸವೇಶ್ವರನ ಜೋಗುಳಪದ

ಶ್ರೀ ಪರಬ್ರಹ್ಮಸ್ವರೂಪ ಸರ್ವಜ್ಞ
ಗೋಪವಾಹನ ಹೃದಯದೀಪಕ ಸುಸಾಜ್ಞ ।
ತಾಪತ್ರಯಾದಿ ಗುಣಲೋಪ ಪ್ರತಿಜ್ಞ
ಭಾಪುರೇ ಬಸವ ಪ್ರತಾಪ ತತ್ವಜ್ಞ ಜೋ ಜೋ ॥ ಪ ॥

ಜೋ ಜೋ ಬಸವಲಿಂಗ ಜೋ ಭಕ್ತಸಂಗ ।
ಜೋ ಜೋ ಬಸವಲಿಂಗ ಜೋ ಸುಪ್ರಸಂಗ ।
ಜೋ ಜೋ ಬಸವಲಿಂಗ ಜೋ ಗುಣೋತ್ತುಂಗ ।
ಜೋ ಜೋ ಬಸವಲಿಂಗ ಜೋ ಪಾಂಡುರಂಗ ಜೋ ಜೋ ೧

ಏನೇನುಮಿಲ್ಲದ ದಾರಿಲ್ಲದಂದು ।
ನೀ ನೆನೆಯಕಳೆನಾದ ಬಿಂದುಗಳವಂದು ॥
ತಾನಾಗಲವು ಲಿಂಗ ರಚಿಸಿ ಜಗವಂದು ।
ನೀನಿರ್ದೆ ನಿರ್ದೇಹ ಚೈತನ್ಯದೊಳ್ ನಿಂದು ಜೋ ಜೋ ೨

ಲೀಲೆಯಿಂದೇಳು ಜನ್ಮವ ತಾಳಿ ಬಂದು ।
ಬಾಲೇಂದುಧರ ಭಕ್ತಿಪ್ರಚುರಕ್ಕೆ ತಂದು ॥
ಪಾಲಿಸಿದೆ ಭುವನವನರಿದುಂ ಬಾಳಲೆಂದು ।
ಕಾಲಸಂಹರ ರೂಪ ನೀ ದಯಾಸಿಂಧು............ ೩

ಧರ್ಮಮಂ ನಾಲ್ಕುಪದದಿಂ ಕೃತಾಯುಗದಿ ।
ಧರ್ಮಮಂ ತ್ರೈತಾಯುಗದಿ ಮೂರುಪದದಿ ॥
ಧರ್ಮಮಂ ದ್ವಾಪಾರಯುಗದಿ ದ್ವೈಪದದಿ ।
ಧರ್ಮಮಂ ನಡೆಸಿದೇಕಪದದಿ ಕಲಿಯುಗದಿ............ ೪

ಶ್ರುತಿರಪುತ್ರಸ್ಯ ಗತಿರ್ನಾಸ್ತಿ ಎಂದಂದು ।
ನುತಿಸೆ ಕೇಳ್ ಶೈಲಾದ ತಪದೊಳಿರಲಂದು ॥
ಅತಿಶಯದಿ ನಂದಿನಾಮದಿ ಜನಿಸಿ ಬಂದು ।
ಹಿತದಿ ಹೊಗಳಿಸಿದೆ ದ್ವಿತೀಯ ಶಿವನೆಂದು........... ೫

ಅಂದು ರಕ್ಕಸರ ಪಡೆಯಂ ಮುರಿವ ನೆವದಿ ।
ಇಂದುಶೇಖರ ಪಾರ್ವತಿಯರ ಜಠರದಿ ॥
ನಿಂದು ಪರತತ್ವದಾಕೃತಿಯಿಂ ಸದಯದಿ ।
ಸ್ಕಂದನಾಮದಿ ಜನಿಸಿ ಬಂದೆಯ್ಯೆ ಮುದದಿ........... ೬

ಅಂಧಕಾಸುರನುಪಟಳಕ್ಕಾರದಮರ- ।
ವೃಂದವದು ಗೋಳಿಡಲು ಚಂದದಿಂದವರ ॥
ಹೊಂದಿ ಕಾಯಲ್ಕವರ ಕೊಂದೆ ಜಿತಮಾರ ।
ಅಂದು ನೀ ನೀಲಲೋಹಿತನೆನಿಸಿದ್ದೈ ಧೀರ........... ೭

ಗೌರೀವಿವಾಹದೊಳ್ ಘನತೇಜದಿಂದೆ ।
ಸಾರಪ್ರಮಥರ್ಗೆ ಸಖನಾಗಿ ನಲವಿಂದೆ ॥
ವಾರಿಸಿದಿ ಘೋರಕಂಟಕವಂದದಿಂದೆ ।
ಪಾರಮಾರ್ಥದಿ ಕಾಲನೆಂಬಾಖ್ಯದಿಂದೆ........... ೮

ಮಾರಹರನಮಳ ಭಕ್ತಿಜ್ಞಾನ ಪಾರಾ- ।
ವಾರನೆಂದೆನಿಸಿ ಯಾತನೊಳ್ಬೈದಿ ಧೀರ ॥
ವೀರಶೈವವನರುಹಿ ಕಾಯ್ದಿ ಭವದೂರ ।
ಶೂರ ಮನೋಹರನವತಾರದೊಳುದಾರ........... ೯

ವಾಸವಾದಿಗಳು ದೂಷಿಸುತಿರಲು ಬಹಳ ।
ಘಾಸಿಮಾಡುತೆ ತೆಗೆದೆಯವರ ಭಾಗ್ಯಗಳ ॥
ಧ್ಯಾಸದಿಂ ಧರೆ ನುತಿಸಲಾತ್ರ್ಯ-ಕ್ಷರಗಳ ।
ಪೋಷಿಸಿದಿ ವೃಷಭಾಂಕದಿಂದಂದವಿರಳ........... ೧೦

ಚರಭಕ್ತಿ ಮರ್ತ್ಯದೊಳಗರುಹಿ ಬಾಯೆಂದು ।
ಹರನು ಕಳುಹಲು ಬಾಗೆವಾಡಿಗೈತಂದು ॥
ತರುಣಿ ಮಾದಾಂಬೆಯಾ ಜಠರದೊಳ್ ನಿಂದು ।
ಭರದಿ ಜನಿಸಲು ಬಸವನಾಮದಿಂದಂದು............ ೧೧

ಮಿಸುನಿಯಿಂ ತೊಟ್ಟಿಲವ ರಚಿಸಿಮೆನಲಂದು ।
ಪೊಸಮುತ್ತುರತ್ನಗಳ ಕುಶಲೆಯರ್ ತಂದು ॥
ಒಸೆದು ಶೃಂಗರಿಸಿ ಪ್ರಸವದ ಶಯ್ಯೆದೆಂದು ।
ಸಸಿನ ಮಂಡಿಸಿ ನಿಮ್ಮ ಹೊಗಳ್ದರಿಂತೆಂದು............ ೧೨

ಬಸವ ಬಸವಾ ಬಸವ ಬಸವ ಬಸವೇಶ ।
ಬಸವ ಬಸವಾ ಬಸವ ಭಕ್ತಾಬ್ಧಿಭೇಶ ॥
ಬಸವ ಬಸವಾ ಬಸವ ಪರಮಪ್ರಕಾಶ ।
ಬಸವ ಬಸವಾಯೆಂದು ಪೆಸರುಗೊಂಡೀಶ............ ೧೩

ಕಿನ್ನರ ಬ್ರಹ್ಮಯ್ಯ ಕೇಶಿರಾಜಯ್ಯ ।
ಕನ್ನದ ಬ್ರಹ್ಮಯ್ಯ ಕಾಶಿರಾಜಯ್ಯ ॥
ಹೊನ್ನಯ್ಯ ಹಡಪದಪ್ಪಣ್ಣ ಮಾಚಯ್ಯ ।
ಧನ್ಯರುಗಳಣುಗನೆನ್ನಣ್ಣ ಬಸವಯ್ಯ............ ೧೪

ಸಂಗಯ್ಯ ಶಿವರಾತ್ರಿಸಂಗಯ್ಯ ಮುಗುದ ।
ಸಂಗಯ್ಯ ವೈದ್ಯದಾ ಸಂಗಯ್ಯ ವರದ- ॥
ಸಂಗಯ್ಯ ಕೂಡಲಾ ಸಂಗಯ್ಯ ವರದ ।
ಸಂಗಯ್ಯಗಳ ಕುವರಸ್ವಾಮಿಗಳ ವರದ............ ೧೫

ಮಾರಯ್ಯನರಿವಿನಾಮಾರಯ್ಯ ಥಕ್ಕೆ- ।
ಮಾರಯ್ಯ ಕೂಗಿನಾಮಾರನಾಯ್ದಕ್ಕಿ- ।
ಮಾರಯ್ಯ ಗೋಣಿಯಾ ಮಾರಯ್ಯ ತೆಕ್ಕಿ- ।
ಮಾರಯ್ಯರುಗಳ ಸುಕುಮಾರನಾಯ್ದಕ್ಕಿ............ ೧೬

ಬ್ರಹ್ಮಯ್ಯ ಕಲಕೇತ ಬ್ರಹ್ಮಯ್ಯ ಗುಂಡ- ।
ಬ್ರಹ್ಮಯ್ಯ ಬಡಿಹೋರಿ ಬ್ರಹ್ಮಯ್ಯ ಮುಂಡ- ।
ಬ್ರಹ್ಮಯ್ಯ ಹಾದರಾಬ್ರಹ್ಮಯ್ಯ ಮಿಂಡ- ।
ಬ್ರಹ್ಮಯ್ಯರುಗಳ ಸದ್ಧರ್ಮ ಪ್ರಚಂಡ........... ೧೭

ಮನ್ನಣೆಯ ಪ್ರಹರಿಸೋಮಣ್ಣ ನಜಗಣ್ಣ ।
ಚೆನ್ನಪ್ರಭುರಾಯ ಬಂಕಣ್ಣ ರೇಚಣ್ಣ ॥
ಉನ್ನತದ ಭಕ್ತಿಪ್ರಸನ್ನನುತ್ತಣ್ಣ ।
ಧನ್ಯರುಗಳಣುಗನೆನ್ನಣ್ಣ ಬಸವಣ್ಣ........... ೧೮

ಕಾರಿಕಾಲಮ್ಮ ಹೇರೂರ ತಿಲಕವ್ವಾ ।
ಸೂರಸಾನಮ್ಮ ಮುದನೂರ್ ಗುಗ್ಗಳವ್ವಾ ॥
ಮಾರಹರನಂ ಪೆತ್ತ ಧೀರೆಯಮ್ಮವ್ವಾ ।
ವೀರಭಕ್ತಿಯರ ಹೃತ್ಪೂರ ಹತಗರ್ವ........... ೧೯

ಅಕ್ಕಮಾದೇವಿ ಮುಕ್ತಾಯಿ ಸತ್ಯಕ್ಕ ।
ಅಕ್ಕನಾಗಾಯಿ ಚೋಳಕ್ಕ ನಿಂಬ್ಯಕ್ಕ ॥
ಅಕ್ಕಚಂಗಳೆ ಮಾಯಿದೇವಿ ಚೆನ್ನಕ್ಕ ।
ಅಕ್ಕಸುಗ್ಗಲೆಯ ಮೊದಲಾದ ವಾರ್ಧಿಕ್ಯ........... ೨೦

ಈಶ ಬಸವೇಶ ಶಶಿಭೂಷ ಬಸವೇಶ ।
ಪೋಷ ಬಸವೇಶ ಭವನಾಶ ಬಸವೇಶ ॥
ತೋಷ ಬಸವೇಶ ಮುಕ್ತೀಶ ಬಸವೇಶ ।
ಭಾಷಪಾಲಕ ಘನಮತೇಶ ಬಸವೇಶ........... ೨೧

.... ೨೭ ....

ಎಣ್ಣೆ ಹಚ್ಚುವ ಪದ

ಶ್ರೀಮತಿಯುತ ಗುರುರಾಯ ಬಸವಂಗೆಣ್ಣೆ
ಶ್ರೀಯರ್ ಹಚ್ಚುವ ಬನ್ನಿರೆ .... ||ಪ||

ಸನ್ನುತಾಂಗಿಯರು ಸ್ವರ್ಣದ ಬಟ್ಟಲೊಳು ಸಂಪಿ
ಗೆಣ್ಣೆಯ ತುಂಬುತಲಿ ।
ಮನ್ನಣೆಯಿಂ ಸುಪ್ರಸನ್ನ ಬಸವಣ್ಣಗೆ
ಳ್ಳೆಣ್ಣೆ ಹಚ್ಚುವ ಬನ್ನಿರೆ ೧

ಸಾರಕಸ್ತೂರಿಘನಸಾರ ಶ್ರೀಗಂಧದ
ಸಾರವಗಡಣೆಸುತೆ ।
ಮೂರು ಲೋಕಂಗಳ ಮುದದಿ ಪೊರೆವ ಘನ-
ಧೀರಗ್ಹಚ್ಚುವ ಬನ್ನಿರೆ ೨

ಚಿನ್ನದೋಲೆಯ ಬಳೆ ರನ್ನದ ಮೂಗುತಿ
ಯನ್ನುಳಿದಾ ತೊಡಿಗೆಗಳ ।
ಚೆನ್ನಾಗಿ ಧರಿಸುತಲಣ್ಣ ಬಸವಣ್ಣಗೆ-
ಳ್ಳೆಣ್ಣೆ ಹಚ್ಚುವ ಬನ್ನಿರೆ ೩

ಶರಣಸತಿಯರು ಪರಮ ಮುತ್ತೈದೇರು
ಹರುಷದಿಂದಲಿ ಪಾಡುತೆ ।
ಸಿರಿಗಂಧದೆಣ್ಣೆಯ ಸ್ಥಿರಮುಕ್ತಿಯರಸಗೆ
ಭರದಿ ಹಚ್ಚುವ ಬನ್ನಿರೆ ೪

ಅಗಣಿತಮಹಿಮಗೆ ಜಗದೇಕವೀರಗೆ
ನಿಗಮಗೋಚರನಿಗೆ ।
ಸೊಗಸಿಂದೆಲೆಳ್ಳೆಣ್ಣೆಯಘಹರ ಬಸವಗೆ
ಸುಗುಣೇರ್ ಹಚ್ಚುವ ಬನ್ನಿರೆ ೫

ಎಲ್ಲಜನರೋಳೋರ್ವನಲ್ಲವೀತನೆ ಶಿವ
ಹುಲ್ಲಿಗಂಗಳೆಯರೆ ।
ಉಲ್ಲಾಸದಿಂದೆಣ್ಣೆ ಕಲ್ಯಾಣ ಬಸವಂಗೆ
ಚೆಲ್ವೇರ್ ಹಚ್ಚುವ ಬನ್ನಿರೆ ೬

ಗಂಗಾಂಬೆಯರ ಪ್ರಾಣಸಂಗವಾಗೊಪ್ಪುವ
ಸಂಗನಬಸವನಿಗೆ ।
ಶೃಂಗಾರದಲಿ ಪಾಡುತಂಗನೆಯರು ತೈಲ-
ವಿಂಗಡ್ಡ ಹಚ್ಚುವ ಬನ್ನಿರೆ ೭

ಇದೆ ಮುಕ್ತಿಮಾರ್ಗಮಿಂತಿದೆ ಭಕ್ತಿಮಾರ್ಗಮಿಂ
ತಿದೆ ಧರ್ಮಮಾರ್ಗಮಿದೆ ।
ಮದನಾರಿ ಭಕ್ತೆಯರ್ ಸದಯಬಸವಂಗೆಣ್ಣೆ
ಮುದದಿ ಹಚ್ಚುವ ಬನ್ನಿರೆ ೮

ಬಸವನ ನೋಡುತೆ ಬಸವನ ಪಾಡುತೆ
ಬಸವನೊಳ್ ಕೂಡುತೆ ।
ವಶವಾಗಿ ಘನಮತವಾಸಗೆ ಕಮ್ಮೆಣ್ಣೆ
ಕುಶಲೇರ್ ಹಚ್ಚುವ ಬನ್ನಿರೆ ೯

.... ೨೮ ....

ಶೋಭಾನದ ಹಾಡು

ಶೋಭನವೆನ್ನಿರೆ ಶುಭಕರ ಬಸವೇಶನಿಗೆ
ಶೋಭನಾಂಗಿಯರು ಸೊಬಗಿಂದ ॥ ಸೋ ॥ಪ॥

ಆದಿಯಿಂದತ್ತತ್ತಲಾದ ಪರಶಿವ ತಾನೆ ।
ಸಾದರದಿಂದ ನೆನೆಯಲ್ಕೆ ಸೋ ॥
ಸಾದರದಿಂ ನೆನದ ನೆನಸೆ ಚಿದ್ರೂಪಾಗಿ ।
ವೋದದಿಂದೊಗೆದ ವೃಷಾಧಿಪಗೆ ॥ ಸೋ ೧

ನೆರೆತಿಳಿದುಪ್ಪವೆ ಹೆರೆದುಪ್ಪವಾದಂತೆ ।
ಪರಶಿವಶರಣನೆಂದೆನಿಸುತ್ತೆ ॥ ಸೋ ॥
ಪರಶಿವಶರಣನೆಂದೆನಿಸಿ ಜಗವ ಸೃಜಿಸಿ ।
ಪೊರೆದ ಚಿದದ್ವಯಗೊಲಿದೀಗ ॥ ಸೋ ೨

ಹಿಂದೆ ಬಹುಗಣನಾಮದಿಂದ್ವೈದಿಕುಮತಗ- ।
ರ್ವಾಂಧಸಂದೋಹವರಿಸಿದಗೇ ॥ ಸೋ ॥
ಅಂಧಸಂದೋಹವ ಹರಸುತ್ತಡಿಗೆರಗಿದರ ।
ಚಂದದಿಂ ಪೊರೆದ ಭವನಿಗೇ ॥ ಸೋ ೩

ವೇದವೇದಾಂತ ಸಂಪಾದಿತೆನ್ನಯ ಭಕ್ತಿ ।
ಮೇದಿನಿಗರುಹೆಂದನಭವನು ॥ ಸೋ ॥
ಮೇದಿನಿಗರುಹೆಂದಭವನಪ್ಪಣೆಯಾಗಲಾ ।
ಮೋದದಿಂದಲಿ ಧರೆಗೈದಿ ॥ ಸೋ ೪

ಪರಮೇಶನಾಜ್ಞೆಯಿಂದುರೆ ಬಾಗೆವಾಡಿಯೊಳು ।
ತರುಳೆ ಮಾದಾಂಬೆ ಸುತನೆನಿಸಿ ॥ ಸೋ ॥
ತರುಳೆ ಮಾದಾಂಬೆಯ ಸುತನೆನಿಸಿದ ಬಸವ ।
ವರನಾಮ ಪಡೆದ ಭವನಿಗೆ ॥ ಸೋ ೫

ಮರುಗಕ್ಕೆ ಪರಿಮಳ ನೀರೊಡನೈತಪ್ಪಂತೆ ।
ಹರಭಕ್ತಿಸಹಿತುದಭವಿಸಿ ॥ ಸೋ ॥
ಹರಭಕ್ತಿಸಹಿತುದಭವಿಸಿದ ಪರಮಾತ್ಮನಿಗೆ ।
ಶರಣು ಸುಸತಿಯದೊಲವಿಂದೆ ॥ ಸೋ ೬

ಉಪನಯನದ ಕರ್ಮವಪಹರಿಸಿ ಸಂಗಮದ ।
ಸುಪಥವಿಡಿದೈದೆ ಶಿವನಿಂದೆ ॥ ಸೋ ॥
ಸುಪಥವಿಡಿದೈದೆ ಸಂಗನ ನುಡಿಸಿ ಸಹಸದಿಂ ।
ಕಪಟ ವಿಪ್ರರನು ಗೆಲಿದನಿಗೆ ॥ ಸೋ ೭

ಆರಾರರಿಯದ ಷಟುಸ್ಥಲಸಾರಜ್ಞಾನವ ।
ತೋರಿ ರಕ್ಷಿಸಲೆಂದುದಿಸಿದಗೆ ॥ ಸೋ ॥
ತೋರಿ ರಕ್ಷಿಸಲೆಂದುದಿಸಿದ ಚರಪ್ರಾಣಾ- ।
ಧಾರವಾಗಿರ್ಪಭಯನಿಗೆ ॥ ಸೋ ೮

ಅಷ್ಟಾವರಣದ ಪೂರ್ವರಿಷ್ಟಾವಳಿದು ಪರಮ ।
ನಿಷ್ಠರಿಗತಿ ಹರುಷವನಿತ್ತು ॥ ಸೋ ॥
ನಿಷ್ಠರಿಗತಿ ಹರುಷವನಿತ್ತು ಪಾಶದೊಳು ।
ಕಟ್ಟುವಡೆದ ಜಿನಕುಲಹರಗೆ ॥ ಸೋ ೯

ಕುಂಭಿನಿಯೊಳೆರಡನೆಯ ಶಂಭುವೆನಿಸುತೆ ಭಕ್ತಿ- ।
ಸಾಮ್ರಾಜ್ಯದಿರುವ ಮಾಯಾಹರಗೆ ॥ ಸೋ ॥
ಸಾಮ್ರಾಜ್ಯದಿರುವ ಗಂಗಾಂಬೆಯಾಣ್ಮನಿಗೀಗ ।
ನಂಬಿಗೆಯಿಂದೆ ನಮಿಸುತೆ ॥ ಸೋ ೧೦

ಈಶಮತಶರಧಿ ತಾರೇಶನೆನಿಸಿದ ಭುವನ ।
ಪೋಷಂಗನುಪಮ ಮಹಿಮನಿಗೆ ॥ ಸೋ ॥
ಪೋಷಂಗನುಪಮ ಮಹಿಮಾಧೀಶ ಶ್ರೀಘನಮಠ ।
ವಾಸಂಗೆ ಸುಗುಣಿಯರು ಮುದದಿ ॥ ಸೋ ೧೧

.... ೨೯ ....

ಬಸವ ಮಹಿಮಾ ತ್ರಿವಿಧಿ

ಶ್ರೀ ಗುರುವೆ ಕರುಣಾರಸ ಸಾಗರವೆ ನಿಜಮೋಕ್ಷ- ।
ದಾಗರವೆ ನಿನ್ನ ಪದಪದ್ಮವತಿ ಸುಖವ- ।
ನೀಗೆ ಸುಜನಾಳಿಗನು ದಿವಸ ॥ ೧

ಶಿವನೇ ಬಸವಂ ಬಸವನವನೇ ಶಿವನೆಂದು ಶ್ರುತಿ- ।
ನಿವಹವೆಡೆವಿಡದೆ ಪೊಗಳುತಿಹುದಾಗಿ ನಾ- ।
ನವಿರತಂ ಬಿಡದೆ ನುತಿಸುವೆನು ॥ ೨

ಗುರು ಲಿಂಗ ಚರರೂಪವೆರೆದಕ್ಷರವೆ ನಾಮು- ।
ಕರುಣವಾಗಿರ್ಪ ಬಸವಾಕ್ಷರದೊಳೊಂದ ।
ಸ್ಮರಿಸಲವ ಮುಕ್ತನೆನೆ ಪೊಗಳ್ವೆ ॥ ೩

ಹರನಿಂದಲಧಿಕ ಸದ್ಗುರು ಬಸವನೆಂದನಿಶ ।
ವರ ರಹಸ್ಯವಚನವಿಹುದರಿಂದುರೆ ಪೊಗಳಿ ।
ದುರಿತವನು ಗೆಲಿವೆನಿಹದಲ್ಲಿ ೪

ಬಸವಯೆಂಬುವನ ಮುಖ ಬಿಸಜಮುತ್-ಸದನವೆಂ- ।
ದಮಾಕ್ಷ ದೇವಿಯಗೊರೆದನಾಗಿ ನಾ- ।
ನುಸುರಿ ಪರಮಾರ್ಥ-ವಡೆದಪೆನು ॥ ೫

ಒರೆದಾಪ್ರಭುವಿಂತು ಮುಚ್ಛರಣ ವರ್ಜಿಸಿ ಮೋಕ್ಷ ।
ದೊರೆಯಾದೀ ಬಸವಾಕ್ಷರವ ಸ್ಮರಿಸಲು ಮುಕ್ತಿ ।
ವರನಪ್ಪೆನೆನಲಾನುರೆ ನುತಿಪೆ ॥ ೬

ಶರಣಾಗತತ್ರಾಣ ಬಿರುದಾಂಕನೆಂದು ಶಿವ- ।
ಶರಣರೊಳ್ ಕೀರ್ತಿವೆತ್ತಕಾರಣದಿ ಬಸ- ।
ವರಸ ನಾ ನಿಮ್ಮಂಘ್ರಿಯ ಭಜಿಪೆ ॥ ೭

ನಿಮ್ಮ ಪೊಗಳಲ್ಕೆ ಹರಿಬ್ರಹ್ಮರಳವಲ್ಲವೆನ- ।
ಲು ಮರ್ತ್ಯರೊಳಗೆ ಕಿರಿಯಾರೊಳ್ ಕಿರಿಯ ನಾ ।
ನಿಮ್ಮ ಪೊಗಳಲ್ಕೇತರವನಯ್ಯ ॥ ೮

ಬಾಲಕನ ತೊದಲನುಡಿಗೇಳಿ ಪಿತ ಸಂತೈಸು- ।
ವೋಲೆನ್ನ ನುಡಿಯನಾಲಿಸೈ ಸದ್ಭಕ್ತ- ।
ಲೋಲ ಬಸವೇಶ ಬಿಡದೆನ್ನ ॥ ೯

ಶ್ರೀದಾಪ್ತನಾಜ್ಞೆಯಿಂ ಮಾದಾಂಬೆಸುತನೆನಿಸು- ।
ತೈದೆ ಬಸವಾಹ್ವಯದಿ ಜಗದೊಳಗೆ ತೋರಿ-
ದಾದಿ ಪವಾಡಂಗಳನುಸುರ್ವೆ ॥ ೧೦

ಕೃಷ್ಣವೇಣಿಯ ತಡೆದು ಭ್ರಷ್ಟವಿಪ್ರರು ನೋಡೆ ।
ಬಟ್ಟೆಗೊಂಡಾಗ ಸಂಗಮಕೆ ಪೋದ ಗುರು- ।
ಶ್ರೇಷ್ಠ ಬಸವೇಶಾ ಶರಣಾಗು ॥ ೧೧

ಅಷ್ಟಮೂರ್ತಿಯ ಭಕ್ತಿನೈಷ್ಠೆನೋಡಲ್ಕೆಂದು ।
ಕಷ್ಟವಿಪ್ರರಿಗೆ ಬಟ್ಟೆಗಂಗೆಯೊಳೀಸಿ ।
ಕೊಟ್ಟ ಬಸವೇಶಾ ಶರಣಾಗು ॥ ೧೨

ಸಂಗಮೇಶ್ವರನಿಂ ಪ್ರಸಂಗಿಸುತಲಾ ವಿಪ್ರ- ।
ಸಂಗದೊಳ್ ಪೂಜ್ಯನೆನಿಸಿ ಮೆರೆದಾ ಭವ ।
ಭಂಗ ಬಸವೇಶಾ ಶರಣಾಗು ॥ ೧೩

ಎನಗೆ ಬಸವೇಶ್ವರನ ಘನಪೂಜೆಯಧಿಕವೆಂ- ।
ದನಘ ಸಂಗೇಶನೆಂದೆನಿಸಿ ಮೆರೆದ ಮ- ।
ಜ್ಜನಕ ಬಸವೇಶಾ ಶರಣಾಗು ॥ ೧೪

ಬಾವಿಯೊಳ್ ಬಿದ್ದವಗೆ ದೇವರಪ್ಪಣೆಯಿಂದೆ ।
ಜೀವವಿತ್ತವನ ನುಡಿಸಿದತಿ ಸದ್ಭಕ್ತಿ- ।
ಭಾವ ಬಸವೇಶಾ ಶರಣಾಗು ॥ ೧೫

ಹರಭಕ್ತಿ ಪ್ರಕಟವಾಯ್ತಿರಬಾರದೆಂದು ಮಂ- ।
ಚರಸನಸುಗಳೆಯೆ ಚರಣವಿಡಿದಸುವಿತ್ತ ।
ಶರಣ ಬಸವೇಶಾ ಶರಣಾಗು ॥ ೩೨

ವಸುಧೀಶನರಸಿಯ ಕುಶಲ ಜಂಗಮಕಿತ್ತು ।
ಪೊಸಸತಿಯಳವಗೆ ಸತಿಯಳಾಕೃತಿಮಾಡಿ- ।
ದಸಮ ಬಸವೇಶಾ ಶರಣಾಗು ॥ ೩೩

ಪಾದುಕೆಯೊಳು ಹರಳಯ್ಯ ರೂಪಿರೆ ನಮಿಸ- ।
ಲಾ ಧರಾಧೀಶ ಚೇತನವೆ ಎನೆ ನುಡಿಸಿ- ।
ದಾದಿ ಬಸವೇಶಾ ಶರಣಾಗು ॥ ೩೪

ವಸುಮತೀಶ್ವರ ಕೇತಕಿಸುಮವೀಯಲು ಲಿಂಗ- ।
ಕೊಸೆದು ಧರೆಸುತ್ತಲೆಲ್ಲ ಲಿಂಗಗಳೊಳೂ- ।
ಹಿಸಿದ ಬಸವೇಶಾ ಶರಣಾಗು ॥ ೩೫

ಬಸವ ಪ್ರಸಾದಮೆನಲೊಸೆದು ಕೈಕೊಳಲರಸ ।
ಪಸದಿ ಹಿಡಿ ಕಜ್ಜಮೆನಲು ಪುಳುವೆನಿಸಿ ತೋ- ।
ರಿಸಿದ ಬಸವೇಶಾ ಶರಣಾಗು ॥ ೩೬

ಶಿವನ ಪ್ರಸಾದವೆನುತವನೀಶ ನಾಗಮ್ಮ- ।
ನವರ ಮನೆ ಭೋಗಿಸ ಕಳುಹೆ ಶಿಶುವಾಗಿ ಮೊಲೆ ।
ಸವಿದ ಬಸವೇಶಾ ಶರಣಾಗು ॥ ೩೭

ಅರಸನಂ ನಿನ್ನ ಬರದುರಿಮುಖಕ್ಕಿಸಿಯೊಳಿ- ।
ದರೆ ಸತ್ಯವಳಿದವನೆ ಹುಸಿಕನೆಂದುಳಿದು ।
ಮೆರೆದ ಬಸವೇಶಾ ಶರಣಾಗು ॥ ೩೮

ಮಂಡಲೇಶನ ಸತಿಯ ಮಿಂಡ ಜಂಗಮ ಪೋಗೆ ।
ಕಂಡರಸನಿರಿಯೆ ಮರಳಿ ಪ್ರಾಣವನಿತ್ತ- ।
ಖಂಡ ಬಸವೇಶಾ ಶರಣಾಗು ॥ ೩೯

ಕಲ್ಯಾಣಪಟ್ಟಣದೊಳೆಲ್ಲಾ ಜನರಹುದೆನಲು ।
ಕಲ್ಲಲಿಪಿಯನೋದಿ ಭೂಪಗರ್ಘವನಿತ್ತ ।
ಚೆಲ್ವ ಬಸವೇಶ ಶರಣಾಗು ॥ ೧೬

ನಂದಿಯುಂಗರ ತೆಗೆದು ವಂದಿಸಲು ಹರಿಪೀಠ- ।
ವಂದುರಿಯಲಾಗಲಾ ನೃಪ ನಮಿಸೆ ಪಾಲಿಸಿದ ।
ತಂದೆ ಬಸವೇಶ ಶರಣಾಗು ॥ ೧೭

ಲೆಕ್ಕ ಮಂತ್ರಿವಿಧಯಾಮಕ್ಕೆ ಕೊಡುವೆನಲರಸ ।
ನರ್ಕನಂ ತಡೆದು ಲೆಕ್ಕವೊಪ್ಪಿಸಿ ಮೆರೆದ ।
ಸೌಖ್ಯ ಬಸವೇಶ ಶರಣಾಗು ॥ ೧೮

ಮಜ್ಜಿಗೆಯ ಮಾರುವಳು ಹೆಜ್ಜೆ ಜಾರಲು ಬಸವ ।
ಮಜ್ಜನಕ ಕಾಯಿಮೆನಲು ಕೊಡನಂ ಪಿಡಿದ ।
ಪೂಜ್ಯ ಬಸವೇಶ ಶರಣಾಗು ॥ ೧೯

ಪೆಟ್ಟಿಗೆಯ ಪಚ್ಚಗಳ ಶ್ರೇಷ್ಠ ಜಂಗಮ ಬೇಡೆ ।
ಕೊಟ್ಟು ಭೂಪಂಗೆ ಪೊಸಧನವನಿತ್ತ ನಿಜ ।
ನಿಷ್ಠ ಬಸವೇಶ ಶರಣಾಗು ॥ ೨೦

ಉರಿವಕಟ್ಟಿಗೆ ಬೊಂಬೆ ಚರರೂಪವೆನಿಸಿ ನೃಪ ।
ಕರೆಯನಲಾಗ ಹರಣಮಂ ಕೊಟ್ಟ ।
ಕರೆದ ಬಸವೇಶ ಶರಣಾಗು ॥ ೨೧

ಭಿತ್ತಿಯೊಳ್ ಬರೆದಿರ್ದ ಚಿತ್ರ ಜಂಗಮಕಸುವ- ।
ನಿತ್ತು ಕರದೊಯ್ವುತರಮನೆಯೊಳರ್ಚಿಸಿದ ।
ಕರ್ತ ಬಸವೇಶ ಶರಣಾಗು ॥ ೨೨

ಮಣ್ಣಹೋರಿಗೆ ಪ್ರಾಣವನ್ನು ಕೊಟ್ಟಾನರಪ ।
ರೇಣ್ಯನಿಂ ಪೂಜ್ಯನೆನಿಸಿ ಮೆರೆದಾ ಪರಮ ।
ಪುಣ್ಯ ಬಸವೇಶ ಶರಣಾಗು ॥ ೨೩

ಬೂದಿಕುಂಬಳಕಾಯೊಳ್ಳೈದೆ ಲಿಂಗವ ತೋರಿ ।
ಮೇದಿನೀಶ್ವರನ ಬೆರಗುವಡಿಸಿದ ಸುಪ್ರ- ।
ಮೋದ ಬಸವೇಶ ಶರಣಾಗು ॥ ೨೪

ಹಗರಣಿಗರ ಶಿವನ ಸುಗುಣಂಗಳೆನಿಸುತ ।
ಜಗದೀಶನೊಡನೆ ಪೂಜ್ಯವಡೆದಮಳಪದ- ।
ಯುಗಳ ಬಸವೇಶ ಶರಣಾಗು ॥ ೨೫

ತೃಣದಿ ಬಹು ಶಾಸ್ತ್ರಾರ್ಥವನೆ ನುಡಿಸಿ ಮೀಮಾಂಸ- ।
ಕನ ಗರ್ವವಳಿದು ಶಿವಭಕ್ತನನು ಮಾಡಿ- ।
ದನಘ ಬಸವೇಶ ಶರಣಾಗು ॥ ೨೬

ಮುತ್ತಿಗಟ್ಟಿನೊಳ್ಳೈದೆ ಹುತ್ತಿನೊಳಗಿರ್ಪಹಿಯ ।
ಮೃತ್ಯುಹರನಾಜ್ಞೆಯಿಂ ನ್ಯಾವಳವ ಗೈದ ।
ಕರ್ತ ಬಸವೇಶ ಶರಣಾಗು ॥ ೨೭

ನೀರಗಟ್ಟಿಯ ಮಾಡಿ ವೀರಶೈವದ ಘನವ ।
ಧಾರುಣೀಶಂಗೆ ತೋರಿಸಿದ ಸದ್ಭಕ್ತಿ ।
ಶೂರ ಬಸವೇಶ ಶರಣಾಗು ॥ ೨೮

ಪಿರಿಯ ಭಕ್ತನ ವಿಮಲ ಬೆರಳಿನೊಳ್ ಪಾಲ್ಗರೆದು ।
ಹರಭಕ್ತಿ ಮಹಿಮೆಯ ಭೂಪಂಗರುಹಿಸಿದ ।
ಗುರುವೆ ಬಸವೇಶ ಶರಣಾಗು ॥ ೨೯

ಕ್ಷಿತಿಪನರಸಿಯರನದ್ಭುತ ಚರರಮಾಡಲವ ।
ನತಿ ಬೆರಗುಗೊಂಡು ನಮಿಸೆ ಸತಿಯರನಿತ್ತ ।
ಯತಿಯೆ ಬಸವೇಶ ಶರಣಾಗು ॥ ೩೦

ಕನ್ನದ ಬ್ರಹ್ಮಯ್ಯ ಕನ್ನವಿಕ್ಕಿದ ಮಣ್ಣ ।
ಹೊನ್ನೆನಿಸುತರಸನಿಂ ಪೂಜ್ಯನಾದ ಸತ್- ।
ಪುಣ್ಯ ಬಸವೇಶ ಶರಣಾಗು ॥ ೩೧

ಕೋಣನಿಂದಳಿದವಗೆ ಪ್ರಾಣದಾನವನಿತ್ತು ।
ಕೋಣನಂ ಗೂಳಿಯೆನಿಸುತರಸನ ಗೆದ್ದ ।
ಜಾಣ ಬಸವೇಶ ಶರಣಾಗು ॥ ೪೦

ಪತಿಯಳಿದು ನಮಿಸಲಾ ಸತಿಗೈದೆತನವೆನಲು ।
ಕ್ಷಿತಿಪನಗಲಿವಳ ಪತಿಗಸುವನಿತ್ತ ಶ್ರೀ ।
ಪತಿಯೆ ಬಸವೇಶ ಶರಣಾಗು ॥ ೪೧

ಸತ್ತ ಕರನ್ಹೊತ್ತೊರ್ವನತ್ತ ಭಸ್ಮಾಂಗಿಯಾ- ।
ಗುತ್ತುಮಿರೆ ಕರಕೆ ಪ್ರಾಣವ ಕೊಟ್ಟವಗೆ ನಿಜ- ।
ವಿತ್ತ ಬಸವೇಶ ಶರಣಾಗು ॥ ೪೨

ಈದ ಹುಲಿಯಾಕಳೆನಿಸಾದರದಿ ಪಾಲ್ಗರೆದು ।
ಮೇದಿನಿನಾಥ ನೋಡುತಿರೆ ಚರಗಿತ್ತ- ।
ನಾದಿ ಬಸವೇಶ ಶರಣಾಗು ॥ ೪೩

ಹನುಮನೋಲ್ ತರುಗಿರಿಗಳನು ಕಿತ್ತವರಾರು- ।
ಎನಲೊಪ್ಪಿ ದೇವನಿಂ ಬೆಟ್ಟವೆತ್ತಿಸಿದ ।
ವಿನಯ ಬಸವೇಶ ಶರಣಾಗು । ೪೪

ಚಿತ್ರಧಾರಕನ ಬಹುಕೃತ್ರಿಮದಿ ಚರನೆನಿಸಿ ।
ಧಾತ್ರೀಶ ಕಳುಹಲವನ ನಿಜಚರರೆನಿಸಿ ।
ದಾತ್ಮ ಬಸವೇಶ ಶರಣಾಗು ॥ ೪೫

ಹರದೂಷಕನೆನಿಸಿದ ಶರೀರದೊಳ್ ಪುಳುವೆನಿಸು- ।
ತರಸಂಗೆ ತೋರುತೆ ಕಕ್ಕಯ್ಯಗಳ ಮಹಿಮೆ ।
ಮೆರೆದ ಬಸವೇಶ ಶರಣಾಗು ॥ ೪೬

ಕಲ್ಲ ನಂದಿಗೆ ಕಡಲಿ ಒಳ್ಳೆಕಬ್ಬಿನಗಳ ।
ಮೆಲ್ಲೆಂದು ಮೆಲಿಸುತರಸನಿಂ ಪೂಜ್ಯನಹ ।
ಚೆಲ್ವ ಬಸವೇಶ ಶರಣಾಗು ॥ ೪೭

ಗರಳವಮೃತ ಮಾಡಿ ಸರಪ ನೋಡಲ್ಕೆ ಹರ- ।
ಶರಣಸಂತತಿಗೇಕರಿಯಶ್ವರಾಹುತ- ।
ರ್ಗೆರೆದ ಬಸವೇಶ ಶರಣಾಗು ॥ ೪೮

ಸುರೆಯ ಹರವಿಗೆ ಬೂದಿ ಬರೆದುದರಸಂ ನೋಡು- ।
ತಿರಲಹುದೆ ಭಸಿತವು ಇಲ್ಲಯೆನೆ ಪಾಲೆನಿಸಿ ।
ಮೆರೆದ ಬಸವೇಶ ಶರಣಾಗು ॥ ೪೯

ಸವಣಪಟ್ಟೆಯ ಸುತ್ತುತ್ತವಿಯತ್ತಳಕ್ಕೊಗೆದು ।
ಶಿವಭಕ್ತ ತರಿಸುಮೆನೆ ಪಾದುಕದಿ ತರಿಸಿ- ।
ದವನೆ ಬಸವೇಶ ಶರಣಾಗು ॥ ೫೦

ಜನಪನರಮನೆ ಸಿರಿಯನು ಜಂಗಮಕೆ ಕೊಟ್ಟು ।
ಜನಪಗೈಶ್ವರ್ಯವನೆಂದಿನಂದದಿ ತೋರಿ- ।
ದನಘ ಬಸವೇಶ ಶರಣಾಗು ॥ ೫೧

ಅವನೀಶನಾತಪತ್ರವ ಚರೇಶ್ವರಗಿತ್ತು ।
ಕುವಲಯೇಂದ್ರನಿಗೆ ಮುತ್ತಿನ ಕೊಡೆಯನ್ನಿತ್ತ ।
ಶಿವನೇ ಬಸವೇಶ ಶರಣಾಗು ॥ ೫೨

ಧರಣೀಶನೋಲಗದೊಳೆರಗೆ ಸಿಡಿಲದರನಂ- ।
ತರದಿ ಸಿಡಿ-ದರಸನಂ ಕಾಯ್ದ ಸದ್ಭಕ್ತಿ- ।
ಯರಸ ಬಸವೇಶ ಶರಣಾಗು ॥ ೫೩

ನೃಪನ ಪಟ್ಟದ ಗಜವ ಸುಪಥ ಜಂಗಮಕಿತ್ತು ।
ನೃಪರೆನಿಸಲೊಂದು ಗಜವ ಸೃಜಿಸಿತ್ತ ಭೋ ।
ನಿಪುಣ ಬಸವೇಶ ಶರಣಾಗು ॥ ೫೪

ಜಂಬೀರಫಲವ ವಿತದಂಭೆಗಿಡಲರಸರೆನಿ- ।
ಸಂ ಬಳಸಲಾಗ ಲಿಂಗವೆಂದರುಹಿಸಿದ ।
ಶಂಭು ಬಸವೇಶ ಶರಣಾಗು ॥ ೫೫

ಥಾರುಣೇಶ್ವರ ಲೆಕ್ಕ ತೋರುಮೊರಾತ್ರಿಯೆನೆ ।
ಮೂರುರಾತ್ರಿಯನುವಿಧುವಾ ನೆರೆ ತಡೆದಿತ್ತ ।
ಧೀರ ಬಸವೇಶ ಶರಣಾಗು ॥ ೫೬

ಕುಂಭಿನೀಶನ ಚಿತ್ರ ಜಂಬೀರ ಫಲವ್ವೊರ್ವ ।
ಶಂಭುಚರಗಿತ್ತು ಸೃಜಿಸೊಂದರಸಗಿತ್ತ ।
ಸಾಂಬ ಬಸವೇಶ ಶರಣಾಗು ॥ ೫೭

ಶೂಲಿಯಿಂ ಶಿವಭಕ್ತ ಕಾಲವಾಗಿರಲರಸ ।
ಕಾಲವದು ಭಕುತರಿಗೆ ಬೇಂಟೆಯನೆ ಪೊರೆದ ।
ಶೀಲ ಬಸವೇಶ ಶರಣಾಗು ॥ ೫೮

ಭವಿ-ನಿವಹವು ಭಕ್ತರಂದವೆ-ಯಾಗಿ ಬರ- ।
ಲವರನಂ ಭಕ್ತರೆನಿಸಿ ನಿಜನೈಷ್ಠೆಯಿ- ।
ತ್ತವನೆ ಬಸವೇಶ ಶರಣಾಗು ॥ ೫೯

ಕುರಿಯನೇರುತಲೋರ್ವ ಚರಮೂರ್ತಿ ಬರಲರಸ- ।
ನುರೆ ಕಾಣುತದರ ಗೂಳೆನಿಸು ಮೊನೆಮಾಡಿ ।
ಮೆರೆದ ಬಸವೇಶ ಶರಣಾಗು ॥ ೬೦

ಪೊಡವಿಪತಿ ತುರುಗಳಂ ಬಿಡದೆ ಲಿಂಗಾಂಗಿಗಳು ।
ಪೊಡದೊಯ್ವರೆನಲು ಬಿಡದೊಪ್ಪಿಸೆನೆ ಸೃಜಿಸಿ- ।
ದೊಡೆಯ ಬಸವೇಶ ಶರಣಾಗು ॥ ೬೧

ಮಣ್ಣೆತ್ತಮಾಡಿ ಜನರನ್ನವಂ ತೋರೆ ರಾ- ।
ಜಂ ನಗುತಲನ್ನವವ-ಕುಣಿಸುಮೆನಲುಣಿಸಿ- ।
ದಣ್ಣ ಬಸವೇಶ ಶರಣಾಗು ॥ ೬೨

ವಿಟರೂಪ ಜಂಗಮಕೆ ದಿಟಭೂವರನ ಮೂ- ।
ವಟವ ಕೊಡರೆನಿಸಲನಿತರೊಳು ಸೃಜಿಸಿತ್ತ- ।
ಕುಟಿಲ ಬಸವೇಶ ಶರಣಾಗು ॥ ೬೩

ಮಿಂಡ ನಾಗಯ್ಯನೊಳ್ ಕೆಂಡಗಣ್ಣಂ ತೋರಿ ।
ಮಂಡಲಾಧಿಪನ ಬೆರಗುಮಾಡಿದ ಸುಪ್ರ- ।
ಚಂಡ ಬಸವೇಶ ಶರಣಾಗು ॥ ೬೪

ಪಾವು ಸತ್ತಿರೆ ನಿಮ್ಮ ದೇವರಾಭರಣಕಸು- ।
ವೀವುದೆನಲರಸ ಪ್ರಾಣವಿತ್ತ ಮಮ ಗುರು- ।
ದೇವ ಬಸವೇಶ ಶರಣಾಗು ॥ ೬೫

ಕುಲ್ಲತನದಿಂ ಮೋಟಮಲ್ಲಂಗೆ ಚರರೂಪ ।
ಹಲ್ಲಣಿಸಿ ಕಳುಪಲವಗೆ ಪದಕರವಿತ್ತ ।
ಚೆಲ್ವ ಬಸವೇಶ ಶರಣಾಗು ॥ ೬೬

ಉತ್ತಮಾಶ್ವವ ಚರನಿಗಿತ್ತು ಬಿಜ್ಜಳನೃಪಗೆ ।
ಮತ್ತೆ ಲಾಯದೊಳು ಕುದುರೆಯಂ ತೋರಿಸಿದ ।
ಕರ್ತ ಬಸವೇಶ ಶರಣಾಗು ॥ ೬೭

ತೃಣಭಂಜಿಕೆಗೆ ಭಕ್ತಗಣವೇಷ ಹಲ್ಲಣಿಸ- ।
ಲನುವಿಂದ ಪ್ರಾಣವದಕಿತ್ತು ಮೆರೆದ ಸ- ।
ದ್ಗುಣಿಯೆ ಬಸವೇಶ ಶರಣಾಗು ॥ ೬೮

ಏಕಾಂತರಾಮ ಶಿವನೇಕಾಂತವಾಡುವದ ।
ಭೂಕಾಂತ ಕೇಳ್ವೆನೆನೆ ಸ್ವಪ್ನದೊಳು ತೋರಿ- ।
ದೇಕ ಬಸವೇಶ ಶರಣಾಗು ॥ ೬೯

ಲಿಂಗದೊಳು ಭಕ್ತನಾ ಲಿಂಗಭಕ್ತನೊಳಾದ ।
ಸಂಗತಿಯ ಹೃದಯದೊಳರುಹಿಸಿದಾ ಮಹಾ- ।
ಲಿಂಗ ಬಸವೇಶ ಶರಣಾಗು ॥ ೭೦

ಶೀಲ ಪ್ರಸಾದ ಮಾರ್ಜಾಲ ಮುಟ್ಟಲ್ಕರಸ- ।
ನೋಲಗದುಸ್ಸೆಂದು ದೃಷ್ಟವರುಪಿದ ಮುಕ್ತಿ- ।
ಮೂಲ ಬಸವೇಶ ಶರಣಾಗು ॥ ೭೧

ಕಲ್ಯಾಣಪಟ್ಟಣದೊಳೆಲ್ಲಾ ಭಕ್ತರ ಯಜನ- ।
ದಲ್ಲಿರ್ದು ಭೂಪನಿಂ ಪೂಜ್ಯತೆಯನು ಪಡೆದ ।
ಚೆಲ್ವ ಬಸವೇಶ ಶರಣಾಗು ॥ ೭೨

ಮಡಿವಾಳಯ್ಯಗೆ ಮುನಿದು ಪೊಡವಿಪತಿ ಭಂಗವ- ।
ಟ್ಟಡಿಗೆರಗಲಪನಿಗೆ ಜವನಾಳ್ಗಳ ಪೊರೆದ ।
ಒಡೆಯ ಬಸವೇಶ ಶರಣಾಗು ॥ ೭೩

ಭರದಿ ಮಾದೇವ ಭೂವರನ ನಿಲಯದೊಳಿರ್ಪ ।
ಚರರ ಪನ್ನೆರಡು ಸಾವಿರ ತಂದುಯಜಿಸಿ ।
ಮೆರೆದ ಬಸವೇಶ ಶರಣಾಗು ॥ ೭೪

ವರ್ತಾಕ ಫಲವ ಧರಿಸುತ್ತ ಬರಲಾ ಜನರ ।
ಮತ್ತೆ ಚರರೆನಿಸಿ ನಿಜಲಿಂಗವಿತ್ತ ಪರ- ।
ಮಾರ್ಥ ಬಸವೇಶ ಶರಣಾಗು ॥ ೭೫

ವಾಸಿಯಿಂದಾ ಜೋಳರಾಶಿ ಮೌಕ್ತಿಕವೆನಿಸು- ।
ತೀಶ ಚರಲಿಂಗಕವನಿತ್ತು ಮೆರೆದ ಭವ- ।
ನಾಶ ಬಸವೇಶ ಶರಣಾಗು ॥ ೭೬

ಚರರೂಪ ಧರಿಸಿ ಪುರಹರ ಬಂದು ಹಣೆಗಣ್ಣ ।
ಜರಿದು ಬೇಡಲ್ಕೆ ಕರದರ್ಪಣದಿ ತೋರಿ ।
ಮೆರೆದ ಬಸವೇಶ ಶರಣಾಗು ॥ ೭೭

ಗೌರೀಶನ-ಪರಾವತಾರ ಜಂಗಮು ಸತಿಯ ।
ಸೀರೆ ಕೊಡುಮೆನಲಾಕ್ಷಣದೊಳು ಸೆಳೆದಿತ್ತ ।
ಧೀರ ಬಸವೇಶ ಶರಣಾಗು ॥ ೭೮

ನೀಲಲೋಚನೆಯ ಘನ ವಾಲಿ ಚರನುಚ್ಚುತಿರ- ।
ಲಾಲಸ್ಯವಾಗೆ ಸತಿಯ ಜರಿದಿತ್ತ ಮಹ- ।
ಶೀಲ ಬಸವೇಶ ಶರಣಾಗು ॥ ೭೯

ಕಿನ್ನರಯ್ಯಗಳು ಮುಕ್ಕಣ್ಣನೊಳಗಾಗಲಾ ।
ತನ್ನ ಸತ್-ಪ್ರಾಣನೆನಿಸಿದತಿ ಸದ್ಭಕ್ತಿ ।
ಧನ್ಯ ಬಸವೇಶ ಶರಣಾಗು ॥ ೮೦

ಪರಮನೊಳ್ ಕೇತಯ್ಯ ಬೆರೆದಿರಲ್ಕಾತನೊಡ- ।
ವೆರೆದು ನಿಜಭಾಷೆ ಪರಿಪಾಲಿಸಿದ ಪ್ರಮಥ- ।
ಠೆರೆಯ ಬಸವೇಶ ಶರಣಾಗು ॥ ೮೧

ಚರನೊರ್ವ ಪೊಸಪಾಲ ಭರದಿ ಬೇಡಲ್ಕೆ ಎಳೆ- ।
ಗರುವನೀಕ್ಷಿಸುತ ಪಾಲ್ಗರೆದು ಕೊಟ್ಟ ಮತ್- ।
ಸುರಭಿ ಬಸವೇಶ ಶರಣಾಗು ॥ ೮೨

ಕರವೀರದರಳು ಸಾವಿರವೆಣಿಸಿ ಚಂಪಕದ ।
ವರ ಕುಸುಮಗಳೆನಿಸಿ ಚರಶೇಖರಂಗಿತ್ತ ।
ಶರಣ ಬಸವೇಶ ಶರಣಾಗು ॥ ೮೩

ಮತ್ತೊರ್ವ ಚರವರನು ಭಿತ್ತಿಯೋಳ್ ಬರೆದಿರ್ದ ।
ಚಿತ್ರದ ಹಲಸಿನಹಣ್ಣ ಬೇಡಲ್ಕೆ ತೆಗೆ- ।
ದಿತ್ತ ಬಸವೇಶ ಶರಣಾಗು ॥ ೮೪

ಚರಣವುರಗ ಮುಟ್ಟೆ ಮರಣವಾಗಲ್ಕುಮಾ- ।
ವರನಲಂಕಾರವದೆಂದು ಪ್ರಾಣವ ಕೊಟ್ಟ ।
ಕರುಣಿ ಬಸವೇಶ ಶರಣಾಗು ॥ ೮೫

ಅನಘ ಜಂಗಮನೊರ್ವ ಕನಕ ಕುಸುಮವ ಬೇಡ-
ಲನಿತರೊಳು ಸೃಜಿಸಿಕೊಟ್ಟ ಸಚ್ಚರಣಾಗ್ರ-
ಗಣಿಯೇ ಬಸವೇಶ ಶರಣಾಗು ॥ ೮೬

ಬಸವ ನಿರ್ದೋಹಿಯೆಂಬುವ ಭಾಷೆ ನೋಳ್ಪೆನೆಂ- ।
ದೊಸೆದು ಬಂಕಯ್ಯನಿರಿಯೆ ಬಯಲಾಗಿ ಮೆರೆ- ।
ದಸಮ ಬಸವೇಶ ಶರಣಾಗು ॥ ೮೭

ಚರನು ಪೋಗಲ್ಕೊಡನೆ ಹರಣವಳಿದಾ ಚರನು ।
ಮರಳಿ ಬರಲಾಗ ಹರಣಮುಂ ತುಂಬೆದ್ದ ।
ಪರಮ ಬಸವೇಶ ಶರಣಾಗು ॥ ೮೮

ತೊಗರಿ ರತ್ನವ ಮಾಡಿ ಮಿಗೆ ಪಾದಿಗಿತ್ತು ಮೇ- ।
ಣಘ ವೈರಿ ಚರನ ಸೆರೆಯ ಬಿಡಿಸಿದ ಪಾವ- ।
ನ ಗುಣ ಬಸವೇಶ ಶರಣಾಗು ॥ ೮೯

ಕರಿಯ ಮಲ್ಲಿಗೆಯೊರ್ವ ಚರವರನು ಬೇಡಲು ।
ಹರುಷದಿಂದಿತ್ತು ಹರಭಕ್ತಿಯನು ಮೆರೆದ ।
ಶರಣ ಬಸವೇಶ ಶರಣಾಗು ॥ ೯೦

ಆಂಧ್ರದೇಶದ ಪಂಡಿತೇಂದ್ರ ಕನ್ನಡಭಾಷೆ ।
ಸಾಂಪ್ರದಿಂ ಬೇಡಲು ಭಸಿತ ಕಲ್ಪದಿ ಕೊಟ್ಟ ।
ತಂದೆ ಬಸವೇಶ ಶರಣಾಗು ॥ ೯೧

ಫಣಿಫಣಾಮಣಿ ದೇವ-ಧುನಿವಾರಣದ ಮುತ್ತ ।
ನೆನಗೀವುದೆನಲಾಕ್ಷಣದೊಳಿತ್ತು ಮೆರೆದ ಸದ್- ।
ಗುಣಿಯೇ ಬಸವೇಶ ಶರಣಾಗು ॥ ೯೨

ಹರನು ವಿಟಚರರೂಪ ಧರಿಸಿ ಸತಿಯಳ ಬೇಡೆ ।
ಭರದಿ ನಿಜರಮಣಿಯ ಕಳುಹಿ ನಾಚಿಸಿದಾ ।
ಶರಣ ಬಸವೇಶ ಶರಣಾಗು ॥ ೯೩

ಸತಿ ಚರನಿಗಿಂದೆ ತನಗತಿಶಯದೊಳುಣಬಡಿಸ- ।
ಲತಿನೊಂದು ತೆಗೆದು ಪುಳುವೆನಿಸಿ ತೋರಿಸಿದ ।
ಕ್ಷಿತಿಪ ಬಸವೇಶ ಶರಣಾಗು ॥ ೯೪

ಆರುಹತರು ಜಂಗಮಾಕಾರವಾಗುತೆ ರಾತ್ರಿ ।
ಹಾರಿಬರಲಾಗಳೆ ನಿಜ ಚರರ ಮಾಡಿದ ।
ಚಾರು ಬಸವೇಶ ಶರಣಾಗು ॥ ೯೫

ಕಳ್ಳರಾಕಳನೊಯ್ಯಲೊಳ್ಳಿತಾಯ್ತಾ ಸಂಗ- ।
ಗಲ್ಲದೆ ಕರೆಯದೆಂಬ ಪೂರ್ಣಭಾವ- ।
ಮುಳ್ಳ ಬಸವೇಶ ಶರಣಾಗು ॥ ೯೬

ಸುರಲೋಕದೊಳಗುಳ್ಳ ಮರುಗ ಜಂಗಮ ಬೇಡೆ ।
ಭರದಿತ್ತು ಭಕ್ತಿ ಪರಿಪಾಲಿಸಿದ ಮಹಾ ।
ಗುರುವೇ ಬಸವೇಶ ಶರಣಾಗು ॥ ೯೭

ಮಿಸುನಿಮತ್ತೊರೆಯೆ ಶೋಭಿಸಿ ಬೈಲಿಗೆ ಬಪ್ಪಂತೆ ।
ಬಸವೇಶನಮಳ ಭಕ್ತಿಯು ಜಗದೊಳು ಪರೀ- ।
ಕ್ಷಿಸಲು ಮಹಿಮೆವೆತ್ತುದಿಹದಲ್ಲಿ । ೯೮

ಇರುವೆಯದೊಂದೆ ಕಾಳರಿದು ಕೂಡಿಸುವಂತೆ ।
ವರ ಬಸವನಮಳ ಚರಿತೆಯರಿದವರೊ- ।
ಳರಿದೊರೆದೆ ನಾನಲ್ಪಮತಿಯಿಂದೆ ॥ ೯೯

ಈವಿಧದೊಳಟ್ಟಾಂಶಿ ಪಾವನ ಪವಾಡಗಳ ।
ನೋವಿ ಬರೆದೋದಿ ಕೇಳ್ವರಿಗಿಷ್ಟಾರ್ಥ ।
ವೀವ ಘನಮತವಾಸ ದಯದಿ ॥ ೧೦೦

ಮಂಗಳಾರತಿ

.... ೩೦ ....

ಮಂಗಲಂ ಬಸವಲಿಂಗ ಮಹಿಮಾಂತರಂಗ |
ಮಂಗಲಂ ಬಸವಲಿಂಗ ಜಂಗಮಪದಕಮಲ ಸು- |
ಭೃಂಗ ವಿರತ ಗಂಗಾನ್ವಿತ ತುಂಗಪ್ರಮಥ ಪುಂಗವನುತ ||ಪ||

ಪಾರಮಾರ್ಥ ಪ್ರಸಂಗ ನಿಗಮಾಂತ ಭಕ್ತಿ- |
ಶೂರ ನಿತ್ಯನಿರ್ಮಲಾಂಗ ||
ಸಾರ ವೀರಶೈವ ಮತೋದ್ಧಾರ ಕೃಪಾಪಾರವಾರ |
ಕಾರಣಮಯ ವಾರಿತಭಯ ಘೋರಾಘಚಯ ಮಾರಣಜಯ ೧

ಮೂಲಮಂತ್ರ ಸ್ವರೂಪ ದುಷ್ಕರ್ಮ-ನಿರ್ |
ಮೂಲ ಸಪರಮ ಪ್ರತಾಪ ||
ನೀಲಲೋಹಿತಾಭಿಧಾಸಿರಾಳ ಸುಜನಲೋಲ ಭುವನ- |
ಪಾಲ ಸಭಯ ಜಾಲವಿಲಯ ಶೀಲಹೃದಯ ಕಾಲವಿಜಯ ೨

ಶ್ರೀಯುತ ಘನಮತ ನಿವಾಸ ಕಲುಷಾಭ್ರಚಂಡ- |
ವಾಯು ಮಿತ ಚಂದ್ರಿಕಾಹಾಸಾ- ||
ಜಾಯ ಶರಣಜನ ಮನೋಸಹಾಯ ತ್ರಿಮಲರಹಿತ ಲೋಕ- |
ಮಾಯವಿಜಿತ ಸ್ವಾಯತಹಿತ ಶ್ರೇಯಸಮತ ನಾಯಕಾಮಿತ ೩

.... ೩೧ ....

ಮಂಗಲಂ ಗಣೇಶ ಬಸವಲಿಂಗ ಶುಭಕರ ಜಯ |
ಲಿಂಗ ನೀಲಗಂಗ ಸುಹೃತ್ ಸಂಗ ಭವಹರ ||ಪ||

ಮಾರಾರಿಭಕ್ತ-ಕುಲಚಕೋರ ತಾರಕೇಶ್ವರ |
ವೀರಾವತಾರ ನಿತ್ಯಚಿದಾಗಾರ ಗುರುವರ ೧

ಘೋರಾಘಚಯವಿದೂರ ಶಿವಾಚಾರ ಬಂಧುರ ।
ಧೀರಾಮಳಚರನಿಕರ ಸುಮಂದಾರ ಸುಂದರ ೨

ಈಶಾವತಾರ ಪರಮಸತ್ಯಭಾಷಣೋದಾರ ।
ಪೋಷಾಶ್ರಿತಜನ ಶ್ರೀ ಘನಮಠವಾಸ ಗಂಭೀರ ೩

.... ೩೨ ....

ಬೆಳಗಿರೆ ಕರ್ಪೂರ ಜ್ಯೋತಿ ।
ಬಸವಗುರುಕುಲ ತಿಲಕಗೆ ಭಾವೆಯರೀಗ ॥ಪ॥

ಮೇದಿನಿಯೊಳು ಮಾದಾಂಬೆಯ ಶ್ರೀ ಗ- ।
ರ್ಭೋದಯವಾಗುಪನಯನದ ಕ- ॥
ರ್ಮಾಧೀನನಾಗದೆ ಸಂಗಮಕ್ಕೈದಿ ಬ- ।
ಲಾಧಿಪ ಸುತೆಯನಾಳ್ದಾತನಿಗೆ ೧

ಆ ಪರಮೇಶ್ವರನಟ್ಟಿದ ಲಿಖಿತವ ।
ಭೂಪನಿದಿರೊಳೋದಿ ಸಚಿವ ॥
ಶ್ರೀ ಪಟ್ಟಣಕೆ ದೊರೆಯಾಗಿ ಮೆರೆದ ಚಿದ್ ।
ರೂಪ ಸುಗುಣಮಣಿ ಭೂಷನಿಗೆ ೨

ಉಲ್ಲಾಸದಿ ಶ್ರೀ ಕಲ್ಯಾಣದ ಚರ- ।
ರೆಲ್ಲರಿಗಿಷ್ಟ ಪದಾರ್ಥಗಳ ॥
ಸಲ್ಲಿಸುತೆಲ್ಲ ಪವಾಡಗಳರುಹಿದ ।
ಬಲ್ಲಿದ ಘನಮಠದೊಲ್ಲಭಗೆ ೩

.... ೩೩ ....

ಬಸವ ಮಹೇಶ ಮಂಗಲಂ । ಈಶಮತ ಶರಧಿಭೇಶ ಬಸವ ॥ಪ॥
ತಾಮಸರಹಿತ ನಿಸ್ಸೀಮ ಪರಮ ಪರಿ- ।
ಣಾಮ ವಿನುತಗಣಸ್ತೋಮ ಬಸವ ೧

ದಾಸೋಹಂಭಾವಾಸಮಸುಖದಘ- ।
ನಾಶ ಭಯಮುಕ್ತೀಶ ಬಸವ ಮಹೇಶ ೨
ಬಂಧುರ ಘನಮತೇಶಿಂದುವಿಭೂಷಣ ।
ಸುಂದರಕರಸಾನಂದ ಬಸವ ಮಹೇಶ ೩

.... ೩೪ ....

ಬಸವ ಮಂಗಲಂ ಬಸವ ಬಸವ ಮಂಗಲಂ ।
ಬಸವ ಮಂಗಲಂ ಸದಾಶಿವ ॥
ಸುಖಸಾರ ವೀರಭಕ್ತ-ಪ್ರಸರದಿಷ್ಟಸಿದ್ಧಿದಾ- ।
ನಕುಶಲ ಪಶುಪ ಸುಷುಮಗಾತ್ರ ॥ಪ॥

ಧನ್ಯನಿಷ್-ಪ್ರಪಂಚ ಕಾಯಶೂನ್ಯ ವಿಮಲಚರಿತ ಸರ್ವ- ।
ಮಾನ್ಯ ಗುರುವರೇಣ್ಯ ಪರಮಪುಣ್ಯ ಸುಚೈತನ್ಯವರದ ೧

ಚಾರುಜಂಗಮ ಪ್ರಸಾದ ಪೂರಹೃದಯ ಶಿವಸ್ವಯಾವ- ।
ತಾರ ಧೀರ ತ್ರಿಜಗದುಪಕಾರ ಪಾರವಾರ ಮಹಿಮ ೨

ಕ್ಲೇಶರಹಿತ ಭಕ್ತಹೃದಯವಾಸ ಪರತರಾತ್ಮ ಮುಕ್ತಿ- ।
ಕೋಶ ಚಿತ್‌ಪ್ರಕಾಶ ಘನಮತೇಶ ದೋಷನಾಶ ಈಶ ೩

ಚೆನ್ನಬಸವಣ್ಣ

.... ೩೫ ....

ಚೆನ್ನಬಸವೇಶ ಚಿದಮೃತಸಾಗರ ।
ಗಣಕುಶಲ ಶೇಖರ ॥ಪ॥

ಪರಮಪ್ರಸಾದ ಸುಶರೀರವೆನಿಸಿದುರು- ।
ತರ ಷಟ್‌ಸ್ಥಲ ಗುರುವರ ನಿರುಪಮ ಶಿವ ೧

ಪ್ರಣವದ ರಹಸ್ಯಾರ್ಥವ ಸಿದ್ಧರಾಮಗೆ ।
ಅನುವಿಂದಲರುಹಿಸಿದನಘ ಕೃಪಾಕರ ೨

ಗುರು ಬಸವೇಶನ ಕರುಣಸ್ವತಂತ್ರದಿ ।
ಭರದಿ ಪಡೆದ ಸುರುಚಿರ ಘನಮತಪತೆ ೩

ಅಲ್ಲಮ

.... ೩೬ ....

ಬೆಳಗಿರಾರತಿಯ ಬೀರುತಲ್ಲಮಗಮಳ ಭಕ್ತಿರತಿಯ ।
ಬೆಳಗಿರಾರತಿ ಥಳಥಳನೆ ಪ್ರಜ್ವಲಿಪ ಜ್ಯೋತಿಯಕಳೆಯ ಗಣಸಂ- ।
ಕುಳ ಸುಸತಿಯರುಗಳು ಮಹಾಮಂ- ।
ಗಳದಿ ಪಾಡುತೆ ಪ್ರಳಯದೂರಗೆ ॥ಪ॥

ಮಾರಮರ್ದನಗೆ ಮಾಯಾಪ್ರಪಂಚ ವಿಕಾರವನರುಹಿದಗೆ ।
ಚಾರುತರದ ಶ್ರೀಕಲ್ಯಾಣದ ಚರರೆಲ್ಲರಿಗಿಷ್ಟಪದಾರ್ಥಗಳ ॥
ಸಲ್ಲಿಸಿ ನಿತ್ಯ ಪವಾಡಗಳರುಹಿದ ।
ಬಲ್ಲಿದ ಘನಮತ ವಲ್ಲಭಗೆ ೧

ಸಿ ದ್ಧ ರಾ ಮ

.... ೩೭ ....

ಸಿದ್ಧರಾಮೇಶ್ವರ ಸಿದ್ಧರಾಮ ಹೋ । ನಿಜಗುರು ಸಿದ್ಧರಾಮ ಹೋ ।
ಸಿದ್ಧರಾಮಾಘವಿರುದ್ಧಮಾನಸವಿಶುದ್ಧ ತ್ರಿಭುವನ ಪ್ರಸಿದ್ಧಸಿದ್ಧೇಶ್ವರ ॥ಪ॥

ನಿತ್ಯನಿರ್ಗುಣ ಪರತತ್ವಾರ್ಥವಿದಭವ ।
ಮೃತ್ಯುವಿಜಯ ಸಮರ್ಥ ಪರಮಶಿವ ೧

ಆಪರಬ್ರಹ್ಮಸ್ವರೂಪನಾಗಿ ಜಗದ್- |
ವ್ಯಾಪಾರವಳಿದ ಪ್ರತಾಪ ಪರಮಶಿವ ೨

ಅರಿವರ್ಗಗಳನೆಲ್ಲ ಹರಿಸುತೆ ಚಿದ್ರಸ |
ಶರಧಿಯೊಳಾಳುತಲಿರುವ ಮಹಿಮ ಶಿವ ೩

ಅಂಗಕರಣ ಹರಣಂಗಳೆಲ್ಲವ ಶಿವ |
ಲಿಂಗವಾಗಿಹ ಮಹಾಮಂಗಳಮಯ ಶಿವ ೪

ಹಸಿವು ತೃಷೆಯು ಹುಸಿ ವ್ಯಸನ ವಿಷಯ ನಿದ್ರೆ- |
ಸಶರೀರ ಗುಣಧರ್ಮವಿಸರರಹಿತ ಶಿವ ೫

ಮಾತೆ ಸುಗ್ಗಲೆ ಮುದ್ದಗೇ ತನಯನುಮೆನಿ- |
ಸಾತಂದೆ ತಾಯ್ಗಳನೋತು ಪೊರೆದ ಶಿವ ೬

ಶ್ರೀಶೈಲಕ್ಕೈದಿಯಘನಾಶ ಮಲ್ಲನನೊಲಿ- |
ಸೀಸೊನ್ನಲಿಗೆ ಶ್ರೀಗಿರೀಶನ ತಂದ ಶಿವ ೭

ಧರೆಜೀವರೆಲ್ಲ ಸರ್ವ ತೀರ್ಥಫಲವಡೆ- |
ದುರುಮುಕ್ತರಾಗಲೆಂದು ಕೆರೆಯ ಕಟ್ಟಿದ ಶಿಪ ೮

ಜ್ಞಾನಾಗ್ನಿಯಿಂದೆ ಸುವಿಧಾನೋಕ್ತವಾಗಿ ಯಜ್ಞ- |
ವಾ ನಿರ್ಮಿಸುತೆ ಜೀವಶ್ರೇಣಿ ಹೊರೆದ ಶಿವ ೯

ದುಷ್ಪ್ರಾಪ್ಯಭೈರವರನಷ್ಟಸೇವೆಯೊಳ್ ನಿಲಿಸಿ |
ಶಿಷ್ಟಸ್ಥಲವ ಶ್ರೀಗೆ ಕೊಟ್ಟು ಪೊರೆದ ಶಿವ ೧೦

ಆಗಮಾತೀತವಾದ ಯೋಗಸಮಾಧಿಯೊಳ- |
ಗಾಗಿ ಪೊರಗಮರದಾಗೋಪ್ಯ ಸುಖ ಶಿವ ೧೧

ಮೇಘಚೂಡನು ಶಿವಯೋಗಿಶಾಪದಿ ಮೃಗ- |
ವಾಗಿ ಸೋಂಕಲು ನಿಜವಾಗಿತ್ತ ಪರಶಿವ ೧೨

ಚಾರು ಹಸ್ತದೊಳು ಮಯೂರಕನತಿಶಾಪ- |
ವಾರಿಸುತ ನಿಜಶರೀರವಿತ್ತ ಶಿವ ೧೩

ಪೋಗೆನ್ನಲೋರ್ವ ನಸುಪೋಗಲದನು ಗುರು- |
ವಾಗಲರುಪೆ ಶಂಕೆನೀಗಿದ ಪರಶಿವ ೧೪

ಅಣ್ಣ ಬೊಮ್ಮಣ್ಣನ ಕಣ್ಣ ಪಡೆದು ಭೂರಿ- |
ಪುಣ್ಯತೀರ್ಥಕ್ಷೇತ್ರವನ್ನೆ ತೋರಿದ ಶಿವ ೧೫

ಕುಮುದಶೇಖರ ತನುವಿಮಲನಾಗುತ ಪಾದ- |
ಕಮಲಕೆರಗಲವಗಮರತ್ವವಿತ್ತ ಶಿವ ೧೬

ಹರಗೇಂದ್ರಿಯಂಗಳನರಿದರ್ಪಿಸುತೆ ಪಂಚ- |
ಶರನ ಗರ್ವವ ಗೆದ್ದ ವರಯೋಗಿ ವಂದ್ಯಶಿವ ೧೭

ಆಗಿಲ್ಲ ಸಂಸ್ಕಾರವೀಗಂಗೆಗೆಂದವರು |
ಕಾಗಿಂದ ಕೆಟ್ಟು ತಲೆವಾಗಲೊರೆದ ಶಿವ ೧೮

ಶಿವೆಯಾಣತಿಯೊಳೀ ಭುವಿಯೊಳು ಯೋಗಮುಜ್ಜ- |
ನವಮಲ್ಲನಿಗೆ ಮಾಡಿದವಿನಾಶ ನಿಜಶಿವ ೧೯

ಸಿಳ್ಳಿಗೆಯೊಳು ನಿಲಲೊಲ್ಲೆಂದ ಬೆನಕನ- |
ನುಲ್ಲಾಸದಿಂದೆ ತಂದು ಮಲ್ಲನೊಳಿಟ್ಟ ಶಿವ ೨೦

ವಿಷವಮೃತವ ಮಾಡುತೊಸೆದು ಗುಡ್ಡರ್ಗೆ ನೀಡಿ |
ರಸೆಯೊಳು ಕೀರ್ತಿವಡೆದಸಮನಯನ ಶಿವ ೨೧

ಕಾಳರಕ್ಕಸಿ ರಕ್ತಕೇಳಲುದರ ಹೊಗಿ- |
ಸ್ಯಾಳಾದೆನೆನೆ ಗುದಮೂಲದಿ ಬಿಟ್ಟ ಶಿವ ೨೨

ವಿಶ್ವಾಕಾರಕೆ ಹೆದರದೆ ಸ್ವೇಚ್ಛೆಯಿಂದ ಪರ- |
ಮೇಶ್ವರೇಶನ ನಿಲಿಸಿದೈಶ್ವರ್ಯದಿಂದೆ ಶಿವ ೨೩

ಅಮೃತ ಲಿಂಗಾಭಿಷೇಕಕಮೃತವ ತಹೆನೆನು- |
ತಮೃತಾಂಶು ಭೂಷಣಾಜ್ಞದಮೃತ ತಂದೆರೆದ ಶಿವ ೨೪

ಈ ಸೊನ್ನಲಿಗೆಯೊಳಗೇ ಸರ್ವಸಿದ್ಧಿಯುಪ್ಪು- |
ದೇ ಸತ್ಯಮೆಂದು ಗುಂಡುಕಾಶಿ ಪಿಡಿದ ಶಿವ ೨೫

ಮರಳ್ಳಾಕರ್ಪೂರ ಬಲುಗರುವದಿ ಬಂದು ನೇತ್ರ- ।
ದುರಿಯಿಂದ ಬೆಂದು ಪಾದಕೆರಗಲ್ ಪೊರೆದ ಶಿವ ೨೬

ಪುರವ ಬಳಸಿ ಬರುತಿರಲಾ ಸಿಡಿಲು ಬಂ- ।
ದೆರಗೆ ಸುರಗಿಯೊಳೆತ್ತಿ ಮೆರೆದ ಮಹಿಮ ಶಿವ ೨೭

ಉಘೆತಾಳನೆಂಬವನಿಗೆ ನೈಜ ತನುವನಿ- ।
ತ್ತಘವಪರಿಹರಿಸಿದ ನಿಗಮಾಗೋಚರ ಶಿವ ೨೮

ದೇಶವರಿಯೆ ಜಿಲ್ಲೇಶಬೊಮ್ಮನು ಸಹ- ।
ವಾಸನರಕಿಗಳ ಲೇಸಿಂದೆತ್ತಿದ ಶಿವ ೨೯

ಮುಪ್ಪುರವೈರಿಗಾಜ್ಯವೊಪ್ಪಿ ಮಜ್ಜನವನು ।
ತಪ್ಪದೆ ಮಾಡಿಸಿದ ದರ್ಪಕಹರ ಶಿವ ೩೦

ಕ್ಷೇತ್ರಪೂಜೆಯ ಮಾಡಿಸುತ್ತಾ ಮದುವೆಗಳ- ।
ನರ್ಥಿಯಿಂ ಮಾಡಿಸಿದ ಕರ್ತ ಪರಮಶಿವ ೩೧

ಕರ್ನಿದೇವನು ಕರೆಯೆ ತನ್ನಾಳುಗಳ ಕಳುಹ- ।
ಲಿನ್ನವರ್ಗಸಾಧ್ಯವಾದ ಧನ್ಯ ಪರಮಶಿವ ೩೨

ಬೆಕ್ಕಗ್ನಿ ಮಧ್ಯದೊಳ್ ಸಿಕ್ಕಿ ಸಾಯಲ್ಕದರ ।
ಮಕ್ಕಳೊದರುತ್ತಿರಲಿಕ್ಕಸುವಿತ್ತ ಶಿವ ೩೩

ಬೊಮ್ಮಿಶೆಟ್ಟಿಯ ಸತಿಯುಂ ಮಡಿಯೆ ಸುಪ್ರಸಾದ ।
ಒಮ್ಮೆ ಕೊಟ್ಟಾಕೆಗಸುವಂ ಮಾಣದಿತ್ತ ಶಿವ ೩೪

ಕಳಲು ಕುಡಿದು ಸುತನಳಿದನೆನುತ್ತೆ ।
ಯಳಲಾ ಕಳಲು ಕುಡಿಸೆಳ್ದ ಮಹಿಮ ಶಿವ ೩೫

ನಿತ್ಯಸುಕೈಲಾಸಕರ್ಥಿಯಿಂದೈದಿ ಸ- ।
ಮರ್ಥ ಶಿವನ ಕೃಪೆವೆತ್ತ ಪರಮ ಶಿವ ೩೬

ಅಸಮಾಕ್ಷನೊಳಗಿಹ ಬಸವೇಶ್ವರನ ಪೂರ್ಣ- ।
ತೆ ಸಮಸ್ತ ಭಕ್ತರೊಳಗೊಸೆದು ತೋರಿದ ಶಿವ ೩೭

ಅಲ್ಲಮಪ್ರಭುವಿನ ಚೆಲ್ವೋಪದೇಶವಡೆ- ।
ದೆಲ್ಲ ಕರ್ಮಂಗಳನುಲ್ಲಂಘಿಸಿದ ಶಿವ ೩೮

ಚೆನ್ನಬಸವನ ಪ್ರಸನ್ನ ದೀಕ್ಷೆಯ ಜಗ- ।
ದಿನ್ನು ಪಡೆದ ಗಣಮಾನ್ಯ ಪರಮಶಿವ ೩೯

ಕಾಲಸೂಚನೆ ಭಕ್ತಜಾಲಕುಸುರಿಯಂತ- ।
ರಾಳವೇದಿಕೆಯೊಳು ಲೋಲತ್ವದಿಹ ಶಿವ ೪೦

ಕುಶ ಸೊನ್ನಲಿಗೆಯಧೀಶ ಸುಗುಣಗಣ- ।
ಕೋಶ ಶ್ರೀ ಘನಮಠವಾಸ ಪರಮ ಶಿವ ೪೧

.... ೩೮ ....

ಸಿದ್ಧರಾಮಘವಿರುದ್ಧಾ ಜಯತು ಜಗ- ।
ದುದ್ಧಾರ ಪರಶಿವಾಕಾರರೇ ॥ಪಲ್ಲ॥

ಜನನಮರಣಭಯ ಘನಮಾರುತ ಶುಭ- ।
ಗುಣ ತ್ರಿನಯನ ಸುವಿಚಾರರೇ ೧

ಅವಿನಾಶನ ಶಾಂಭವದೀಕ್ಷಾಯತ ।
ಪ್ರವಿಮಲಮನಸಾಂಭೋಜರೇ ೨

ಚಿರಸೊನ್ನಲಪುರ ವರನಾಥಾಮಯ ।
ಹರ ಘನಮಠ ನಿಜವಾಸರೇ ೩

ತೋಂಟದ ಸಿದ್ಧಲಿಂಗ

.... ೩೯ ....

ಶುದ್ಧಾರತಿ ಪಿಡಿದೆತ್ತಿರಿ ತೋಂಟದ ಸಿದ್ಧಲಿಂಗನಿಗೆ | ಭವಗೆ ||
ಶ್ರದ್ಧೆಯಿಂದಘವಿರುದ್ಧಗೆ ಪರಮ ಪ್ರಬುದ್ಧಾರ್ಚಿತಪದಗೆ | ಹರಗೆ ||ಪ||

ನಿತ್ಯನಿರಂಜನ ನಿರುಪಮ ನಿರ್ಗುಣ ತತ್ವಾಕಾರನಿಗೆ | ಭವಗೆ ||
ಸತ್ಯಜ್ಞಾನ ವಿರಾಗಭಕ್ತಿ ಭಾವೋತ್ತರೋತ್ತರಗೆ | ಹರಗೆ ೧

ಬಸವಪುರಾತನರನುಮತಿಯಿಂದುದಯಿಸಿದ ಜಾತನಿಗೆ | ಭವಗೆ ||
ವಸುಮತಿ ಶಿಷ್ಯರಿಗಸಮನುಭವವನು ವಶವಾಗರುಹಿದಗೆ | ಹರಗೆ ೨

ಆರುಮೂರು ನಾಲ್ಕೀರೈದೈದಕೆ ದೂರವಾದನಿಗೆ | ಭವಗೆ ||
ಸಾರವೀರಸುವಿಚಾರ ಭಕ್ತಸಂಚಾರನಾದನಿಗೆ | ಹರಗೆ ೩

ಹಮ್ಮುಬಿಮ್ಮಳಿದ ಚಿನ್ಮಯ ಷಟ್‌ಸ್ಥಲ ಬ್ರಹ್ಮಾಚಾರ್ಯನಿಗೆ|ಭವಗೆ ||
ಮರ್ಮದಿ ತನುಗುಣಧರ್ಮವಳಿದ ಪರಬ್ರಹ್ಮಮೂರುತಿಗೆ | ಹರಗೆ ೪

ಭೂರಿಪದಂಗಳ ಹಾರದ ಮಹಿಮಾಪಾರಾವಾರನಿಗೆ | ಭವಗೆ ||
ಧೀರ ಘನಮಠೋದ್ಧಾರ ಶರಣ ಮಂದಾರವೀರನಿಗೆ | ಹರಗೆ ೫

.... ೪೦ ....

ಗುರು ತೋಂಟದ ಸಿದ್ಧಗೆ ಬೆಳಗಿರಿ ಕ- |
ರ್ಪುರದಾರತಿ ಜಾಣೆಯರೀಗ || ಪ ||

ಪರಮ ನಿರಂಜನನುರೆ ಚೆನ್ನಬಸವನ |
ಕರದಿ ಜನಿಸಿ ಶರಣರ ಪಾಲಿಸಿದ ಶ್ರೀ ೧

ಆರಾರರಿಯದ ಮೀರಿದ ಷಟ್‌ಸ್ಥಲ |
ಸ್ವಾರಾಮೃತವನು ಸೂರೆಗೊಟ್ಟಗೆ ಶ್ರೀ ೨

ಮಾಯರಹಿತ ಸುಖದಾಯ ಶ್ರೀಘನಮಠ |
ನಾಯಕನೇ ಗತಿ ನೀನೆಯೆನುತ್ತೆ ಶ್ರೀ ೩

ರೇವಣಸಿದ್ಧೇಶ್ವರ

.... ೪೧ ....

ಸಿದ್ಧಗುರುವರೇಣ್ಯ । ರೇವಣ ।
ಸಿದ್ಧಗುರುವರೇಣ್ಯ ॥
ಸಿದ್ಧಗುರುವರೇಣ್ಯೋದ್ಧತಗುಣ ಪರಿ- ।
ಶುದ್ಧದೇಹ ಭುವನೋದ್ಧಾರಾಮಳ ॥ ಪ ॥

ಶಿವನ ಚಿದಾಕಾರವೆ ತನುವಾಗಿ ।
ಭುವಿಯೊಳು ಜನಿಸಿದಭವ ಮದ್ರೇವಣ ೧

ವೀರಶೈವ ಮತ ವಾರಿಧಿವಿಧು ಭವ- ।
ದೂರ ಸುಜನ ಮಂದಾರದ್ವಯ ಶಿವ ೨

ನರರೂಪಳಿದು ಸುಗುರುರೂಪೆನಿಸಲು ।
ನೆರೆ ಧರೆಯೊಳಗವತರಿಸಿದ ರೇವಣ ೩

ರೇಣುಕನವತಾರಾನತ ಜನಸುರ- ।
ಧೇನುವೆ ಪರಮ ಪ್ರವೀಣಾಭಯ ಶಿವ ೪

ವಿಧಿಸುತೆನಗುರೋರಧಿಕಮೆನುತೆ ಶ್ರುತಿ ।
ಯೊದರಲ್ ಸರ್ವ ಜಗದೊಳು ಚರಿಸಿದನೆ ೫

ಅರಿತೇಳ್ನೂರ್ವರುಷವರಿಯದೇಳನೂ- ।
ರ್ವರುಷ ಜಗದಿ ಸಂಚರಿಸಿದ ರೇವಣ ೬

ಕೊಲ್ಲಿಪಾಕಿ ಶಿವನಲ್ಲಿ ಮುದ್ರೆ ಸಹಿ- ।
ತೋಲ್ಲಾಸದೊಳೊಗೆದಲ್ಲಮ ರೂಪನೆ ೭

ಮಲಯಾಚಲಕ್ಕೈದಲಘು ಕುಂಭಜಗೆ ।
ಸಲೆ ಷಟ್‌ಸ್ಥಲವನು ತಿಳುಹಿ ಪೊರೆದ ಶಿವ ೮

ರಾಮೇಶ್ವರ ಮುಖ್ಯಾಮರಕ್ಷೇತ್ರ ।
ಸ್ತೋಮಗಳೊಳ್ ಪರಿಣಾಮದಿ ಚರಿಸಿದ ೯

LIBRARY
Jangamawadi Math, Varanasi
Acc. No. ....503................

ಅಲ್ಲಾಡನ ನೆರೆ ನಿಲ್ಲಿಸಿ ಚೋಳನೊ- |
ಳುಳ್ಳ ಭಯವ ಕಳೆದುಲ್ಲಾಸನೆ ಶಿವ ೧೦

ಮಾಸನೂರೊಳಿರ್ಪಾಸುರರಂ ಚು- |
ರ್ಚೀಸುರಗಿಗಳೆನಿಸೀ ಶರದಿಟ್ಟನೆ ೧೧

ವಿಕ್ರಮ ಚೋಳನ ಸತ್ಕ್ರಿಯೆಯರಿದಸಿ- |
ಯ ಕ್ರಮುವರುಪಿತ್ತ ಕೃಪಾಂಬುನಿಧೆ ೧೨

ಮಂಗಳಪುರವರಕಂಗಮಿಸುತೆ ಕ- |
ನ್ನಂಗೈಶ್ವರ್ಯ ದೃಗಂಗಳಿತ್ತ ಶಿವ ೧೩

ಮಾಯದೇವಿ ಮನೆಗೇಯುದಕವ ತರು- |
ತಾಯಕಳಿಗಭಯದಿಯಿತ್ತನುಪಮ ೧೪

ನೆರೆ ವಿಭೀಷಣನ ಪುರ ಲಂಕೆಯೊಳುರು- |
ತರ ಲಿಂಗಂಗಳ ತರಿಸಿ ನಿಲಿಸಿದನೆ ೧೫

ಋಷ್ಯಶೃಂಗಗೆಯನಶ್ವಕಕುದ್ಗಿರಿ |
ಶಾಶ್ವತ ಮಹಿಮ ಸುಭಾಷ್ಯವ್ಪೊರೆದ ಶಿವ ೧೬

ವರಕೂಷ್ಮಾಂಡಕುಧರಕೈದೆತಿಗುಣೆ |
ಗುರು ನಂದೀಶ ಪೆಸರುಗಳನರುಹಿದ ೧೭

ನಾಡೆ ಹಂಪೆಯ ಸುಗೂಢ ಮಹಿಮೆಯನು |
ನೋಡುತ ಮಂಗಳವಾಡಕ್ಕೈದಿದ ೧೮

ಪೊಡವಿಯೊಡೆಯ ಸುಡು ಸುಡು ಪಾಯಸವಿಡ- |
ಲೊಡನೆ ಸುಡಲ್ ಮನೆ ಪೊಡಮಡೆ ಪೊರೆದನೆ ೧೯

ಐಮಾನಕ್ಕಿಯು ನೇಮದೈ ಸೊಲ್ಲಿಗಿ |
ಕ್ಷೇಮ ಘೃತದಿ ಪರಿಣಾಮದುಣಿಸಿದನೆ ೨೦

ಕೊಲ್ಲಾಪುರಕ್ಕೈದಲಲ್ಲಿ ಸಿದ್ಧನ ಹ- |
ಮ್ಮೆಲ್ಲವಳಿದ ಪರಮೋಲ್ಲಾಸನೆ ಶಿವ ೨೧

ವಾಸಿಯಿಂದಲಾ ಶ್ರೀಶೈಲಾದಿ ನಿ- ।
ವಾಸನಾಗಿ ವರ ಕಾಶಿಗೈದಿದನೆ ೨೨

ನೆರೆ ಮಾಯ್ದೇವಿ ಕುವರಿಮುಖ ಕನ್ನೆಯ- ।
ರುರೆ ಸೆರೆ ಬಿಡಿಸಿದ ಪರಮ ದಯಾಳನೆ ೨೩

ಮಾಸನೂರಿಗೈದಾಸುರಗಿಗಳ ಕ್ರ- ।
ಮಾಸಹಿತರಸಗೆ ಲೇಸೆಂದೊರೆದನೆ ೨೪

ಬಂಧುರದಿಂ ರಾಜೇಂದ್ರ ಚೋಳನ ಸು- ।
ನಂದನೆಗೊಲಿದಘಭಿಂದಿ ಪರಮಶಿವ ೨೫

ಸಕಲದೇಶ ಭೂಪ ಕುಮಾರಿಯರನು ।
ಸುಖದಿಂದೊಲಿಸಿದ ಪ್ರಕಟ ಕೃಪಾಂಬುಧೆ ೨೬

ಭದ್ರತರದಿ ಶ್ರೀ ರುದ್ರಮುನೀಂದ್ರನ ।
ಶುದ್ಧತ್ವದಿ ಪಡೆದುದ್ಧರಿಸಿದ ಶಿವ ೨೭

ಬಿಜ್ಜಳ ತನುಜೆಗೆ ಸಜ್ಜನ ಸತಿಯರ ।
ಕಜ್ಜವದುಹಿಸಿದ ಪೂಜ್ಯ ಪರಮ ಶಿವ ॥ ೨೮

ಮತ್ತೆ ರುದ್ರಮುನಿಗತ್ಯರ್ಥಿಯಲಿ ತ- ।
ತ್ವಾರ್ಥವರುಹಿ ಕರ್ತೃತ್ವನಿತ್ತ ಭವ ॥ ೨೯

ಹಾವಿನಾಳ ಕಲ್ಲದೇವನಿಂಗೆ ದೀ- ।
ಕ್ಷಾ ವಿಧಿ ರುದ್ರಯತಿವರನಿಂದರಿಸಿದ ॥ ೩೦

ಸೊನ್ನಲಿಗೈದಿ ಪ್ರಸನ್ನಸಿದ್ಧ ಸು- ।
ಜನ್ಮವಂ ಚಾಮಲೆಗೆ ನಿರವಿಸಿದನೆ । ೩೧

ವಿಮಲತ್ವದಿ ರುದ್ರಮುನಿಯ ತಾರಕ ।
ಸುಮಹಾನಗರದೊಳ್ ಕ್ರಮದಿಂದಿರಿಸಿದ ॥ ೩೨

ಕೊಲ್ಲಿಪಾಕಿ ಶಿವನಲ್ಲಿ ಬೆರೆದು ಸುಖ- ।
ದಲ್ಲಿಹ ಘನಮಠವಲ್ಲಭ ಶ್ರೀಗುರು ॥ ೩೩

ಪಂಡಿತಾರಾಧ್ಯರು

.... ೪೨ ....

ಶ್ರೀಗುರು ಮಲ್ಲಿಕಾರ್ಜುನ ಪಂಡಿತೇಂದ್ರನೆ ।
ಯೋಗಿಜನಾರ್ಚಿತ ಚರಣಪಯೋಜ ಜೋ ಜೋ ॥
ಯೋಗಿಜನಾರ್ಚಿತ ಶರಣಪಯೋಜನೆ ।
ಬೇಗದಿಂದೆ ನಾ ನಿಮ್ಮ ಸ್ತುತಿಸುವೆ ಜೋ ಜೋ ॥ಪ॥

ಜೋ ಜೋ ಸದಾನಂದ ಜೋ ಜೋ ಸುಜನ ವಂದ್ಯ ।
ಜೋ ಜೋ ಸುಗುಣವೃಂದ ಜೋ ಗುರುಕುಲೇಂದ್ರ ಜೋ ಜೋ ॥
ಜೋ ಗುರುಕುಲೇಂದ್ರ ಜೋ ಜಿತಭವ-ಬಂಧ ।
ಜೋ ಜೋ ರಹಿತಸಿಂದೆ ಜೋ ಭಕ್ತಿಸಾಂದ್ರ ಜೋ........ ೧

ನಿತ್ಯನಿರುಪಮ ಪರಮಾರ್ಥ ವಿಚಾರಸಂ- ।
ಸ್ತುತ್ಯ ಕೋವಿದ ಶುಭಗಾತ್ರಾ-ಘನಾಶಪ ।
ಮೃತ್ಯು ವಿಜಯನೆ ಪವಿತ್ರ ವಿಚಿತ್ರ ಜೋ........ ೨

ಘೋರಸಂಸಾರವಿದೂರ ದಯಾನಿಧೆ ।
ಮಾರಮರ್ದನನವತಾರ ನಿಶ್ಚಲಸುಖ- ।
ಸಾರ ಶಿವಮತೋದ್ಧಾರಾ ಪ್ರಮೇಯ ಜೋ........ ೩

ತ್ರಿಣಯನ ಪ್ರಮಥರ ನೆನೆಯಲಾಕ್ಷಣದೊಳು ।
ಘನರೂಪವೆತ್ತು ನಿಲ್ಲಲು ಪರಮೇಶ ಜೋ.... ॥
ಘನರೂಪವೆತ್ತು ನಿಲ್ಲಲು ಪರಮೇಶನು ।
ಮನುಜಲೋಕಕೆ ಪೋಗು ಎನುತೆ ಹರ್ಷದಲಿ ಜೋ........ ೪

ಸರ್ವಜ್ಞತ್ವವ ಕೊಟ್ಟು ಉರ್ವಿಗೆ ಕಳುಹಲಾ- ।
ನಿರ್ವಾಣಮೂರ್ತಿದೆ ಪರ್ವವೆನುತಾಗ ಜೋ.... ॥

ನಿರ್ವಾಣಮೂರ್ತಿದೆ ಪರ್ವವೆಸುತ್ತಾಗ ।
ಗರ್ವರಹಿತನಾಗಿ ಘನಶೋಭೆಯಿಂದೆ ಜೋ........ ೫

ಪುರಹರನಾಜ್ಞೆಯ ಶಿರದೊಳು ತಳೆದು ಬಂ- ।
ಧುರದಿಂದ ದಕ್ಷಸತ್-ಪುರಕ್ಕೈದು ಬಂದು ಜೋ.... ॥
ಧುರದಿಂದ ದಕ್ಷಸತ್-ಪುರಕ್ಕೈದು ಭೀಮನ ॥
ವರನಾಮನರಸಿ ಗೌರಾಂಬೆಗರ್ಭದಲಿ ಜೋ........ ೬

ನಿಜನಲ್ಲದ ಯೋನಿಸಂಭವನಾಗಿ ।
ತಾನುದಯಿಸಲವರಾನಂದದಿಂದ ಜೊ.... ॥
ತಾನುದಯಿಸಲವರಾನಂದದಿಂ ತೊಟ್ಲ ।
ಸ್ವಾನುಭಾವದ ಸೂತ್ರದಿಂ ಕಟ್ಟುತವರು ಜೋ........ ೭

ಶರಧಿ ರತ್ನವ ಧರಿಸುವ ಪರಿ ತಾನೆ ।
ಉರುಲಿಂಗಧಾರಕನಾಗಿಹ ವರನ ಜೋ.... ॥
ಉರುಲಿಂಗಧಾರಕನಾಗಿಹ ತರಳನ ।
ಭರದಿಂದ ತೊಟ್ಟಲೊಳ್ ನೆರೆ ಮಡಗುತವರು ಜೋ........ ೮

ಗುರು ಮಲ್ಲಿಕಾರ್ಜುನ ವರನಾಮದಿಂದಲಿ ।
ಕರೆದು ಜೋಗುಳವಾಡಿದರು ಮೋದದಿಂದ ಜೋ.... ॥
ಕರೆದು ಜೋಗುಳವಾಡಿದರು ಮೋದದಿಂತೆಂದು ।
ಶರಣರು ಕೇಳುವ ಪರಿಯೊಳು ಭರದಿ ಜೋ........ ೯

ಕರುಣಪ್ರಸಾದದ ಎರೆವಾಲನುಣುತಲಿ ।
ಪರಿಪೂರ್ಣ ಸುಖದೊಳಗಿರುಯೆನ್ನ ಕುವರ ಜೋ.... ॥
ಪರಿಪೂರ್ಣ ಸುಖದೊಳಗಿರು ಎನ್ನ ಕುವರ ನೆಂ- ।
ದುರವಣೆಸುತ ಪಾಡಿದರು ಮೋದದಿಂದ ಜೋ........ ೧೦

ಎನ್ನ ಪುಣ್ಯದ ಪುಂಜವೆನ್ನ ಭಾಗ್ಯದ ನಿಧಿ ।
ಮೆನ್ನ ಪ್ರಾಣದ ಪಡಿಯೆನ್ನಯ್ಯ ಬಾರೊ ಜೋ.... ॥

ಎನ್ನ ಹರಣದ ಪಡಿಯೆನ್ನಯ್ಯ ಬಾರೆಂದು ।
ಉನ್ನತದಿಂದ ತೂಗಿದರು ತೊಟ್ಲವನು ಜೋ........ ೧೧

ಎನ್ನ ಕುಲಪಾವನವೆನ್ನ ತಪದ ಫಲ- ।
ವೆನ್ನ ಸಲಹಬಂದ ಚೆನ್ನಮಲ್ಲೇಶ ಜೋ.... ॥
ಎನ್ನ ಸಲಹಬಂದ ಚೆನ್ನಮಲ್ಲೇಶ ಪ್ರ- ।
ಸನ್ನಮೂರುತಿಯಾಗಿ ಬಾಳೆನ್ನ ಕುವರ ಜೋ........ ೧೨

ಧರೆ ಶಿಷ್ಯರಿಗೆ ದೀಕ್ಷೆ ಕರುಣಿಸಲೆಂದು ಸ- ।
ದ್ಗುರು ರೂಪವೆತ್ತ ಈಶ್ವರಜನಿತ ಜೋ.... ॥
ಗುರುರೂಪವೆತ್ತ ಈಶ್ವರ ಭಾವಜನಿತನೆಂ- ।
ದ್ಧರಸಿದಾ ವೇಳೆಯೊಳು ಜನನಿಯೊಳು ಜೋ........ ೧೩

ಪರವಾದಿಗಳ ಪಡೆಮುರಿದು ಸದ್ಭಕ್ತರ ।
ಚರಿತೆಯ ಮೆರೆದು ನೀ ಬಾಳಯ್ಯ ಕುವರ ಜೋ.... ॥
ಚರಿತೆಯ ಮೆರೆದು ನೀ ಬಾಳಯ್ಯ ಕುವರ-ನೆಂ- ।
ದಿರದೆ ಕೊಂಡಾಡುತಲಿಹರು ಸಂಭ್ರಮದಿ ಜೋ........ ೧೪

ಮಡಿವಾಳಮಾಚಯ್ಯ ಹೊಡೆಹುಲ್ಲಬಂಕಯ್ಯ ।
ಕಡವಲನಂಬಿಯ ಹುಡುಗನೆಂದೆನಿಸಿ ಜೋ.... ॥
ಕಡವಲನಂಬಿಯ ಹುಡುಗನೆಂದೆನಿಸುತೆ ।
ಬಿಡದಪ್ಪರಸರ ನೀ ಹಾಡಿ ಬಾಳಯ್ಯ ಜೋ........ ೧೫

ದಸರಯ್ಯನಗಜೇಶ ಮಸಣಯ್ಯಗಳ ಮುದ್ದು- ।
ಶಿಶುವೆನಿಸುತೆ ಹೊಗಳಿಸಿ ಶುಭದಿಂದೆ ಜೋ.... ॥
ಶಿಶುವೆಂದು ಹೊಗಳಿಸಿ ರಸೆಯೊಳು ಕೀರ್ತಿಯ ।
ಒಸೆದು ಪಡೆದು ಬಾಳೊ ಕುಶಲ ನಿಧಾನ ಜೋ........ ೧೬

ಮಾದಾರ ಚೆನ್ನಯ್ಯ ಮೇದಾರ ಕೇತಯ್ಯ- ।
ನಾದಿಕುಲಜನೆಂದು ವೋದಿಸಿ ಮುದದಿ ಜೋ.... ॥

ಆದಿಕುಲಜನೆಂದು ವೋದಿಸಿ ಮುದದೊಳು ।
ಮೇದಿನಿಯೊಳು ಮೆರೆಯೊ ದಿವ್ಯಮೂರ್ತಿ ಜೋ........ ೧೭

ಸಿದ್ಧರಾಮಯ್ಯ ಪ್ರಸಿದ್ಧಬುದ್ಧಗೆ ನೀ ।
ಮುದ್ದುಕುವರನಾಗಿ ಚೋದ್ಯದಿಂ ಬಾಳೊ ಜೋ.... ॥
ಮುದ್ದುಕುವರನಾಗಿ ಚೋದ್ಯದಿಂ ಬಾಳೊ ಸಂ- ।
ಸಿದ್ಧ ಪಂಡಿತ ಮಲ್ಲಿಕಾರ್ಜುನಾರಾಧ್ಯ ಜೋ........ ೧೮

ಪರಮ ಪ್ರಸಾದದ ಶರಧಿಯೊಳಿರುವಂಥ ।
ಮರುಳ ಶಂಕರನ ಸಂಸ್ಮರಿಸಿ ನಿಜಬಾಳೊ ಜೋ.... ॥
ಮರುಳ ಶಂಕರನ ಸಂಸ್ಮರಿಸುತೆ ಜಗದೊಳು ।
ಪರಮಪಾವನನಾಗಿ ಚರಿಸೆನ್ನ ಬಾಲ ಜೋ........ ೧೯

ಬಸವಯ್ಯನಾಚೆನ್ನಬಸವಯ್ಯನಲ್ಲಮ- ।
ರಸಮ ಬಾಲಕನಾಗಿ ಕುಶಲದಿಂ ಬಾಳೋ ಜೋ.... ॥
ಅಸಮಬಾಲಕನಾಗಿ ಕುಶಲದಿಂ ಬಾಳಯ್ಯ ।
ಶಶಿಧರನವತಾರ ಕುಶಲಸಂಸ್ತುತ್ಯ ಜೋ........ ೨೦

ಅಕ್ಕಮಹಾದೇವಿಯಕ್ಕ ನಾಗಮ್ಮ ಸ- ।
ತ್ಯಕ್ಕ ಚಂಗಳೆ ಮುಕ್ತಾಯಕ್ಕ-ನಮ್ಮವ್ವೆ ಜೋ.... ॥
ಅಕ್ಕಚಂಗಳೆ ನಂಬಿಯಕ್ಕಗಳಣುಗನಾಗಿ ।
ಅಕ್ಕರದಿಂ ಬಾಳು ಬಾಳೆನ್ನ ಪುತ್ರಾ ಜೋ........ ೨೧

ನೀಲಗಂಗಮ್ಮನ ಬಾಲೆಸುಗ್ಗಲೆಯಳ ।
ಬಾಲಕನಾಗಿ ನೀ ಬಾಳೆನ್ನ ಕುವರ ಜೋ.... ॥
ಬಾಲಕನಾಗಿ ನೀ ಬಾಳೆನ್ನ ಕುವರನೆ ।
ಬಾಳಲೋಚನವತಾರವುದಾರ ಜೋ........ ೨೨

ಗೊಗ್ಗವ್ವೆ ಮುದನೂರ ದುಗ್ಗಳವ್ವೆಯರ ಸ- ।
ಮಗ್ರ ಸುತನುಮಾಗಿ ಬಾಳೆನ್ನ ಕುವರ ಜೋ.... ॥

ಅಗ್ರ ಸುತನುಮಾಗಿ ಬಾಳೆನ್ನ ಕುವರನೆ ।
ಪ್ರಾಜ್ಞನೆನಿಸುತನುದಿನ ಜಗದೊಳು ಜೋ........ ೨೩

ಎಲ್ಲ ಗಣಂಗಳ ಮೆಲ್ಲಡಿಗಳ ನೆನೆದು ।
ಉಲ್ಲಾಸದಿಂ ಬಾಳು ಬಾಳೆನ್ನ ಕುವರ ಜೋ.... ॥
ಉಲ್ಲಾಸದಿಂ ಬಾಳು ಬಾಳೆನ್ನ ಕುವರನೆ ।
ಮಲ್ಲಿಕಾರ್ಜುನ ಪಂಡಿತಾರಾಧ್ಯನಾಮ ಜೋ........ ೨೪

ಈಶ ಜಿನಮತವಿನಾಶ ತ್ರಿಭುವನ ಪ್ರ- ।
ಪೋಷ ಸದ್ಗುಣಮಣಿಭೂಷ ಮಹೇಶ ಜೋ.... ॥
ಪೋಷ ಸದ್ಗುಣಮಣಿಭೂಷ ಶ್ರೀ ಘನಮಠ ।
ವಾಸ ಶ್ರೀಗುರು ಪಂಡಿತೇಶ ಪ್ರಕಾಶ ಜೋ........ ೨೫

ಪರಮೇಶ್ವರ

.... ೪೩ ....

ಶ್ರೀ ಮಹಾದೇವ ಪಾಹಿ ಮಾಂ ಕರುಣಾಕರ ಭವ ।
ಶ್ರೀ ಮಹಾದೇವ ಭಕ್ತಪ್ರೇಮ ಪರಾತ್ಪರ ಧೃತೇಂದು ।
ನೇಮ ಸುರಪ ಹರಿ ಪಿತಾಮಹಾಮರಾಳಿನತ ಪದಾಬ್ಜ ॥ಪ॥

ಮೋಕ್ಷದಾಯಕವಿರಳ ಗಣಪಕ್ಷಪಾವನಾಂಗ ಶ್ರೀ ಮ- ।
ಹೋಕ್ಷವಾಹ ದುರ್ಮದಾಂಧದಕ್ಷವಿಪಕ್ಷ ಧೀರ ॥ ೧

ತಾರಕಾರಿಜನಕ ಸೂರ-ತಾರಕೇಶ್ವರಾನಲಾಕ್ಷ ।
ತಾರಕಾದ್ರಿನಿಲಯ ವಿಹಿತ ತಾರಕಾಕಾರ ಪರಮ ॥ ೨

ಶುದ್ಧ ಘನಮತೇಶ್ವರಾಘವಿರುದ್ಧ ತ್ರಿಗುಣರಹಿತ ಸುಪ್ರ- ।
ಸಿದ್ಧ ಭುವನಪೋಷ ಸ್ವರ್ಣಕುಧ್ರಧನು ಶೋಭಿತಕರ ॥ ೩

.... ೪೪ ....

ಸೋಮಶೇಖರ ಶುಭನಾಮ ಮಹೇಶ ।
ಸ್ವಾಮಿ ತ್ರ್ಯೈಭುವನರಕ್ಷಾ ಮುಕ್ತಿಕೋಶ ॥ಪ॥

ಶರ್ವಾಣೀಶ್ವರ ನಿತ್ಯ ಗೀರ್ವಾಣವಿನುತ ।
ನಿರ್ವಾಣಾಶ್ರಿತ ಭಕ್ತಸಾರ್ವಭೌಮ ನಮಿತ ॥ ೧

ಮಾರಮರ್ದನ ಮೋಕ್ಷಾಧಾರಾಪ್ರಮೇಯ ।
ಭೂರಿಪ್ರತಾಪ ಸುಪುಣ್ಯಸಹಾಯ ॥ ೨

ವರದ ಶ್ರೀ ಘನಮಠವಾಸ ಸರ್ವೇಶ ।
ಪರಮ ದಯಾಲ ಮಾಂ ಪಾಹಿ ಗಣೇಶ ॥ ೩

.... ೪೫ ....

ಹರಹರ ಭೋ ಭೋ ಭೋ ಶಿವಶರಣ ಸಹಾಯ ॥ಪ॥

ವರದ ಪರಮ ಹಿಮಕರಧೃತ ಭವ ಉಮಾ- ।
ವರ ಭವಹರ ಕೃಪಾಕರ ಸಿತಕಾಯ ॥ ೧

ಮರಣರಹಿತ ಮುರಹರನತಚರಣ ಸಿಂ- ।
ಧುರದಿತಿಸುತಚರ್ಮಾಂಬರ ಹತಮಾಯ ॥ ೨

ಮದನದಹನ ಗಿರಿಸದನ ನಿರಘ ಪಂಚ- ।
ವದನ ಶ್ರೀ ಘನಮಠೇಶ ಧನದ ಪ್ರಿಯ ॥ ೩

.... ೪೬ ....

ಪರಮೇಶ ಪಾಹಿ ಜೀಯಾ ಸುಖಕರ ಶಿವ ಮಹನೀಯ ॥ಪ॥

ವರದ ತ್ರಿಜಗದ್-ರಕ್ಷ ಗತಮರಣ ದಕ್ಷಶಿಕ್ಷ ।
ಪುರಹರ ಮುನಿಗಣಪಕ್ಷ ಶಿವಶರಣ ಕಲ್ಪವೃಕ್ಷ ॥ ೧

ಸಾಮಗಾನಲೋಲ ಭವಭೀಮ ವಿಜಿತಕಾಲ ।
ಶುಭನಾಮ ವರದಯಾಲ ಧೃತಸೋಮ ಮುಕ್ತಿಮೂಲ ॥ ೨

ಭಾವಭವವಿನಾಶ ಸದ್ಭಾವ ನಿಜ ನಿವಾಸ ಹೈ- ।
ಮಾವತಿಸುಪ್ರಾಣೇಶ ಮದ್ದೇವ ಘನಮಠೇಶ ॥ ೩

.... ೪೭ ....

ಪರಮೇಶ ಮಾಮವ ಶಾಶ್ವತ ।
ಗಿರಿಧರಶರ ಸ್ಮರಹರ ಸ್ಥಿತಕರುಣಾ ।
ಕರ ಸುರನತ ಸಚ್ಛರಣ ಮರಣರಹಿತ ॥ಪ॥

ತ್ರಿಮಲರಹಿತಾನಲಾರ್ಯಮ ಹಿಮಕರಾಕ್ಷತ್ಸ ।
ಪ್ರಮಥನಿವಹಹೃತ್ಕಮಲನಿಲಯ ದ- ।
ಕ್ಷಮಖಕ್ಷಯ ಭೋ ಶಮನಶಮನ ನಿರ್ಭಯ ॥ ೧

ನಗಜೆ ಮುಖಾಬ್ಜಭೃಂಗ ಗುಣಗಣಾನ್ವಿತ ।
ಅಗಣಿತ ಮಹಿಮ ನಿರಘ ನಿಶ್ಚಲ ಪ- ।
ನ್ನಗಭೂಷಣ ಭೋ ನಿಗಮನಿಕರ ಸನ್ನುತ ॥ ೨

ವೃಷಭಗಮನ ದಶದಿಶವಸನಾನ್ವಿತ ।
ಕುಶಲ ಘನಮಠನಿವಾಸ ನಿಶ್ಚಲ ಶ್ರೀ ।
ದಸುಸಖ ಶಿವ ಭೋ ಕುಶಲ ಕವಿವಿನುತ ॥ ೩

.... ೪೮ ....

ಶಾಂಕರಿಪ್ರೀತ ಶಂಕವಿಧೂತ ॥ಪ॥
ಪಾಂಡುರಗಾತ್ರಾಖಂಡಲಸ್ತೋತ್ರ ।
ಅಂಡಜಾತಲ್ಪಸುಮೈತ್ರ ॥ ೧
ಅಂಬರಕೇಶ ಶಾಂಬರಭೂಷ ।
ಶಂಬರವೈರಿವಿನಾಶ ॥ ೨
ಘನಮಠವಾಸ ಗುಣಗಣಕೋಶ ।
ದಿನಕರಕೋಟಿ ಪ್ರಕಾಶ ॥ ೩

.... ೪೯ ....

ಪೊರೆಯಯ್ಯ ದೇವದೇವ ಜನನಮರಣವಿರಹಿತ ।
ಧರಾವರ-ವಾಗ್ವರ-ಪ್ರಶಚೀಶ್ವರ-ಸುಸೇವಿತ ॥ಪ॥

ಮಿತ್ರ ಕುಮುದಮಿತ್ರ ವಾಯುಮಿತ್ರ ನೇತ್ರನೆ ಧನದ- ।
ಮಿತ್ರ ಧವಳಗಾತ್ರ ಗೋತ್ರಪುತ್ರಿಪ್ರೀತನೆ ॥ ೧

ಕಾಲಕಾಲ ಧೃತಕಪಾಲಮಾಲ ಶೀಲನೆ ಶಿವ ದ- ।
ಯಾಲವಾಲ ಸುಜನಭಕ್ತಜಾಲ ಪಾಲನೆ ॥ ೨

ಲಿಂಗ ವೃಷತುರಂಗ ಭವವಿಭಂಗ ಶುಭಕರ ಹರ ।
ನಿರಂಗ ಘನಮತೇಶ ಸುಪ್ರಸಂಗ ಗಣವರ ॥ ೩

.... ೫೦ ....

ಬಾಲಶಶಿಧರ ಪರಮೇಶಾ ಗಜಾವರ ।
ಪಾಲಯ ರೇ ಮಾಂ ಶಿವ ॥ಪ॥

ಶೇಷವಿಭೂಷಣ ದೋಷವಿನಾಶನ ।
ಪೋಷತ್ರೈಭುವನ ಸಮಾನಾಗಜಾವರ ॥ ೧

ಭವಘನಮಾರುತ ಭವ ದಿವಿಜಾರ್ಚಿತ ।
ಅವಿರಳಜ್ಞಾನಸಮೇತಾಗಜಾವರ ॥ ೨

ಮುನಿಜನಮಾನಸವನಜನಿವೇಶ ।
ಘನಮತವಾಸ ಮಹೇಶಾಗಜಾವರ ॥ ೩

.... ೫೧ ....

ಸ್ವಾಮಿ ನೀ ಸಲಹಯ್ಯ ಸೋಮಶೇಖರನೆ ॥ಪ॥
ಮುರಹರಶರ ಸುರಪುರವರವರಸುತ- ।
ವರದ ಪರಮಸ್ಮರಹರ ಗಿರಿಶನೆ ॥ ೧

ಅಸದೃಶಯಶ ದಶದಿಶವಸನಸಹಿತ ।
ಶಶಿವಸುಬಿಸಜಸಖಸುದೃಗ ಶಿವ ॥ ೨

ಝುಗಝುಗಿಸುವ ನಗೆಮೊಗದಗಜೆಗೆ ಮಿಗೆ ।
ಮಿಗೆಸೊಗಸಿನ ಸುಗುಣಗಣಾನ್ವಿತ ॥ ೩

ಮನುಮುನಿಜನ ಮನಸಿನ ಕೊನೆಮೊನೆಯೊಳ- ।
ಗನುದಿನವನು ಮನೆಯೆನಿಸಿದನಘ ॥ ೪

ಹತಪಿತೃಪತಿ ಕ್ಷಿತಿರಥ ಮೃತಿಗತ ವಿಧಿ ।
ಸುತನುತ ಘನಮಠಪತಿ ನತಯುತ ॥ ೫

.... ೫೨ ....

ರಾಗ: ಶಂಕರಾಭರಣ ತಾಳ: ಆದಿ

ಪಾವನನಾಮ ಭೋ ದೇವ ಪಾಹಿ ಮಾಂ ।
ದೇವ ದೇವ ಪಾಹಿ ಮಾಂ ॥ಪ॥

ಮೃಡಕರುಣಾರಸಜಡಧೆ ಗಿರೀಶ ।
ಉಡುಪತಿಭೂಷ ಭೋ ದೇವ ಪಾಹಿ ಮಾಂ ೧

ನಿಗಮಹಯಾದ್ವಯ ತ್ರಿಗುಣ ವಿದೂರ ।
ನಗವರಚಾಪ ಭೋ ದೇವ ಪಾಹಿ ಮಾಂ ೨

ಘನಮಠವಾಸ ಮುನಿಜನಪೋಷ ।
ಪ್ರಣವಸ್ವರೂಪ ಭೋ ದೇವ ಪಾಹಿಮಾಂ ೩

.... ೫೩ ....

ಶಿವಾಭವ ಶಾಶ್ವತಾರ್ಯಾಧವಾ ಪಾಹಿ ಮಾಂ ॥ಪ॥

ಶರಣಜನ ಸುಹೃತ್ಸರೋಜಚರಣ ಶೋಭಿತ ।
ದಿನಕರ ಶಶಾಂಕ ವಹ್ನಿನಯನ ಸುರಸಮರ್ಚಿತ ೧

ಶರಭವಾತ್ಮಜನಕ ಶರಜಶರಪ್ರಭಂಜನ ।
ವರಕರುಣಾಮೃತಸಾಗರ ಪುರಹರ ನಿರಂಜನ ೨

ಶಂಕರಾಭ್ರಕೇಶ ಭವಭಯಂಕರಾದ್ವಯ ಶೋಭ- ।
ನಾಂಕುರ ಘನಮಠನಿವಾಸ ಕಿಂಕರ ಸುಪ್ರಿಯ ೩

.... ೫೪ ....

ಪಾಹಿ ಪರಮೇಶ ಶಿವ ದೇವದೇವ ||ಪ||

ದುರಿತವಿದೂರ ಶರಣಪ್ರಪೂರ ।
ಕರಿಮುಖಪಿತ ಸುಖಸಾರ ಸಾರ ೧

ಹರಿಸುತನಾಶ ಪರಮ ಪ್ರಕಾಶ ।
ಶರಣು ಶರಣು ಗೌರೀಶ ಈಶ ೨

ಮುನಿಜನಲೋಲ ಅನಘದಯಾಲ ।
ಘನಮಠವಾಸ ಪ್ರಕಾಲಕಾಲ ೩

.... ೫೫ ....

ದಯಾನಿಧೆ ದಯಾನಿಧೆ ದಯಾನಿಧೆ ಶಿವ- ।
ಸ್ವಯಾನುಭವ ಸುಖಪ್ರದಾವಯವ ಆರ್ಯಾರ್ಧವ ||ಪ||

ಮುರಸುರಾರಿ ಕಮಲಜಾದ್ಯಮರಾರ್ಚಿತಪದ ।
ಪುರಾರಿ ಗಗನಕೇಶ ಮಹೇಶ್ವರರಹಿತಮದ ೧

ಝುಷಪತಾಕದಹನ ಗಿರಿನಿವಾಸಾಮಯಹತ ।
ವೃಷೇಂದ್ರಗಮನ ಪರಮಪಾವನ ಸೋಮಧೃತ ೨

ಹುತಾಶನೇಂದ್ರಿಯಾಘಕುಲರಹಿತಾಭಯಕರ ।
ಯತೀಶ ಹೃದಯಸರಸಿಜಾವಿರತಭಾಸ್ಕರ ೩

ಗಜಾಸುರಾರೆ ಭಕ್ತದೇವ ಕುಜಾಧ್ವರಹರ ।
ದ್ವಿಜೇಶಭೂಷ ಭೋ ಭವಭಯವ್ರಜಾಪಹರ ೪

ಸದಾಶಿವಾಖಿಳೇಶ ವರ ಧನದಾಮಳಸಖ ।
ಚಿದಾಬ್ಧಿ ಘನಮತೇಶ ಭೋ ವರದಾಮಿತಸುಖ ೫

.... ೫೬ ....

ಪಾಹಿ ಮಹೇಶ ಪಾಪವಿನಾಶ ।
ಮೋಹರಹಿತ ವೃಷವಾಹ ಗಿರೀಶ ||ಪ||

ಹಾರತುಷಾರಪಟೀರಪ್ರಗೌರಶ- ।
ರೀರ ನಿರುಪಮ ಕುಮಾರಜನಕ ಶಿವ ೧

ಅಂಗಜಭಂಗ ಮತಂಗಜಿನಾಂಬರ ।
ಮಂಗಳಮಯ ಮಹಾಲಿಂಗ ನಿರಾಮಯ ೨

ಘನಮತವಾಸ ಶರಣಹೃದಯೇಶ ।
ಅನಘದಯಾರಸವನಧೆ ಗಣೇಶ ೩

.... ೫೭ ....

ಗಿರಿಜಾರಮಣ ಮಹೇಶ ಚಿರಮಾಮವ ಜಗದೀಶ ।
ಶರಭವ ವರ ಜನಕ ಚಿದಾಭರಣ ಭವವಿನಾಶ ||ಪ||

ದುರಿತಗಹನದಹನ ಶಿವಂಕರ ಮರಣರಹಿತ ಸುಧಾ- ।
ಕರ ಸರಸಿಜಸಖ ಶಿಖಿದೃಗ ಮುರಹರಪ್ರಿಯ ಭೋ ಶಿವ ವ್ಯೋಮಕೇಶ ೧

ನಂದಿವಾಹನಾಮಳಯತಿವೃಂದ ನಮಿತ ಚರಣ ಶ್ರೀ- ।
ನಂದನ ಮದಸಿಂಧೂರಪ್ರಮೃಗೇಂದ್ರ ಶಾಶ್ವತಾದ್ವಯ ಸುಗಿರೀಶ ೨

ವರದ ಶ್ರೀ ಘನಮತನಿವಾಸ ಶರಣಕುಲಚಕೋರ ಗೌರೀ ।
ದ್ವಿರದ ಚರ್ಮಾಂಬರ ಕೃಪಾರಸಶರಧೆ ಪಾಂಡುರಗಾತ್ರ ಸುಪರಮೇಶ ೩

.... ೫೮ ....

ಶರಣಸಹಾಯ ಶಿವ ಶಾಶ್ವತಾಘಹರ ।
ವರದಾಭಯ ಸುಖಕರ ಗಿರಿಜಾವರ ॥ ॥ಪ॥

ಮದನದಹನ ಮುನಿಹೃದಯಕಮಲ ನಿಜ- ।
ಸದನ ಕೃಪಾಮೃತನಿಧೆ ಪರಮೇಶ್ವರ ॥ ೧

ತರುಣತುಹಿನಕರಧರ ಮರಣರಹಿತ ।
ನರವಾಹನಸಖ ಉರಗ ವಿಭೂಷಣ ॥ ೨

ಘನಮಠವಾಸ ಭುವನಪರಿತೋಷಿತ ।
ಜನನವಿದೂರ ಸುಮನಸವಿವರ್ಣಿತ ॥ ೩

.... ೫೯ ....

ಶಮನಶಮನ ಶಿವ ಶ್ಯಾಮಲಗ್ರೀವ ।
ಅಮಿತಪಾಪೌಘಾಪಹರ ಮಹಾದೇವ ॥ ॥ಪ॥

ಸರಜಶರಾಂತಕ ಗಿರಿಜಾಸಮೇತ ।
ಉರಗಭೂಷಣ ವರಕರಿಮುಖತಾತ ॥ ೧

ಶ್ರುತಿನುತಪಾತ್ರ ಭೂರಥ ಶುಭಗಾತ್ರ ।
ಗತಮೃತಿಜನನ ಶಾಶ್ವತಹರಿಮೈತ್ರ ॥ ೨

ಇಭಚರ್ಮಾಂಬರ ನಭನಿಜಕೇಶ ।
ಅಭವ ಶ್ರೀ ಘನಮಠೇಶ ಭಯವಿನಾಶ ॥ ೩

.... ೬೦ ....

ಮಾಮವ ಸಾಂಬಸದಾಶಿವ ಭೋ ।
ಸೋಮ ವಿಭೂಷಣ ॥ ॥ಪ॥

ಕಂತುವಿಜಯ ಭಕ್ತಸ್ವಾಂತನಿಲಯ ಶಿವಾ- ।
ಕಾಂತ ಸತ್ಕರುಣಾಸಾಗರ ॥ ೧

ದೀನರಕ್ಷಣ ಮಹಾಸೇನಜನಕ ಕೋಟಿ- ‖
ಭಾನುತೇಜೋಮಯಾಕರ ‖ ೨

ಕಲುಷಸಂಚಯಘನಾನಿಲ ಶುಭಕರ ಶಿವಾ- ।
ಮಳಘನಮಠಾಧೀಶ್ವರ ‖ ೩

.... ೬೧ ....

ಮಹಾದೇವ ಮಾಮವಜಗದೀಶ ಭೋ ‖ಪ‖

ಪುರಹರ ಗಿರಿಸುತವರ ಸುರಗಣನುತ- ।
ಚರಣ ಮರಣಭಯನಾಶರೇ ‖ ೧

ಭವವಿರಹಿತ ಕೃಪಾರ್ಣವ ಶುಭಗಾತ್ರ ।
ಭುವನಪೋಷಿತ ಸುಖಸಾರ ರೇ ‖ ೨

ವರದ ಶಶಾಂಕಶೇಖರ ಯತಿಲೋಲ ।
ಪರಮ ಶ್ರೀ ಘನಮಠವಾಸ ರೇ ‖ ೩

.... ೬೨ ....

ಮಾಯವಿರಹಿತ ಮೋಕ್ಷೋಪಾಯ ಶಂಕರ ‖ಪ‖ -

ಮಂದರವಾಸ ಇಂದುಭೂಷ ನಂದಿವಾಹನ ದೇವ
ಸನಕಸನಂದನಾದಿಯೋಗೀಂದ್ರಾರ್ಚಿತಪದ ಪರಶಿವ ‖ ೧

ದುರಿತವಿನಾಶ ಪರಮಪ್ರಕಾಶ ನರವರದ ದೇವ ।
ಧರಾಧರವರ ಕಾರ್ಮುಕ ಶ್ರೀಕರ ಪುರಹರ ಪರಶಿವ । ೨

ಘನಮಠನಾಥ ಗಣಪಸುತಾತ ಇನಜಹತ ದೇವ ।
ತ್ರೈಲೋಕ್ಯನಮಿತಪದ ಪರಮಾತ್ಮಾಭವ ಪರಶಿವ ‖ ೩

.... ೬೩ ....

ಗಿರಿಜಾರ್ಧಾಂಗ ಶ್ರೀಕರಶಿವಲಿಂಗ ।
ಪರಿಪಾಲನುಪಮವೃಷಭತುರಂಗ ॥ ॥ಪ॥

ದೇವದೇವ ಕಲುಷವನದಾವ ।
ಪಾವನಪುಯ ಸುತಮಾವರ ಶಂಕರ ॥ ೧

ಶರಣಾಗತ ಜನವರದ ದಯಾರಸ- ।
ಶರಧೆ ಸುಕವಿನುತಚರಣ ಪರಾತ್ಪರ ॥ ೨

ಘನಮತೇಶ ಮುನಿಜನಪರಿತೋಷ ।
ಜನನ ಮರಣ ರಹಿತಾನಘಶುಭಾಹ್ವಯ ॥ ೩

.... ೬೪ ....

ಗೌರೀರಮಣ ಭೋರನೆ ಕಾಯೊ ।
ಸಾರಶರಣ ಗಣೋದ್ಧಾರ ಮಂದಾರ ಶ್ರೀ ॥ ॥ಪ॥

ಕ್ಷೋಣಿರಥಾಂಬುಜ ಬಾಣದಹನ ನಿ- ।
ರ್ವಾಣ ಪರಮಸುಖದಾನ ಪ್ರವೀಣ ಶ್ರೀ ॥ ೧

ಸುರಗಣಸೇವಿತಾಧ್ವರನಾಶನ ಹರಿ- ।
ಶರ ಮರಣರಹಿತ ಧರಾಧರಭೂಷಣ ಶ್ರೀ ॥ ೨

ಕನಕಗಿರಿನಿಕೇತನ ಸರ್ವೇಶ್ವರ ।
ಧನವಸಖ ಸುಶಿವ ಘನಮತೇಶ ಶ್ರೀ ॥ ೩

.... ೬೫ ....

ಪಾಲಿಸೆನ್ನನು ಶಂಕರ ಕಾಲಸಂಹರ ।
ಪಾಲಿಸೆನ್ನನು ಶಂಕರಾಮರಜಾಲನತಪದ ನೀಲಗಳ ನಭೋ- ॥
ವಾಲ ಶೈಲಜಲೋಲ ಪರಮದಯಾಲ ನಿತ್ಯನಿರಾಳ ನಿರ್ಭಯ ॥ಪ॥

ನಂದಿವಾಹನ ಶಾಶ್ವತ ಪರಮಾತ್ಮ ಶಿವ ಸಾನಂದಾದಿ ಮುನಿವಂದಿತ
ಪಾಂಡುಶರೀರ ।
ನಂದನಂದನನಂದನಾಂತಕ ಹಿಂದೆ ಭವಮರಣಭಯಗಳೊಳತಿ ॥
ನೊಂದು ಬಂದೆನು ತಂದೆ ನೀದಯದಿಂದ ಕೈವಿಡಿದಿಂದುಶೇಖರ ॥ ೧

ಸೋಮಸುಜನ ಸೇವಿತ ಸಾರಂಗಕರ ನಿಸ್ಸೀಮ ತ್ರಿಮಲವಾರಿತ
ರಜತಾಚಲೇಶ ।
ಸಾಮಜಾಸನತಾತ ನಿಗಮಸ್ತೋಮಹಯ ಭವಭೀಮ ನಿಮ್ಮ ಸು- ।
ನಾಮವೆನ್ನಯ ಜಿಹ್ವೆಗನುಗೊಳಿಸಿ ಮಹೇಶ್ವರ ಪ್ರೇಮದಿಂದಲಿ ॥ ೨

ಈಶ ಪರಮಪಾವನ ಮಹಾದೇವ ತ್ರಿಪುರವಿನಾಶ ಪನ್ನಗಭೂಷಣ
ಸರ್ವೇಶ್ವರಾಭವ ।
ಭಾಸುರಾದ್ವಯ ಶ್ರೀ ಘನಮಠನಿವಾಸ ತ್ರಿಭುವನಪೋಷ ನಿಮ್ಮಯ ।
ದಾಸ ದಾಸರದಾಸ ದಾಸರದಾಸನೆನಿಸುತೆ ವಾಸಿಯಿಂದಲಿ ॥ ೩

.... ೬೩ ....

ಪರಮದಯಾಲ ಪರಿಪಾಲಿಸಭವನೆ ಪರಿಪಾಲಿಸಭವನೆ ।
ದುರಿತವಿದೂರ ಮುರಹರನುತಪದ ಶಿವ ॥ ॥ಪ॥

ಇಂದುಶೇಖರ ಭವಬಂಧವ ಭೇದಿಸಿ ।
ಕಂದನೆಂದತಿ ಮುದದಿಂದೆ ಸದಾ- ।
ನಂದಮಯನೆನಿಸಿ ಮಂದರಮಂದಿರ ಶಿವ ॥ ೧

ಎನ್ನವಗುಣತತಿಯಂ ನೀ ನೋಡದೆ ।
ಮನ್ನಿಸಿ ಪರಮಪ್ರಸನ್ನನಾಗಿ ।
ಧನ್ಯನೆನಿಸುತೆ ಸುಪುಣ್ಯಮಯನೆ ಶಿವ ॥ ೨

ಘನಮಠವಾಸ ಪಾವನದಿವಿಜಾರ್ಚಿತ ।
ಮನದ ಚಲನವಳಿದನುದಿನವಾ- ।
ಜನನ ಮರಣ ಭಯವನು ಹರಿಸುತೆ ಶಿವ ॥ ೩

... ೬೭ ...

ಕರುಣಸಾಗರ ದೇವ ಕಾಯೋ ನಿತ್ಯ ।
ಪರತತ್ವಮತಿ ಎನ್ನ ದೊರೆ ದಾನವೀಯೋ ॥ ॥ಪ॥

ಮಾಯಮರ್ದನ ಮೋಕ್ಷೋಪಾಯ ಸದ್ಭಕ್ತನಿ- ।
ಕಾಯ ಹೃತ್ಸರಸಿಜಾಗಾರಸಿರಸೂಯ ದುರ್ಗುಣ ಸಮುದಾಯಾಪಹಾರ॥ ೧

ಏನಗೇನು ಬೇಡ ನಿಮ್ಮಸುಭಾವಿಗಳ ಪದವನಜರೇಣು ಶಿರದೊಳು
ಧರಿಸಿನೈಜ ।
ವನು ತೋರಿ ಕರ್ಮವೆಲ್ಲವನು ಪರಿಹರಿಸಿ ॥ ೨

ಶಾಶ್ವತ ಘನಮಠದೀಶ್ವರ ನಿನ್ನ ಚಿದೈಶ್ವರ್ಯವೆನ್ನ ಭಾವದಲಿ ಸಕ ।
ಲೇಶ್ವರ ನೀ ನೆಲಸಿಹುದದನೆ ಬೇಗದಲಿ ॥ ೩

... ೬೮ ...

ದೇವ ಮಾಮವ ಭವ ಭಾವಜನಾಶ ।
ಪಾವನಚರಿತ ಗಣಜಾಲಪಾಲ ॥ ॥ಪ॥

ಇಂದುಶೇಖರ ಮುನಿವೃಂದ ಸುಪೂಜ್ಯ ।
ಮಂದರಮಂದಿರ ಜಿತಮಾರ ಧೀರ ॥ ೧

ಕುಂಜರಜಿನಾಂಬರ ಕಂಜಲೋಚನಶರ ।
ಭಂಜಿತಶಮನಾಂಬರ ವಾಲಖೇಲ ॥ ೨

ಬಂಧುರ ಘನಮಠೇಶಾಂಧಕನಾಶ ।
ಬಂಧುವಿರಹಿತ ಭವಭೀಮ ಸೋಮ ॥ ೩

... ೬೯ ...

ಶಿವದಯಾಲ ಮಾಂ ಪಾಹಿಭೋ ಶಿವಶಿವ
ದಯಾಲಮಾಂ ಪಾಹಿ ।
ಭವವಿನಾಶ ತ್ರೈಭುವನಪೋಷ ಪರ ॥ ॥ಪ॥

ಧವಳಗಾತ್ರ ಮಾಧವಸುನೇತ್ರಕಂ- ।
ಭವರಾಜಿತ ಪದವನಜಯುಗ ನಿಜ ॥ ೧

ರಾಜರಾಜಸಖ ರಾಜನವೌಳಿಗಣ- ।
ರಾಜಪೂಜ್ಯ ಗಿರಿರಾಜಸುತಾಧಿಪ ॥ ೨

ಅಕ್ಷಯ ದಕ್ಷಮುಖಕ್ಷಯ ಬುಧಜನ- ।
ಪಕ್ಷ ಸುಲಕ್ಷಣ ಉಕ್ಷವಾಹನ ॥ ೩

ಮಾನಿತ ರವಿಚಂದ್ರಾನಲಲೋಚನ ।
ಸೂನಶರಾಂತಕ ಜ್ಞಾನಪರಾಯಣ ॥ ೪

ಘೋರ ದುರಿತಸಂಹಾರ ಭಕ್ತಮಂ- ।
ದಾರ ಸಾರ ಕರುಣಾರಸಾಂಬುನಿಧೆ ॥ ೫

ಪುಂಡರೀಕ ಭವಖಂಡಿತಶೀರ್ಷ ಪ್ರ- ।
ಚಂಡಕೋಟಿ ಮಾರ್ತಾಂಡ ತೇಜ ಪರ ॥ ೬

ಕಾಲಕಾಲ ಪರಿಪಾಲ ಜಗತ್ರಯ ।
ಶೂಲಪಾಣಿ ದಿಕ್‌ಚೇಲನಿರಾಮಯ ॥ ೭

ಶಂಕರ ಸೌಪುಣ್ಯಾಂಕುರ ಪಾಪಭ- ।
ಯಂಕರ ಶುಭಚಿಹ್ನಾಂಕಿತ ಶ್ರುತಿಹಯ ॥ ೮

ಭರ್ಗ ಸಾಧುಸಂಸರ್ಗ ವೀತಷ- ।
ಡ್ವರ್ಗ ರಜತವರದುರ್ಗನಿಲಯ ಪರ ॥ ೯

ಸ್ಥಾಣು ಲೋಕಸಂತ್ರಾಣ ಪರಮುನಿ- ।
ವಾರ್ಣ ಕರಧೃತಯೇಣ ಗಿರೀಶ್ವರ ॥ ೧೦

ಭಾಸುರ ಘನಮಠವಾಸ ಮಂಜುಳ ।
ಭಾಷಾಚಂದ್ರಿಕವಾಸ ಚಿದದ್ವಯ ॥ ೧೧

.... ೭೦ ....

ದೇವದೇವ ಪಾಲಿಸಯ್ಯ ಪಾವನಾಕಾರ ।
ಪಾವನಾಕಾರ ಪಾವನಾಕಾರ ॥ಪ॥

ತಾರಹಾರಹೀರ ಘನಸಾರ ಸಶರೀರ ಸುಖ- ।
ಸಾರ ವೀರಭಕ್ತಪರಿಪೂರ ಮಾರಹರ ಧೀರ ॥ ೧

ಕಾಲಕಾಲ ವ್ಯಾಲಮಾಲಶೀಲ ಗಾನಲೋಲ ಮುನಿ- ।
ಜಾಲಪಾಲ ಮಾಯಕೋಲಾಹಲ ಬಾಲಶಶಿಧರ ॥ ೨

ಶೇಷಭೂಷ ದೋಷನಾಶ ಶ್ರೀಶಧೀಶತೋಷ ಮುಕ್ತಿ- ।
ಕೋಶ ಪರಮೇಶ ವ್ಯೋಮಕೇಶ ಘನಮತೇಶ ಈಶ ॥ ೩

.... ೭೧ ....

ಶ್ರೀವರವರ ಭಾವಜಹರ ಗೋವರಗಮನ ॥ಪ॥

ಹರಿಸಖ ವಿಧು ಹರಿಸುನೇತ್ರ ಹರಿವರಸುತ ಶರದಾಯಕ ।
ಹರಿವರಮಾಲಾಭ್ರಕೇಶ ಹರಿರಥಪ್ರೀತಾದ್ವಯಶಿವ ॥ ೧

ಕಮಲಭವಕಪಾಲ ಹಸ್ತ ಕಮಲಕಮಲ ವೈರಿಭೂಷ ।
ಕಮಲಮಿತ್ರಪುತ್ರಸಮುದ ಕಮಲಗಂಧಗಜಪರಶಿವ ॥ ೨

ಸತತ ನತಯತಿತತಿಸೋಮ ಕ್ಷಿತಿರಥ ಮೃತಿಗತತ್ರಿಪುರ ವಿ ।
ಜಿತಘನಮತಪತೆ ಸಿತತನುಹಿತ ಮತಿಯುತಶಿಸಿಗಳಶಿವ ॥ ೩

.... ೭೨ ....

ಕಾಯೊ ನೀ ಕಾಲ-ಕಾಲ ।
ಶ್ರೀಯಧೀಶ್ವರ ನಮಿತದಯಾಲವಾಲ ॥ಪ॥

ಅಸಮನಯನ ಮೃಗಕರಗಣವಿಸರ ಹೃದಯಸದನ ಖೇಲ- ।
ಕುಶಲನೆನಿಸಿಯಸಮಸುಖವನೊಸೆದು ಕೊಡುತೆ ವ್ಯಾಲಮಾಲ ೧

ದರ್ಪಕಹರ ನಿಮ್ಮಪದವನಪ್ಪಿಯಗಲದವರ ಮೇಳ ।
ತಪ್ಪದಿತ್ತು ಬೇಗನೆಯೆನ್ನಪ್ಪ ಮಾಯಾಕೋಲಾಹಲ ॥ ೨
ಸನಕಸನಾದ್ಯಸುಮುನಿವಿನುತ ಸತತ ಗೌರಿಲೋಲ ।
ಜನನಮರಣ ಭಯವ ಬಿಡಿಸಿ ಘನಮಠೇಶನೇ ಸುಶೀಲ ೩

.... ೭೩ ....

ಸೋಮಶೇಖರ ಮಾಮವಾಭವ ಭೋ ।
ಕಾಮಿತಫಲದ ಸುತ್ರಾಮವಿನುತ ಭೋ ॥ಪ॥
ಅಂಬರಕೇಶ ದಿಗಂಬರ ವರದ ದ- ।
ಯಾಂಬುಧೆ ದುರಿತಕದಂಬಪುನೀತ ಭೋ ॥ ೧
ಪಾಂಡುರ ಶರೀರ ಮಾರ್ತಂಡಜಾಹಿತ ಚಿದ- ।
ಖಂಡ ಸುತೇಜ ಪ್ರಚಂಡ ಮಹಿಮ ಭೋ ॥ ೨
ಜನನಮರಣ ನಿವಾರಣ ಗಣಸೇವಿತ ।
ಘನಮಠವಾಸ ನಿರ್ಗುಣ ಪರಶಿವ ಭೋ ॥ ೩

.... ೭೪ ....

ಕಾಲಹರ ಭೋ ಕಾಳಿಕಾವರ ಪರಶಿವ ।
ಫಾಲಲೋಚನ ಪರಮಾತ್ಮ ದಯಾಲ ॥ಪ॥
ಕೇಶವಸಖ ಭುವನೇಶ ನಿರ್ಭಯ ಭವ- ।
ನಾಶಾಕಾಶಕೇಶ ಈಶ ವಾಸವನತ ಶಶಿಭೂಷಣ ॥ ೧
ಸಾಮಜಾಸುರಹತ ಭೂಮಿರಥಾಂಗಾಘ- ।
ಭೀಮ ಕ್ಷೇಮ ಸೋಮ ರಾಮ ಶಾಮಗಳ ಭವನೆ ॥ ೨
ಮಂಗಳಮಯ ಧವಳಾಂಗ ಸುಮುನಿ ಮನೋ- ।
ತ್ಸಂಗಾನಂಗ ಭಂಗ ಲಿಂಗ ತುಂಗ ಘನಮಠೇಶನೆ ॥ ೩

.... ೭೫ ....

ಹರ ಶಂಭೋ ಶಂಕರ ಸಾಂಬ ಮಾಂ ಪಾಹಿ ।
ಮರಣವಿಜಿತ ಶಿವಶರಣ ಸುಮೋಹಿ ।
ಶರಣಾಗತಜನ ವರಸುರಭೂಜ ||ಪ||

ನಂದನಂದನ ಮದ ಸಿಂಧುರ ಮೃಗಪತೆ ।
ಬೃಂದಾರಕ ಗಣವಂದ್ಯ ಪದಾಂಬುಜ ॥ ೧

ವರದ ದಯಾರಸಶರಧೆ ಪುರಾತನ- ।
ಹರಿಣಾಂಕಾನಲ ತರಣಿ ಸುನೇತ್ರ ॥ ೨

ಮನುಮುನಿಜನ ಮನೋವನಜಮರಾಳ ಪಾ- ।
ವನ ನಾಮದ್ವಯ ಘನಮತೇಶ ಶಿವ ॥ ೩

.... ೭೬ ....

ಬಿಡದಿರ್ಕೈ ಎನ್ನ ಲಿಂಗೇಶ ನೀಂ ಬಿಡದಿರ್ಕೈಯೆನ್ನ ।
ಬಿಡದಿರ್ಕೈ ಎನ್ನ ನೀನುಡುರಾಜಧರ ಭವ- ।
ದಡವಿಯೋಳ್ ಸಿಲ್ಕಿಬಾಯ್‌ಬಿಡುವೆನೆನ್ನಯ ಕೈಯ ||ಪ||

ಗೌರಶರೀರ ಸದ್ಭಕ್ತ ಹೃತ್ಸಾರಸಾಗರ ।
ವಾರಣದೈತ್ಯಸಂಹಾರ ಪರಶಿವ ಕೃಪಾ- ।
ವಾರಿಧೆ ಸುಜನಮಂದಾರ ಗೋಪತಿವಾಹ ॥
ಮೇರುಚಾಪ ಕುಮಾರಪಿತ ಘನದೂರ ಭುವನೋ- ।
ದ್ಧಾರ ಗತಸಂಸಾರ ನುತಗಂ- ।
ಭೀರ ಚಿನ್ಮಯಸಾರ ಸುಖಸಂಪೂರ ಶಂಕರ ॥ ೧

ಕುಧರಾತಪತ್ರನೇತ್ರಾಂಕಿತಪದ ಶ್ರೀದಮಿತ್ರ ।
ಮದನಮರ್ದನ ಮೋಕ್ಷಪದ ಕಾತ್ಯಾಯನೀ ಸಮ್ಯಕ್ ।
ವದನಾರವಿಂದ ಷಟ್ಪದ ದೇವಗಣ ವಂದ್ಯ ॥

ವಿಧಿಕಪಾಲಕರಾಬ್ಜಶೋಭಿತ ।
ವಿಧುಪ್ರಭಾಕರಜ್ವಲನನೇತ್ರ ವ- ।
ರವಪರಾಪರ ಭುವನಪೋಷಿತ ಬುಧಲಲಾಮ ಸುಪೂಜ್ಯ ಶಂಕರ ೨

ಘನಮತವಾಸ ಸನ್ಮುನಿಗಣೋನ್ಮಣಿ ಸುಪ್ರಕಾಶ ।
ಕನಕಭೂಧರ ಕಾರ್ಮುಕಾನಘ ಸರ್ವೇಶ ಪಾ- ।
ವನಗಾತ್ರ ನಿತ್ಯನಿರ್ಗುಣ ಸಾಧುವನ ಜೈತ್ರ ॥
ಜನನಮರಣಗಹನಹುತಾಶನ- ।
ಫಣಿಕುಲೇಶ ವಿಭೂಷ ವೃಷವಾಹನ ಗಿರೀಶ ।
ದಯಾರ್ಣವಾಧ್ವಯುವಿನುತನಾಮ ಗಣೇಶ ಶಂಕರ ॥ ೩

.... ೭೭ ....

ಶಂಕರನೇ ಸಲಹೊ ನೀ ಬೇಗನೆ ।
ಪಂಕಜಾಹಿತಭೂಷ ಭವನಾಶಾಭವ ॥ಪ॥

ನಂದಿವಾಹನಾಮರಸಿಂಧುಪ್ರಜಟಾಧರ ।
ಸ್ಕಂದಜನಕ ಮೌನಿನುತ ಮೌನಿಸುತ ಮೌನಿನುತ ॥ ೧

ಸುರನಗಶರಾಸನ ಹರಿತನಯವಿಜಿತ ।
ನರನತವರಚರಣಾಂಬುಜ ಚರಣಾಂಬುಜ ॥ ೨

ಧನದಸುಸಖಾನತಜನಸುರಭೂಜ ।
ಘನಮತವಾಸಾಗಜಾವರ ಅಗಜಾವರ ಅಗಜಾವರ ॥ ೩

.... ೭೮ ....

ನೋಡಬಾರದೇನೊ ಶಿವನೇ ನೋಡಬಾರದೇನೋ ।
ನೋಡಬಾರದೀ ರೂಢಿಯೊಳಗೆ ನಾಂ ಬೇಡಿಕೊಳುವೆನ್ನೈ
ಕಾಡದೆ ಕರುಣದಿ ॥ಪ॥

ಶರಣಶರಿರ ಮಮಶರಿರವೆಂಬ ಶ್ರುತಿ ।
ಯಿರುವದಿದನು ಮನುಕರಿಸಿ ಮುದದಿನೀ ॥ ೧

ಘುರಿತಭಯದಿ ಹರ ಹರ ಹರಯೆಂದುರೆ ।
ಮೊರೆಯಿಡುತಿರೆ ಸಾದರದಿ ಪರಮನೀ ॥ ೨

ಜನನಿಯೊಳಣುಗನು ಬಿನದಿಸುವದ ದಯ- ।
ದಿ ನಿರೀಕ್ಷಿಸುವ್ರೋಲ್ ಘನಮಠೇಶ ನೀ ॥ ೩

.... ೭೯ ....

ಭೂತೇಶಾವ ಮಮ ದೇವದೇವ ।
ಶೀತಾಚಲಸುತಾನಾಥ ಪರಮ ಭೋ ॥ಪ॥

ರಾಜೀವಾಕ್ಷಶರಾಸುರಗಣರಾಜಿಹೃದಯ ಸುಪುರಾ ।
ಸೋಮವಿರಾಜಿತಮಸ್ತಕ ರಾಜಭುವನ ಭೋ ೧

ಶ್ರುತಿತತಿಸುತಪಾತ್ರ ವರಧನಪತಿಸಖ ಶುಭಗಾತ್ರ ।
ದುರ್ಭವಜಿತ ಕರುಣಾಕರ ಶತಮುಖನತ ಭೋ ೨

ನಿಟಿಲನಯನ ಧೀರ ಶ್ರೀ ಘನಮಠನಿವಾಸೋದಾರ ।
ಶಮನೋತ್ಕಟಮದವಾರಿತ ಕುಟಿಲಚರಿತ ಭೋ ೩

.... ೮೦ ....

ಪಾಲಯ ರೇ ಪಾರ್ವತೀಶ್ವರ ।
ಪೂರ್ವಾಮರ ಘನಗರ್ವಾಪಹರ ಭೋ ॥ಪ॥

ಅಂಧಕವೈರಿ ವಸುಂಧರ ರಥ ಸಾ- ।
ನಂದಾದ್ಯಖಿಲ ಮುನೀಂದ್ರ ಸೇವಿತ ಭೋ ೧

ಗಂಗಾಧರ ಧವಳಾಂಗ ಶರಣಹೃ- ।
ತ್ಸಂಗ ಕೃಪಾಕರಾನಂಗದಹನ ಭೋ ೨

ಕ್ಲೇಶರಹಿತ ಭವನಾಶ ಶ್ರೀ ಘನಮಠ- ।
ವಾಸ ಸದಮಲ ಗಣೇಶ ಮಾನಿತ ಭೋ ೩

.... ೮೧ ....

ಸೋಮಶೇಖರ ಶುಭನಾಮ ಮಹೇಶ ।
ಸ್ವಾಮಿ ತ್ರೈಭುವನರಕ್ಷ ಮುಕ್ತಿಕೋಶ ॥ಪ॥

ಶರ್ವಾಣೀಶ್ವರ ನಿತ್ಯ ಗೀರ್ವಾಣವಿನುತ ।
ನಿರ್ವಾಣಾಶ್ರಿತ ಭಕ್ತಸಾರ್ವಭೌಮಮಿತ ೧

ಮಾರಮರ್ದನ ಮೋಕ್ಷಾಧಾರ ಪ್ರಮೇಯ ।
ಭೂರಿಪ್ರತಾಪ ಸುಪುಣ್ಯಸಹಾಯ ೨

ವರದ ಶ್ರೀಘನಮಠವಾಸ ಸರ್ವೇಶ ।
ಪರಮದಯಾಲ ಮಾಂ ಪಾಹಿ ಗಣೇಶ ೩

.... ೮೨ ....

ಪಾಹಿ ದೇವ ಪಾರ್ವತೀಶ ಶ್ರೀವೃಷವಾಹ ಗಗನಕೇಶ ॥ಪ॥

ಘೋರ ಕಿಲ್ಬಿಷಹರ ಸಾರಸಾಕ್ಷಸುಶರ ।
ಮಾರಮರ್ದನ ಸುಖಸಾರ ೧

ಪರಮಪಾವನ ಸದಾಮರವರಾರ್ಚಿತಪದ ।
ಹರ ಪರಾತ್ಪರ ನುತವೇದ ೨

ಘನಮಠೇಶ್ವರ ದಯಾವನಧೆ ಸದ್ಗುಣಪ್ರಿಯ ।
ಅನಘ ಚಿನ್ಮಯ ಹತಮಾಯಾ ೩

.... ೮೩ ....

ಸೋಮಧರಸ್ವಾಮಿ ಪಾಲಯ ।
ಕಾಮದಹನ ಭವಭೀಮ ಸುರನತ ಶಿವ ॥ಪ॥

ಗಜಾಸುರಾಹತ ಗಜಾರಮಣವರ ।
ರಾಜರಾಜಸಖ ಯತಿರಾಜ್ಯಪೂಜ್ಯಪದ ಶಿವ ೧

ಪುರಾರಿ ರಾಜಿತಧರಾಧರೇಶ್ವರ ।
ಮಾರಸಿತಶರ ಸುಖಸಾರ ನಿರ್ವಿಕಾರ ಶಿವ ೨

ವೃಷೇಂದ್ರಹಯ ಭುವನೇಶ ।
ಶ್ರೀಘನಮತವಾಸ ಸುಪ್ರಕಾಶ ಶೇಷಭೂಷ ಗುಣಕೋಶ ಶಿವ ೩

ವೀರಭದ್ರದೇವರ ಜೋಗಳಪದ

.... ೮೪ ....

ಶ್ರೀ ವೀರಭದ್ರನ ಪಾವನ ಚರಿತೆಯ ।
ಭಾವದಿಂದಲಿ ನಾ ನುತಿಸುವೆ ಜೋ ಜೋ ॥
ಭಾವದಿಂದಲಿ ನಾ ನುತಿಸುವೆ ಸದ್ಭಕ್ತಿ ।
ಸಾವಧಾನಿಗಳಿದನಾಲಿಸಿ ಜಗದಿ ಜೋ ಜೋ ॥ಪ॥

ಶ್ರೀ ಮಹಾಕೈಲಾಸಪುರದೊಳು ಪರಮೇಶ- ।
ನಾಮಹಾದೇವಿ ಸಹಿತ ಮೋದದಿಂದ ಜೋ ಜೋ ॥
ಆ ಮಹಾದೇವಿ ಸಹಿತ ಮೋದದಿಂದಲಿ ।
ಸ್ವಾಮಿಯೋಲಗವ-ಕೊಟ್ಟಿರುವ ವೇಳೆಯೊಳು ಜೋ ಜೋ ೧

ಹರಿಬ್ರಹ್ಮಸುರಪ ದಿಗ್ವರರುದ್ರ ಮುನಿಕೋಟಿ- ।
ವೆರದು ಶಿವನ ಬಸಿರುವ ಸಮಯದಿ ಜೋ.... ॥
ವೆರದು ಶಿವನ ಬಸಿರೆ ನಂದಿಮಾಕಾಳ- ।
ರರಿದವರವರ ಗದ್ದರಿಸಿ ಬಡಿಯುತಿರೆ ಜೋ........ ೨

ಮುಕ್ಕಣ್ಣನ ವೇಳೆ ಲೆಕ್ಕಿಸದಾರನು ।
ಸೌಖ್ಯದಿಂ ಪ್ರಮಥರೊಳಕ್ಕರದಿರಲು ಜೋ.... ॥
ಸೌಖ್ಯದಿಂ ಪ್ರಮಥರೊಳಕ್ಕರದಿರಲಾಗ ।
ಸೊಕ್ಕಿನಿಂ ಬಂದ ದಕ್ಷನನೆಣಿಸದಿರೆ ಜೋ........ ೩

ಪರಮೇಶ್ವರಿಯ ಶಿವನುರುಕರುಣದಿ ಜನಿ- ।
ಸಿರುವ ಪರಿಯನರಿಯದೆ ದಕ್ಷನಾಗ ಜೋ.... ॥
ಸಿರುವ ಪರಿಯನರಿಯದೆ ಹರನೆನ್ನ ಕು- ।
ವರಿ ಗಂಡನಳಿಯ ಮನ್ನಿಸನೆಂದು ಖತಿಯಿಂ ಜೋ........ ४

ಮಾರಹರನ ಬಿಟ್ಟು ಸಾರಿ ಯಜ್ಞವ ಮಾಡಿ ।
ಭೂರಿ ದೇವತೆಗಳಿಗಾಹುತಿಗೊಡುವೆ ಜೋ.... ॥
ಭೂರಿ ದೇವತೆಗಳಿಗಾಹುತಿಗೊಡುವೆನೆಂ- ।
ದಾರಂಭಿಸಿದ ಯಜ್ಞ ಹರಿದೈವವೆನುತ ಜೋ........ ೫

ಕುಲ್ಲ ದೇವತೆಗಳನೆಲ್ಲರ ನೆರಪುತ ।
ಮುಲ್ಲೋಕದೆರೆಯನ ಮರೆದಿರೆ ದಕ್ಷ ಜೋ.... ॥
ಮುಲ್ಲೋಕದೆರೆಯನ ಮರೆಯೆ ದಾಕ್ಷಾಯಣಿ- ।
ಯಲ್ಲಿ ಪೋಗಿ ಬೋಧಿಸೆ ನಿಂದಿಸಲವ ಜೋ........ ೬

ಗಿರಿಜೆ ಶಪಿಸುತಾಗ ಹರನಿದಿರ್ಪೈದಿ ಸಾ- ।
ಸಿರದೆಣೆಮೊಗ ತೋಳಿನ ಸುತನ ಬೇಡೆ ಜೋ.... ॥
ಸಿರದೆಣೆಮೊಗ ತೋಳಿನ ಸುತನ ಬೇಡಲಾ ।
ಖರಕೋಟಿ ತೇಜೋಮಯನ ಸೃಜಿಸಿ ಕೊಡಲು ಜೋ.... ೭

ರತ್ನದ ತೊಟ್ಟಿಲ ಯತ್ನದಿಂ ಋಷಿಗಳ ।
ಪತ್ನಿಯರಿಂ ತರಿಸುತೆ ಗಿರಿಜಾತೆ ಜೋ.... ॥
ಪತ್ನಿಯರಿಂ ತರಿಸಿದ ತೊಟ್ಟಿಲೊಳು ಶಿಶು- ।
ರತ್ನವನಿರಿಸುತಿರಲು ಗಿರಿಜಾತೆ ಜೋ........ ೮

ಪಾತ್ರದಿಂದಲಿ ಶುಭಗಾತ್ರಿಯರೀಶ್ವರಿ ।
ಪುತ್ರಗೆ ವೀರನೆಂದಿತ್ತು ನಾಮವನು ಜೋ.... ॥
ಪುತ್ರಗೆ ವೀರನೆಂದಿತ್ತು ನಾಮವನು ವಿ- ।
ಚಿತ್ರಸ್ವರದಿ ಪಾಡಿದರು ಭಾವಕಿಯರು ಜೋ........ ೯

ಜೋ ಜೋ ಪರಾತ್ಪರ ಜೋ ಜೋ ಚಿದಾಕಾರ ।
ಜೋ ಜೋ ಬುಧಾಧಾರ ಜೋ ನಿರ್ವಿಕಾರ ಜೋ ಜೋ ॥
ಜೋ ಜೋ ಬುಧಾಧಾರ ಜೋ ನಿರ್ವಿಕಾರನೆ ।
ಜೋ ಜೋ ಸದಾಚಾರ ಜೋ ವೀರಧೀರ ಜೋ........ ೧೦

ಎಲ್ಲ ದೇವತೆಗಳ ಸೊಲ್ಲಡಗಿಸಲೆಂದು ।
ಉಲ್ಲಾಸದಿಂದೊಗೆದಲ್ಲಮರೂಪ ಜೋ.... ॥
ಉಲ್ಲಾಸದಿಂದೊಗೆದಲ್ಲಮರೂಪನೆ ।
ಫುಲ್ಲಶರಾಂತಕ ಚೆಲ್ವ ವೀರೇಶ ಜೋ........ ೧೧

ದಕ್ಷನ ಗರ್ವವ ಶಿಕ್ಷಿಸಿ ಬಂದ ಸಂ- ।
ತ್ರ್ಯಕ್ಷ ಮುಮುಕ್ಷು ಸುರಕ್ಷ ಪರೋಕ್ಷ ಜೋ....
ತ್ರ್ಯಕ್ಷ ಮುಮುಕ್ಷು ಸುರಕ್ಷ ಪ್ರಮಥಗಣ- ।
ಪಕ್ಷ ವಳಕ್ಷ-ರದಕ್ಷಯ ಮೋಕ್ಷ ಜೋ........ ೧೨

ರುದ್ರ ಪರಮ ನಿರುಪದ್ರ ಸುಕರುಣಾಸ- ।
ಮುದ್ರ ಭೂನುತ ವೀರಭದ್ರಘಭಿದ್ರ ಜೋ.... ॥
ಮುದ್ರ ಭೂನುತ ವೀರಭದ್ರ ಶ್ರೀ ಘನಮತ ।
ಭದ್ರಮಂಟಪ ನಿವಾಸಾರ್ದ್ರಹೃನ್ಮುದ್ರಾ ಜೋ........ ೧೩

.... ೮೫ ....

ಶಿವ ಶಿವ ಶಿವ ಎನ್ನೆಲೆ ಮನುಜ ಭವ ।
ಭವಬಂಧನವಳಿವುದು ಸಹಜ ॥
ಕುವಲಯದೊಳ್ ಮರೆಯದಿರೊ ನಿಜ । ನಿನ ।
ಗವನತನಾಗುವನಿನಿತನುಜ ॥ ॥ಪ॥

ಆ ವಿಟಶ್ವೇತನು ಕಳತಂದಾ ಮೃದು ।
ಸೇವಂತಿಗೆಯಲರ್‌ಭುವಿಗೊಂದ ॥
ತೀವಿಬೀಳೆ ಶಿವನಿಗಿದೆಂದ । ಖಲ ।
ಕೈವಲ್ಯಕೆ ಪೋದದರಿಂದ ೧

ಕಡುಪಾಪಿಷ್ಠ ವಿದಳನಾಗ ।
ಮಡಿವೆಡೆಯೊಳು ಹರನೆನಲ್ಕಾಗ ॥
ಮೃಡನು ಮೆಚ್ಚಿ ತನ್ನ ಪುರ ಬೇಗ । ಭವ ।
ತಡೆಯದಿತ್ತಕಾರಣದೀಗ ॥ ೨

ಅಜಭಾವದಿ ಗೋವತ್ಸವ ವಧಿ- ।
ಸಿ ಜಗದೊಳರಿಯೆನ್ನೈ ನಾನಿದನು ॥
ಮಜಶಿವಯೆನಲಾ ಸತಿಯಳನು । ಶಿವ ।
ನಿಜಪುರಕೊಯಿದ ತಿಳಿದುಯಿದನು ॥ ೩

ತವೆಬಿಲ್ಲೇಶ್ವರ ಬೊಮ್ಮನು ತಾ ರೌ- ।
ರವ ನರಕದಿ ತಾ ಬಿದ್ದಿರುತೆ ॥
ಸವಿನಯದಿಂದಲಿ ಸಿವದಿಡುತ । ಕಲು ।
ಷವನೀಗಿದ ತಿಳಿದಿದ ತ್ವರಿತ ॥ ೪

ಜವನಭಟರು ಬಲು ಕಿನಿಸಿಂದ ಕಾ- ।
ಡುವ ವೇಳೆಯೊಳು ರಸನೆಯಿಂದ ॥
ಶಿವನ ನೆನವದಾಗದು ಮುಂದೆ । ಈಗ ।
ಘನಮತೇಶನ ದಯದಿಂದ ॥ ೫

.... ೮೩ ....

ಮೃಡನ ಪೂಜಿಸೋ ಬೇಗ ಮೃಡನ ಪೂಜಿಸೋ ।
ಸಡಗರವಲಿ ನೀ ಬೇಗ ಮೃಡನ ಪೂಜಿಸೋ ॥
ನಡೆನುಡಿಕೆಡೆಗೊಡವೆಡರೆಡೆನಡನಡಗದೆ ದೃಢದಿ ಮನುಜ ।
ಮೃಡನ ಪೂಜಿಸೋ ಬೇಗ ಮೃಡನ ಪೂಜಿಸೋ ॥ಪ॥

ಮುರಹರ ಸರಸಿಜರುಹರಮರರರಿಯರು ಮರುಳರ ।
ಪರಿಯಿರದುರಳ್ದರತೆರನರಿದರಿದರಿದರಿದರಿದು ಭರದಿ ೧

ಕುಲಛಲಮಲಗಳ ಕಳವಳದೊಳು ಸುಳಿಸುಳಿವಳಿಮನದಿಳೆ- ।
ಯೊಳು ಫಲಗಿಲಗಳಿಗೆಳಸುಲಿದುಲಿದುಲಿದುಲಿದುಲಿದಳಲದೆ ೨

ತನುಗುಣದನುದಿನ ಮನಸಿನಕೊನೆಮೊನೆಯೊಳು ಧನವನಿತೆಯ- ।
ರನು ನೆನೆಯದೆ ಘನಮತನಿವಸನ ನೆನೆನೆನೆನೆನೆನೆನೆದು ೩

.... ೮೪ ....

ಮೃತ್ಯುಂಜಯನಾಗೋ ಎಲೊ ಎಲೊ ಮೃತ್ಯುಂಜಯನಾಗೋ ।
ಮೃತ್ಯುಂಜಯನಾಗತ್ಯಕ್ತಿಲಿ ಗುರುಪುತ್ರನಾಗಿಸಲೆಸತ್ಯವಿಡಿದುನೀ ॥ಪ॥

ಚಲನಗುಣವನೀಗಿ ಮನವುಜ್ವಲ ಲಿಂಗದೊಳಾಗಿ ।
ಮಲತ್ರಿವಿಧದ ಸಂಗಳಿದು ಷಟ್‌ಸ್ಥಲ ಲಿಂಗಾಂಗದ ನೆಲೆ ತಿಳಿಯುತೆ
ನೀ ॥ ೧

ನಿನ್ನೊಳ್ ನೀ ತಿಳಿದು ಜೀವದ ಭಿನ್ನಬುದ್ಧಿಯಳಿದು ।
ಸನ್ನುತ ಗುರುಪದವನ್ನು ಬಿಡದಲತ್ಯುನ್ನತ ಭಕ್ತಿಪ್ರಸನ್ನನೆನಿಸಿ ನೀ ॥ ೨

ಕಷ್ಟಕರ್ಮವರಸಿ ಕರದೊಳಗಿಷ್ಟಲಿಂಗವಿರಿಸಿ ।
ಸೃಷ್ಟಿಯೊಳೊಂದಿರುವಷ್ಟದಳಾಬ್ಜವ ನೈಷ್ಠೆಯಿಂದರ್ಪಿಸಿ ಶ್ರೇಷ್ಠನಾಗಿ
ನೀ ॥ ೩

ಆಲಸ್ಯದಿ ಜರೆದು ಸುಮ್ಮನೆ ಕಾಲವನತಿಗಳೆದು ।
ಕಾಲಕಿಂಕರರಿಗಾಳಾಗದೆ ನಿಜಮೂಲಮಂತ್ರದೊಳು ಲೋಲನಾಗಿ
ನೀ ॥ ೪
ಆಶಪಾಶವರಿದು ರಾಗದ್ವೇಷವಾಸನಳಿದು ।
ಸಾಸಿರದಳ ಪದ್ಮಾಸನನಾಗಿಹ ದೇಶಿಕ ಘನಮಠವಾಸನೊಳೈದಿ ನೀ ॥ ೫

.... ೮೮ ....

ನಿಟಿಲಾಕ್ಷನ ಭಜಿಸೋ ಹೇ ಮನುಜ ನಿಟಿಲಾಕ್ಷನ
ಭಜಿಸೋ ।
ಕುಟಿಲ ಪ್ರಪಂಚದ ಚಟುವಳಿದನುದಿನ ॥ ॥ಪ॥

ಜರೆಯೋಳ್ ಪರರಿಗೆ ನೆರೆಹಂಗಾಗುತೆ ।
ಮರಣವಾಗದೆ ಸುಖದಿರುವಾಗಲೆ ನೀ ॥ ೧

ಈ ಶಿವಸಮಯ ಮಾನಿಸ ಜನ್ಮವಿ- ।
ನ್ನೇಸುಕಾಲಕೆ ಸಿಗದೀ ಸಮಯದೆ ನೀ ॥ ೨

ಜಡಮತಿಗಳ ನುಡಿಗಡಣಕೆ ನೀ ಕಿವಿ- ।
ಗೊಡದಾ ಘನಮಠದೊಡೆಯನ ಬಿಡದೆ ನೀ ॥ ೩

.... ೮೯ ....

ಕುಲವೇ ಶಿವಕುಲವೈ ಭಕ್ತನ ।
ಕುಲವೇ ಶಿವಕುಲವೈ ॥
ಕುಲವೇ ಶಿವಕುಲ ವಿಲಸದ್ ಗುರುಕರ- ।
ಸ್ಥಲದೊಳು ಜನಿಸಿದಮಲ ಹರಭಕ್ತನ ॥ ॥ಪ॥

ಕೆಸರೋಳ್ ಕಂಜವದು ಜನಿಸೆ ।
ಕೆಸರೆನಿಸದ ತೆರನು ॥
ಅಸಮ ಪುಣ್ಯದಿಂ ಪಶುಪತಿ ಭಕ್ತನೆ- ।
ನಿಸಿ ತಾನೆಲ್ಲುದಯಿಸಲಾತನ ಸತ್ ॥ ೧

ಮುತ್ತುದಯಿಸಿ ಜಲದೊಳ್ ಜಲವದು ।
ಮುತ್ತಾಗಿರವದರೋಲ್ ॥
ಮರ್ತ್ಯದೊಳಗೆ ತನುವೆತ್ತು ಪೂರ್ವವಳಿ- ।
ದುತ್ತಮ ಗುರು ಸತ್‌ಪುತ್ರನಾದವನ ॥ ೨

ಹಸರು ಪುಳನ ಭ್ರಮರ ಪಿಡಿದೊಯ್ ।
ವ್ದಸಿಯ ಗೂಡೊಳದರ ॥
ಹಸನಾಗಿಡೆ ಪರವಶದಿ ಭೃಂಗನಾ- ।
ಗೆ ಸದಾಪರಿಗುರುಶಿಶುವಾದಾತನ ॥ ೩

ಧರೆಯ ಮಲಿನ ಜಲವಾ ಧರೆಯೊಳ್ ।
ಶರಧಿಯೊಳೊಡವೆರೆವಾ ॥
ಪರಿಯಿಂದೀ ತನುಕರಣ ಪ್ರಾಣ ಗುರು ।
ವರಗರ್ಪಿಸಿ ತಾಂ ಗುರುವಾದಾತನ ॥ ೪

ಜನನೀಪಿತರ ಸಂಗದಿ ।
ತಾ ಜನಿಸಿದ ಶರೀರ ॥
ಮಾಜದೆ ಖಂಡಿಸಿ ಯಾ ಜಗದ್ಗುರು ನಿ- ।
ರ್‌ಬೀಜದೀಕ್ಷೆವಡೆದೀಜಿತಪಾಶನ ॥ ೫

ತಂದೆ-ತಾಯ್ಗಳವಗೆ ಹಿಮಗಿರಿ ।
ನಂದನೇಶರೆಮಗೆ ॥
ಬಂಧುವರ್ಗಮುವರ್ಗಿಂದು ಭಕ್ತಜನ- ।
ವೆಂದು ಹೊಗಳುವದರಿಂದ ಮಹಿಮನ ॥ ೬

ನಾದಾಂಶದಿ ಜನಿಸಿ ಮತ್ತಾ ।
ನಾದಾಂಶದಿ ನಟಿಸಿ ॥
ನಾದಾತ್ಮಕ ತಾನೆಂದು ತಿಳಿದು ಪರ- ।
ನಾದ ಲಿಂಗಗುರುಬೋಧದಿ ಪಡೆದನ ॥ ೭

ವೇಧೆ ಸುಮಂತ್ರಕ್ರಿಯಾ ದೀಕ್ಷೆಯ ।
ಮೋದದಿ ಪಡೆದನಯಾ ॥
ಈ ಧರೆಯೊಳು ತನ್ನಾದಿಮಧ್ಯ ತುದಿ ।
ಸಾದರದಿಂ ತಿಳಿದಾ ಶಿವಾತ್ಮಕನ ॥ ೮

ಮಲಸಂಭೂತರಿಗೆ ಜಗದೋಳ್ ।
ಕುಲದ ಹಂಗವರಿಗೆ ॥
ಸುಲಭ ಘನಮತಸ್ಥಲದೊಳು ನೆಲೆಸಿದ ।
ಲಲಿತ ಶ್ರೀ ಗುರುವಿನೊಳು ಬೆರೆದಾತನ ॥ ೯

.... ೯೦ ....

ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೊ । ಈ ಸುಳಿಮಕ್ಕಳಿ ।
ಗೆಲ್ಲಿ ಭಕ್ತಿಯದೆಲ್ಲಿ ಮುಕ್ತಿಯದೊ ॥
ಎಲ್ಲಿ ಭಕ್ತಿಯದೆಲ್ಲಿ ಮುಕ್ತಿಯೊ ಕಳ್ಳಹಾದರಗಿತ್ತಿಯಾಪರಿ ।
ಕುಲ್ಲತನದಲಿ ಚರಿಸಿ ಶಿವಪದವೆಲ್ಲಿಕಾಣದೆ ಸಾವುತಿಹರ್ಗೆ ॥ಪ॥

ಒಳ್ಳೆ ನಾಗರ ಹಾವು ಹಿಡಿತಂದು । ಗಾರುಡಿಗನಂಗಳ ।
ದಲ್ಲಿ ಭಲರೇ ಭಲರೆ ಭಲರೆಂದು । ಆಡಿಸುತಮಿದಕಿ- ।
ಷ್ಟಿಲ್ಲಿ ಹಾಲೆರಿರವ್ವಯಯೆಂದು । ಬೇಡಿದರೆ ನಮ್ಮ- ॥
ಲ್ಲಿಲ್ಲ ಇಲ್ಲಿಂದಾಚೆಗಾಗೆಂದು । ಪಳಿಯುತ್ತ ಭ್ರಷ್ಟರು ।
ಬೆಲ್ಲವಾಕಳ ಹಾಲು ನಾರಿಯರೆಲ್ಲ ಸಂಭ್ರಮದಲ್ಲಿ ಪಿಡಿಯುತ ।
ಕಲ್ಲನಾಗರಮೇಲೆ ವ್ಯರ್ಥದಿ ಚೆಲ್ಲುತಿಹ ಪಾಪಾತ್ಮರಿಗೆ ಮತ್ತೆಲ್ಲಿ ॥ ೧

ಉಣುವ ಜಂಗಮದೇವರೈತಂದು । ಹಸಿವೆನಲು ಮುಂದಿನ ।
ಮನೆಗೆ ಹೋಗಿಲ್ಲೇಕೆ ನಿಂತೆಂದು । ಪಳಿಯುತ್ತ ಸಕ್ಕರಿ ।
ಕಣಕ ಮುಂತಾದವನು ಬಲಿತಂದು । ತೀರ್ಥಾರ್ಥಿಯೊಳು ಧಾ- ।
ರುಣಿಯ ತಿರುಗುತ ಬಳಲಿ ತಾವಂದು । ಪರಿಭ್ರಮಿತರಾಗುತೆ ।
ಕುಣಿ ತೆವರ್ ಮಣ್ಣುಳ್ಳ ಗಿರಿಕಾನನಗುಹಂಗಳನರಸಿ ಕಷ್ಟದಿ ।
ಉಣದ ಕಲ್ಲಿಗೆ ಅಟ್ಟುನೀಡುವ ಬಣಗುಮಾನವಪಶುಗಳಿಗೆ ॥ ಮ ॥ ೨

ಇಂದು ಪೊಂದೊತ್ತೆಂದು ಕಲ್ಪಿಸುತೆ । ನೈರರ್ಥಪ್ರಾಣನ ।
ಕೊಂದು ಮಹಾತ್ಮದ್ರೋಹಪಾರ್ಜಿಸುತೆ ಆ ವೇಳೆಯೊಳು ಹಿರಿ ।
ಹಂದಿಯಾಪರಿ ಮಲವ ಭುಂಜಿಸುತೆ ಎಮ್ಮೊಳಗೆ ಹಸು ಹೋ- ॥
ಯ್ತೆಂದು ಮರ್ವೋಹದಲಿ ಹರ್ಷಿಸುತೆ ಅಕಟೀಭವಿಗಳು ।
ಕಂದುಗೊರಳನ ಭಕ್ತಿಜ್ಞಾನಾನಂದರಸ ಸ್ಥಿರವಾಗಿಯುಂ ಮುದ- ।
ದಿಂದೆ ಕಾಣದೆ ಸಂಶಯದಿ ಬಹುದಂಡುಗಕ್ಕೊಳಗಾದ ಹೊಲೆಯರಿ
ಗೆಲ್ಲಿ ॥ ೩

ಮತ್ತೆ ನಾಗರಪಂಚಮಿಯಲ್ಲಿ । ಜನರೆಲ್ಲ ಹಾಳ ।
ಹುತ್ತು ಹುಡುಕುತ ಪೋಗಿ ತಾವಲ್ಲಿ । ನಾಗಪ್ಪಯೆಂದೊದ- ।
ರುತ್ತ ಗಲ್ಲವಬಡಿದುಕೊಂಡಲ್ಲಿ । ಇಷ್ಟಾರ್ಥಗಳ ಬೇ- ॥
ಡುತ್ತಲರಿಷಿಣ ದಾರ ಕೈಯಲ್ಲಿ । ಕಟ್ಟಿರುವವರುಗಳ ।
ಚಿತ್ತವೃತ್ತಿಯ ಪರೀಕ್ಷೆಗಾ ಹೆಡೆಯೆತ್ತಿಯಾಡಲ್ಕೆನ್ನನಾನಿ- ।
ನ್ನೆತ್ತವೋಡಲಿಯೆಂದು ಕಲ್ಮರನೆತ್ತಿ ಹಾಕೆಂದೆಂಬ ಹೊಲೆಯರಿ
ಗೆಲ್ಲಿ ॥ ೪

ಉಪಮವರಿದುಪವಾಸಿಯಾಗದೆ । ಅತಿಯಾಸೆ ಬಡುತಿಹ ।
ಚಪಲಗುಣವನು ಕೆಟ್ಟುಪೋಗದೆ । ಕ್ಷುತ್‌ತೃಷೆಯು ನಿದ್ರೆಯೆ- ।
ನಿಪ ನಿರೋಧವನೆಲ್ಲ ನೀಗದೆ । ಕರ್ಮಂಗಳೆಲ್ಲವ- ॥
ನಪಹರಿಸಿ ನಿಶ್ಚಿಂತರಾಗದೆ । ಈ ಪಾಪಿಗಳ್ಳರು ।
ಅಪರಿಮಿತ ಶ್ರೀ ಘನಮಠೇಶನನುಪಮವರಿಯದೆ ಕಂಡಕಂಡದ ।
ಉಪವಸಂಗಳಮಾಡುತಿಹಯೊತಪನಜಾತನಕುರಿಯಮರಿಗಳಿಗೆಲ್ಲಿ ॥ ೫

.... ೯೧ —

ನುಡಿಯದಿರಣ್ಣಾ ಜಡಮನುಜರೋಳ್ ।
ನುಡಿಯದಿರಣ್ಣಾ ನುಡಿಯದಿರಣ್ಣಾ ಯೊ ॥
ಪೊಡವಿಯೊಳನುದಿನ ಧೃಢಭಕ್ತರಲ್ಲದರೊಡನೆ ।
ಸಾವಿರಕೊಮ್ಮೆ ನೀ ನುಡಿಯದಿರಣ್ಣಾ ॥ ॥ಪ॥

ಹಿತವೆಂದು ತಿಳುಹಲಹಿತವಾಗಿ ಗ್ರಹಿಸುವ ।
ಮತಿಹೀನರೊಡನೆ ಕ್ಷಿತಿಲಕ್ಷಕೊಮ್ಮೆ ನೀ ॥ ೧

ನಿಜ ನಡೆನುಡಿಗಳ ತ್ಯಜಿಸುತೀ ಭುವಿಯೊಳು ।
ಕುಜನರೆನಿಪರೊಳೆ ನಿಜಕೋಟಿಗೊಮ್ಮೆ ನೀ ॥ ೨

ಘನಮತವಾಸನ ಗಣವರರಲ್ಲದ ।
ಮನುಜಾಧಮರೊಳೊಸೆದನುಭವದೆಂದೆಂದು ನೀ ॥ ೩

.... ೯೨ ....

ನರರಿಗೆಂತಹುದಯ್ಯಾ ಹರಭಕ್ತಿ । ಬಸವಾಂಶಗಲ್ಲದೆ ।
ನರರಿಗೆಂತಹುದಯ್ಯಾ ಹರಭಕ್ತಿ ॥
ನರರಿಗೆಂತಹುದಯ್ಯ ಹರಭಕುತಿರದೆ ಗುಡಿಹೊಗುತೀಶ್ವರೇಶನ ।
ಮರೆದು ಕೆರಹಿನ ಚಿಂತಿಲಿಹನೋಲ್ ತರುಣಿಧನವನು ಕರಿಸಿರುವದುರ್
॥ಪ॥

ಕರವಿಡಿದ ಸತ್‌ಸತಿಯುಳಂ ಪಿಡಿದು । ಕಣ್‌ಮುಂದೆ ಸಲೆ ಜರ ।
ವರರು ನೆರೆಯುತಲಿರಲಿ ಬಲವರಿದು । ಗರ್ಭದೊಳು ಜನಿಸಿದ ।
ವರಕುಮಾರನನಾಯುಧದಿ ಕಡಿದು ದಿಗ್‌ಬಲಿಯ ಮಾಡು ॥
ತ್ತಿರದೆ ಬಿರಿನುಡಿಯಿಂದೆ ಜರೆದೊದೆದು । ಮತ್ತಂತುಮಲ್ಲದೆ ।
ಸೆರಗುಗೊಂಡೆಳದಾಡಿ ಶೂಲದಲಿರಿಯಲದ ತರಹರಿಸುತಂ ಶಾಂ- ।
ತರಸಭರಿತನುಮಾಗಿ ಶರಣೆನುತಿರುವದದು ಬಸವಾಂಶಗಲ್ಲದೆ ॥ ೧

ಶೂಲಿಲಾಂಛನರ್ವೈದೆ ಜಗದೊಳಗೆ । ಪರಿಪರಿಯೊಳುಂದುಶ್ ।
ಶೀಲದಲಿ ನಡೆತರಲ್‌ಕವರಡಿಗೆ । ಎರಗುತ್ತೆ ಭಯದಿಂ ।
ಮೇಲುಮಾರ್ಗವಿದೆನ್ನುತಡಿಗಡಿಗೆ ತಚ್ಚರಣರಾಜರ ॥
ಣಾಳಿಮನದೋಳ್ ಬಿಡದೆ ನೆನದು ಮಿಗೆ । ಹರ್ಷಿತನುಮಾಗುತೆ ।
ಫಾಲದೋಳ್ ಶ್ರೀಭೂತಿಯಕ್ಷಸುಮಾ । ಲೆ ಕೊರಳೋಳ್ ಧರಿಸಿದರನೆ ।
ಕಾಲಹರನೆಂದೆಂಬ ಭಾವದಿ ಪಾಲಿಪುದು ಬಸವಾಂಶಗಲ್ಲದೆ ॥ ೨

ಅಂಗದಲಿ ಶಿವಲಿಂಗವುಳ್ಳವರ । ಕಾಣುತ್ತ ಕೂಡಲ ।
ಸಂಗನೆಂದೆಜಿಸುತ್ತಲವರವರ । ಪರಮ ಪ್ರಸಾದವ ।
ಸಿಂಗದೆ ಭೋಗಿಸುತೆ ಸೌಖ್ಯಕರ । ನಾಗುತ್ತೆ ಸಂಕ- ॥
ಲ್ಪಂಗಳಂ ಪರಿಹರಿಸಿ ಚರವರರ । ವಚನಾನುಸಾರದಿ ।
ಸಾಂಗವಾಗಿಯೆ ನಡೆಯುತಂಗಗುಣಂಗಳೆಲ್ಲವ ದಹಿಸಿ ವೀರ ಪ್ರ- ।
ತಂಗಳಂ ಪಿಡಿದಾಚರಿಪ ಭಕ್ತ್ಯಂಗವದು ಬಸವಾಂಶಗಲ್ಲದೆ ॥ ೩

ಬೇಡಿದರ್ಥವನಿಲ್ಲೆನದೆ ಕೊಟ್ಟು । ಮನದೊಳಗೆ ಇದನಾ ।
ಮಾಡಿದೇನೆಂಬುದನು ನೆರೆಬಿಟ್ಟು । ನಿರಹಂಕೃತಿಯೊಳೋ- ।
ಲಾಡಿ ತೂಳದ ವ್ಯಾಳದವನಟ್ಟು । ಇಹಪರ ಭ್ರಾಂತೀ- ॥
ಡಾಡಿ ಕರ್ಮಂಗಳನು ಸಲೆ ಸುಟ್ಟು । ಸದ್ಭಾವಿಯಾಗುತೆ ।
ನಾಡೆ ತ್ರಿಕರಣ ತ್ರಿವಿಧ ಲಿಂಗಕೆ ನೋಡಿಯರ್ಪಿಸಿ ತತ್ಪ್ರಸಾದವ ।
ಪ್ರೌಢಿಯಿಂ ಪಿಡಿಯುತ್ತ ನಿಜದೊಳ್ಕೂಡಿಹುದು ಬಸವಾಂಶಗಲ್ಲದೆ ॥ ೪

ಪಂಚವಿಂಶತಿ ತತ್ವಗಳನಳಿದು । ಪರಮಾರ್ಥದಿಂ ಶಿವ ।
ಪಂಚಮುಖ ಪಂಚಾಕ್ಷರದಿ ತಿಳಿದು । ಚಾತುರ್ಯದಿಂದಾ ।
ಪಂಚಲಿಂಗಾಂಗಗಳ ಕಳೆಯರಿದು । ತನುಮನದೊಳಿಹ ಪ್ರ- ॥
ಪಂಚವಾಸನೆಗುಣಗಳಂ ಜರಿದು । ನಿಶ್ಶಂಕನಾಗುತೆ ।
ಪಂಚಸಾದಾಖ್ಯವನು ಇಂದ್ರಿಯ ಪಂಚಕವ ಪರತರದ ಸಂಜ್ಞಾ ।
ಪಂಚಕವ ಶ್ರೀ ಘನಮತೇಶನೊಳ್ ಹಂಚಿಹುದು ಬಸವಾಂಶಗಲ್ಲದೆ ॥ ೫

.... ೬೩ ....

ಯೋಗಿಗೆ ದೂಷಕಭೂಷಕರತಿ ಹಿತರಾಗಿಹರೀ ಜಗದೊಳು ನೋಡಾ।
ರಾಗದ್ವೇಷವದೇತಕೆ ಸಲೆ ತನಗಾಗಿ ಶ್ರೇಯವೀವರು ಗಡಾ ॥ಪ॥

ಸಲೆ ಚಾಮರ ಬೀಸುತ ಭೂಷಿಸಿ ಜಗದೊಳು ಸುಖವೀವತೆರದಿ ಮತ್ತೆ।
ಮಲಮೂತ್ರವ ಕಸಬೊಳಿದು ಬೋರ್ಗಿನಿರ್ಮಲಮೆನಿಸುತೆ
ಹಿತಮಾಗಿಹವೋಲ್ ॥ ೧

ಆಕರಿತಾನೀಲೋಕದಿ ಮೆರೆಯುತನೇಕರೀತಿಯಲಿ ಸುಖವೀವ್ರೋಲ್ ।
ಸೂಕರದುರ್ಮಲವದನೀಕರಿಸುತೆ ನಿರ್ವ್ಯಾಕುಲದಿಂ ಸುಖವೀವಂತೆ ॥ ೨

ಸುಲಭನಾಳವದು ಹಲವು ಪರಿಯ ಸುಖವೆಳಸೀವುತಲಿಹ ಪರಿಯಂತೆ ।
ಮಲವನು ಬಿಡಿಸುತಧೋನಾಳವು ಸುಖಕುಲವೀವುತಹಿತ ವಾಗಿಹವ್ರೋಲ್ ॥ ೩

ಕೂಪರು ದೇಹಕೆ ತಾವು ಜಗದೊಳು ಬಹೊಪಚಾರದಿಂ ಸುಖವೀವ್ರೋಲ್ ।
ನಾಪಿತ ಪುಣ್ಗಡ್ಡೆಯ ಪಾಳಿಸಿ ಸುಖವೇಪರಿಯದಿ ಹಿತನೋ ಮತ್ತೆ ॥ ೪

ಜನನಿಕರದಿ ದೇಹದ ಮಲಿನವ ತೊಳೆದನುಪಮ ಸುಖದಿ ಸಲಹುವಂತೆ ।
ಮನುಜರು ನಾಲಿಗೆಯೊಳೆ ತೊಳೆಯುತೆ ಶ್ರೀ ಘನಮತೇಶಗೊಪ್ಪಿಸಿ
ಪ್ರೊರೆವರ್ ॥ ೫

.... ೯೪ ....

ಉಂಟೆ ಭಕುತಿಮುಕುತಿ ಈಜನರಿಗದುಂಟೇ ಭಕುತಿಮುಕುತಿ ।
ಉಂಟೇ ಭಕುತಿಯಿಂಥಾ ಶುಂಠಜನರಿಗೆ ಮನಭಂಟರಗೆದ್ದು
ಮುಕ್ತಿಯುಂಟುಮಾಡದವರಿಗುಂ ॥ಪ॥

ದಾಸೋಹವ ಮಾಡುವೆವೆಂದು ಜನರನೆಲ್ಲ ಮೋಸಮಾಡುತಂದು ।
ಮೋಸ ಮಾಡುತ ತಂದು ॥
ಲೇಸಾದ ದ್ರವ್ಯಗಳೊಳಾಸಿಟ್ಟು ಜಂಗಮಕ್ಕೆ ।
ತುಸುನೀಡದೆ ದೇಹಪೋಷಣೆಗುಳುಹಿಕೊಂಬರಿಗುಂ ॥ ೧

ಆದಿಜಂಗಮದೇವರು ಭಕುತಿವಿನೋದವರು ಪಲವರು |
ಗೋದಿಬೀಸುವ ಸಮಯದಿ ಬರಲು ಬಲು- ।
ಗಾದಿಯಾಡುತೆ ರಾಗಿಬೂದೆಂತ ಹಿಟ್ಟು ತರುವವರಿಗುಂ ॥ ೨

ದೇವರ ಹರಕೆಯೆಂದು ಬಹಳ ಬಹಳ ಧಾವತಿ ಬಡುವಂದು ।
ದೇವರದೇವ ಜಂಗಮವಾವೇಳೆ ಹಸಿದರೆ ।
ಭಾವದಿ ಭಿಕ್ಷಾಯನೆ ಗೋವಾಹೋಗಾಚೆಗೆಂಬರಿಗುಂ ॥ ೩

ಹೋಳಿಗಿ ಕರ್ಜಿಕಾಯ ಮಾಡಿದ ದಿನದೊಳು ಜಂಗಮರಾಯ ।
ಶೀಲದಿ ಬಂದು ಭಿಕ್ಷಾ ಕೇಳಲು ಹಳಸಿದಂಥ ।
ಕೂಳಿಷ್ಟು ತಂದು ಹಿಡಿಜೋಳಿಗಿ ಬೇಗನೆಂಬರಿಗುಂ ॥ ೪

ನೆರೆ ಘನಮಹೇಶನಿಂದು ಜಂಗಮರೂಪವ ಧರಿಸಿ ಬಂದವನೆಂದು ।
ಅರಿಯದೆ ಕಸವರವಿರುವ ಸ್ಥಾನದಿ ಕೆಟ್ಟಕುರುಡ ।
ನೋಲಾಗಿಪೋದ ನರನತೆರನಾದವರಿಗುಂ ॥ ೫

.... ೯೫ ....

ಓದಿ ಓದಿಯೇನಾದಿ ಮರುಳೆ ಯದರಾದಿ ತಿಳಿಯಲಿಲ್ಲ ।
ಓದಿದಫಲ ಸದ್ಭಕ್ತಜನರಿಗಹುದೀ ಧರೆಯೊಳು ಖುಲ್ಲ ॥ಪ॥

ಹಲವು ಶಾಸ್ತ್ರ ತಂತ್ರಗಳೋದಿ ತ್ರೈಮಲವನು ಬಿಡಲಿಲ್ಲ ।
ಫಲವೇನೈ ಗಿಳಿಯೋದಿ ಮಲವ ತಿಂದೊಲದಾಯ್ತುಚದುಲ್ಲ ॥
ಮಲವಿರಹಿತ ಶರಣರ ನಡೆನುಡಿಗಳ ತಿಳಿದು ಚರಿಸಬಲ್ಲ ।
ಬಲವಂತನೆ ಪಂಡಿತನವಗೀ ಜಗದೊಳಗಾರ್ ಸರಿಯಲ್ಲ ॥ ೧

ವೇದಶಾಸ್ತ್ರ ಪೌರಾಣಾದಿಗಳವು ಹಾದರದೋದಲ್ಲ ।
ಶ್ರೀದಸಖನ ನಿಜವರಿಯದೆ ಕೂಗುತೆ ಗಾದಿಯಾದವಲ್ಲ ॥
ವೇದಶಾಸ್ತ್ರ ಪುರಾಣಗಳೋದಿದ ವೇದಾದಿಗಳೆಲ್ಲ ।
ಬೇಧವನರಿಯದೆ ಭಂಗಬಟ್ಟವರು ಪೋದವು ನಿಜವಲ್ಲ ॥ ೨

ಕುಂದದಾಸೆಯಿಂದೋದಿ ಜನರನೊಲಿಸಿಂದು ಬಾಳ್ವದೆಲ್ಲ ।
ಹಂದಿತಪವ ಮಾಡುತೆ ಪಾಳ್ಮನೆಯನ್ನೊಂದೆ ಪಡಿಪೊಲಲ್ಲ ॥
ಛಂದಸಾದಿ ಷಟ್ ಶಾಸ್ತ್ರಗಳವು ಶಿವನಂದವರಿಯಲಿಲ್ಲ ।
ಮಂದಮನುಜ ಯವನನುಕರಿಸುತೆ ಗರ್ವಾಂಧನಾದಿಯಲ್ಲ ॥ ೩

ಕಪ್ಪುಗೊರಳನುಸುರಿಪ್ಪಾಗಮತತಿಯೊಪ್ಪಿ ಪಠಿಸಲಿಲ್ಲ ।
ಅಲ್ಪಕಥೆಗಳನು ಪೇಳಿಯೊಡಲು ಹೊರುತಿಪ್ಪಿಹುದದನೆಲ್ಲ ॥

ತುಪ್ಪದಾಸೆಗಾಶುನಕನ ಶುದ್ಧವದಪ್ಪಿತಿಂಬೊಲಲ್ಲ ।
ತಿಪ್ಪಿಯ ಬಾಳಿವೆಯಪ್ಪವನಿನಗೆ ಗಣಪ್ರಸಾದವಿಲ್ಲ ॥ ೪

ಆಯತವರಿಯದ ಜನರು ಮೆಚ್ಚಿ ಬಹುಮಾಯದ ನುಡಿಹೊಲ್ಲ ।
ಬಾಯಿತೆರದು ಪೇಳಲ್ ದಾರಿದ್ರ್ಯಘಹೋಯಿತೆ ನಿನಗೆಲ್ಲ ॥
ಧೀಯುತರದನಲ್ಲಾಯೆಂದುಸುರಲುಪಾಯದಿ ತಿಳಿಲಿಲ್ಲ ।
ಛೀಯೆನಲದನೆ ಬಳಿಯನಿಕೊಳುವವನ್ಯಾಯವಾಯಿತಲ್ಲ ॥ ೫

ಆಜೆಯಮಾತದನೀಜೆಯೊಳೂಹಿಸಿ ಜಾಚಲದೇನಿಲ್ಲ ।
ಈಚಲದಿಂದ ನರಿಯು ವೈಕಾರದಿಯಾಚರಿಸುವೊಲಲ್ಲ ॥
ಯಾಚಕವೃತ್ತಿಗೆ ಭೂಜಕ್ರದಿ ಯತಿವಾಚಕನಾದೆಲ್ಲ ।
ನೀಚಮನುಜ ಜ್ಞಾನಾರ್ಥಕೋದಿ ಭವಮೋಚನಾಗಲಿಲ್ಲ ॥ ೬

ಶ್ರೀಯುತ ಶಾಸ್ತ್ರವನೊರೆದು ನೀನು ಮೋಕ್ಷಾಯತವರಿಲಿಲ್ಲ ।
ಕಾಯಮೋಹ ಮಮಕಾರ ವಾಸನವದೇ ಉಳಿದಿಹುದಲ್ಲ ॥
ನ್ಯಾಯಶಾಸ್ತ್ರ ನೀತಿಯ ಪೇಳುತಲನ್ಯಾಯದೋಳಿಹುದೆಲ್ಲ ।
ನೇಯಪಾಲ್ ಪರರಿಗೆ ಕೊಟ್ಟು ಮಹಿಷಿ ಪಶುವೊಲಾಯಿತಲ್ಲ ॥ ೭

ಶುಂಭಕವಿಗಳಾಶಯವರಿಯದೆ ನೀ ಹುಂಬತನದಿ ಸುಳ್ಳಾ ।
ಕೊಂಬಕಿತ್ತದಾಡಿನಪರಿಯೊದರುತೆ ಶುಂಭನಾದಿಯಲ್ಲ ॥
ನಂಬಿ ಪ್ರಮಥರಾಡಂಬರ ವಚನವ ಸಂಭ್ರಮದರಿಲಿಲ್ಲ ।
ತೊಂಬುಲಗಳ್ಳನೆನಿಸುತನ್ಯರ ನುಡಿಗಿಂಬುಗೊಟ್ಟೆಯಲ್ಲ ॥ ೮

ಸ್ವರ್ನವ ತೂಗಿದ ಕಟ್ಟಳೆಯದು ತಾಂ ಸ್ವರ್ಣವಾಗಲಿಲ್ಲ ।
ವರ್ಣಕ ವಸ್ತುಕ ಟೀಕೆಯ ಪೇಳಿ ನೀಂಪೂರ್ಣನಾಗಲಿಲ್ಲ ॥
ದುರ್ನರನೇ ಶರಣರ ವಾಕ್ಯವನಾಕರ್ಣಿಸಿ ತಿಳಿಲಿಲ್ಲ ।
ನಿರ್ಣಯವರಿಯದೆ ಒದರಿಯೊದರಿ ನರಕಾರ್ಣವಾಳಿದಲ್ಲ ॥ ೯

ಕುರಿಯಾಳ್ದನ ಕುರುಹರಿದು ಬೆಂಬಿಡದೆ ತಿರುಗತಿರ್ಪುದಲ್ಲ ।
ನರನಾಗುತ್ತಕ್ಷರಿಕನಾಗಿ ಕರ್ತರನು ತಿಳಿಯಲಿಲ್ಲ ॥

ಕುರಿಗಿಂದತ್ತಲು ನಿನ್ನ ಬಾಳು ಈ ಧರೆಯೊಳಗಿಹುದಲ್ಲ ।
ಗರುವದಿಂದ ಶರಣರನು ಜರೆದು ಬಹು ದುರಿತವಡದೆಯಲ್ಲ ॥ ೧೦

ನಿಶ್ಚಲವಸ್ತುವನರುಪುವ ಹಿರಿಯರ ನಚ್ಚಿ ಭಜಿಸಲಿಲ್ಲ ।
ಹುಚ್ಚುನಾಯಿ ಬೇಟೆಗೆ ಬಿಡಲೊಡೆಯನ ಕಚ್ಚುವ್ರೋಲಾಯ್ತಲ್ಲ ॥
ಅಚ್ಚಶರಣರನುವರಿಯದೆ ನೀಂಬಹು ತುಚ್ಛವಾಡಿದಲ್ಲ ।
ಮೊಚ್ಚಿಲಿ ಬಾಯೊಳಗುಚ್ಚಿಹೊಯಿಸುತೆ ಮನೆಚ್ಚರಿಸುವನಲ್ಲ ॥ ೧೧

ವೇದಾಂತದೊಳುದ್ಭವಿಸಿದ ಜ್ಞಾನವದಾದಿ ವಿದ್ಯೆಯಲ್ಲ ।
ಸಾಧಿಸಿ ಸುಜ್ಞಾನದಿ ಚರಿಸುವನವನೇ ಧೊರೆ ಜಗಕೆಲ್ಲ ॥
ಭೇದವಾದಿ ಚರನೋದಿ ಪೇಳ್ವ ಮಹದಾದಿ ತತ್ವವೆಲ್ಲ ।
ಮಾದಿಗರೊಳು ಶ್ರುತಿಸರಸದೋದಿದಂತಾದುದು ನಿಜವಲ್ಲ ॥ ೧೨

ಖಂಡಪರಶುವಿನ ಶರಣರನುಭವವನುಂಡು ದಣಿಯಲಿಲ್ಲ ।
ಕೆಂಡವ ತುಳಿದಿಹ ಮಂಗನಂತೆ ಗರಿಕೊಂಡು ಬಿದ್ದಿಯಲ್ಲ ॥
ಭಂಡ ನೀನುಸುರ್ದ ವೀರಶೈವದ ಪ್ರಚಂಡ ವಿದ್ಯೆಯಲ್ಲ ।
ಚಾಂಡಾಲರ ಭಾಂಡದೊಳಿಹ ತೀರ್ಥವ ಕಂಡೊಲಾಯಿತಲ್ಲ ॥ ೧೩

ಜಲಧಿ ಬಾಯ್ದೆರೆಯೆ ಹಲವು ರತ್ನಗಳು ಹೊಳೆದು ದೊರೆವವಲ್ಲ ।
ಕಲಕುನೀರು ತುಂಬಿಹ ಮಡುವದು ಬತ್ತಲು ಹೊಲಸುಗಳಲ್ಲ ॥
ಬಲವತ್ ಶರಣರು ಬಾಯ್‌ದೆರೆಯಲು ಮುಕ್ತಿಲಲನೊಲಿವಳಲ್ಲ ।
ಕಲಹನರರು ಬಾಯ್ದೆರೆಯೆ ನರಕದೋಕುಳಿಯಾಗಿಹುದಲ್ಲ ॥ ೧೪

ಸಾಧಿಸಿ ನಿತ್ಯಾನಿತ್ಯವಿವೇಕವ ಭೇದಿಸಿ ತಿಳಿಲಿಲ್ಲ ।
ಗಾದಿಮಾತುಗಳ ಕಲಿತು ನೀನು ಪಶುವಾದಿಯೆನಿಸಿದಲ್ಲ ॥
ಮೇದಿನಿಯೋಳ್ ಪರಮಾರ್ಥವರಿಯದನ ವೇದವಿದ್ಯೆಯೆಲ್ಲ ।
ಓದಿಕೆಟ್ಟ ಬರೆ ಕೂಚಭಟ್ಟನಂತಾದುದು ನಿಜವಲ್ಲ ॥ ೧೫

ಆನೆಯ ಕಂಡಾಶುನಕ ಬೊಗಳಲದಕೇನು ಕೊರತೆಯಲ್ಲ ।
ಹೀನಮಾನವರು ಜರಿಯಲದಕೆ ಸುಜ್ಞಾನಿಯಳುಕಲಿಲ್ಲ ॥

ಕಾಣದೊಂದು ಕಂಡೊಂದಾಡಲ್ಕನುಮಾನವಗೊಳಲಿಲ್ಲ ।
ಭಾನುವಿಂಗೆ ಮಣ್ತೂರಲು ಕಣ್ಣೊಳ್ ತಾನೆ ಬೀಳ್ವುದಲ್ಲ ॥ ೧೬

ಜಾತಿಹೀನರಿಗೆ ಜಾರಜನರಿಗೀ ನೀತಿ ಸೊಗಸದಲ್ಲ ।
ನೀತಿವಂತರಿಗೆ ನಿಜಮಹೇಶ್ವರರ್ಗೀತೆರ ಪಾಲ್ಪಳ್ಳಾ ॥
ಮಾತುಗಳ್ಳರಿಗೆ ಪಾತಕೇಷ್ಟರಿಗಿದೇ ತೊರೆಯದೆಸಲ್ಲ ।
ಪ್ರೀತಿಲಿ ಘನಮಠನಾಥಕೃಪೆವಡೆದಾತನಿದನು ಬಲ್ಲ ॥ ೧೭

.... ೯೬ ....

ಹೆಡ್ಡನಾರೊ ಜಗದೊಳು ಹೆಡ್ಡನಾರೊ ।
ಗುಡ್ಡದಳಿಯನ ಭಕ್ತನೆನಿಸಿ ವಡ್ಡಿಗಲ್ಲಿಗೆರುಗುವನೆ ಹೆಡ್ಡ ॥ಪ॥

ಗುರುವೆ ಪರಶಿವನೆಂಬೊ ವಾಕ್ಯವಿರುತಿರಲು ಮತ್ತೊಬ್ಬ ನರನಂ ।
ಕರೆದು ತಂದವನಿಂದ ಮುಕ್ತಿ ಭರದಿ ಪಡೆವೆನೆಂಬುವನೆ ಹೆಡ್ಡ ॥ ೧

ಅಷ್ಟವಿಧಾರ್ಚನೆಗೆ ಸಲ್ಲದ ಸೃಷ್ಟಿಯ ಪಾಷಾಣಕರದೊಳ- ।
ಗಿಟ್ಟು ಕುಣಿಕುಣಿದಾಡುತೆ ಭಕ್ತಿಶ್ರೇಷ್ಠನಾದೆನೆಂಬುವನೆ ಹೆಡ್ಡ ॥ ೨

ಕುಶಲಾಂಛನವನ್ನು ತಾಳಿ ಆಶೆರಹಿತನಾಗಿ ಮುಕ್ತಿ ।
ಲೇಸಿನಿಂ ಪಡೆಯ ಹಗರಣದಾಸನಂತೆಡೆಯಾಡುವನೆ ಹೆಡ್ಡ ॥ ೩

ನರಜನ್ಮವ ದೊರೆತಾಗ ಸದ್ಗುರು ಕರುಣವಡೆದಾಪರಮನೊಳು ತಾ ।
ಬೆರೆದು ಸುಖಿಸಲರಿಯದೆ ಮೈಮರೆದು ಭವಕ್ಕೈದುವನೆ ಹೆಡ್ಡ ॥ ೪

ಮಿಥ್ಯವಾದೀ ತನುಮನಧನ ಶಿವಂಗಿತ್ತು ನಿತ್ಯವಾದ ತ್ರಿವಿಧ ।
ಭಕ್ತಿಮುದದಿ ಪಿಡಿಯದೆ ತಾಂ ವ್ಯರ್ಥವಾಗಿ ಸಾಯುವನೆ ಹೆಡ್ಡ ॥ ೫

ಯೋಗ್ಯವಾದ ಬಸವಾದಿ ಪ್ರಮಥಾಗ್ರಗಣ್ಯರಮಳ ವಚನ ।
ಸಂಜ್ಞೆಯಿಂದರಿಯದೆ ಬರೆ ವೈರಾಗ್ಯದಿಂದೆಡೆಯಾಡುವನೆ ಹೆಡ್ಡ ॥ ೬

ಬಳಸಬಾರದಂತ ದ್ರವ್ಯ ನಿಲಯದೊಳಿರೆ ಬಿಟ್ಟು ।
ಜಲಗದೊಳೆವನಂತೆ ಪ್ರಾಣಲಿಂಗವುಳಿದು ಜಾನಿಸುವವನೆ ಹೆಡ್ಡ ॥ ೭

ಕ್ಷೀರಾಂಬುಧಿ ಸನ್ನಿಧಿಯೊಳಿರ್ದು ಹಾರಿಯನಾಂತಗಳಿವುಪ್ಪ- ।
ನೀರನೀಂಟುವನಂತೆ ಶಿವನ ಸಾರದನ್ಯರ ಹಾಡುವನೆ ಹೆಡ್ಡ ॥ ೮

ಮನೆಯೊಳ್ ಸಾಧನಗೈದು ಮತ್ತಾರಣರಂಗದಿ ಸುಮ್ಮನೆ ನಿಂತಿರ್ಪ ।
ಮನುಜನಂತೆ ಲಿಂಗವನೆಜಿಸುತ್ತನಘಜಂಗಮವಗಲುವನೆ ಹೆಡ್ಡ ॥ ೯

ಏಕೋದೇವ ರುದ್ರನೆಂದು ಲೋಕದೊಳು ಶ್ರುತಿಸಾರುತ್ತಿರಲು ।
ಕಾಕು ದೈವಗಳನ್ನು ಭಜಿಸಿ ಶೋಕವಾರ್ಧಿಯೊಳಾಳುವನೆ ಹೆಡ್ಡ ॥ ೧೦

ಆ ಶಿವಶರಣರಿದ್ದುದೇ ಕೈಲಾಸ ವೆಂದರಿಯದೆ ಫಲಪದ ।
ದಾಸೆಯಿಂ ಗಿರಿಮುಖ್ಯ ಕ್ಷೇತ್ರವಾಸಂಗಳಿಗೆಡೆ ಯಾಡುವನೆ ಹೆಡ್ಡ ॥ ೧೧

ಬಾಳೆಗಿಡವ ಕಡಿದು ಕಳ್ಳಿಗೆ ಬೇಲಿಯಿಕ್ಕುವನಂತೆ ಪ್ರಮಥರ ।
ಮೇಲೆ ಭಕ್ತಿಯುಕ್ತಿ ಕರ್ಮಜಾಲಕಿಕ್ಕೆಡೆಯಾಡುವನೆ ಹೆಡ್ಡ ॥ ೧೨

ಹತ್ತುಮಾನಿಸರೊಳು ತನ್ನುಳಿದೆಣಿಸುತ್ತೊಂಬತ್ತೆಂದಳುವನೋಲ್ಪ- ।
ರಮಾರ್ಥದಿಂ ತನ್ನಂತಾನರಿಯದೆ ಮರ್ತ್ಯದೊಳಗಳಲುವನೆ ಹೆಡ್ಡ ॥ ೧೩

ಚರಗುರುಲಿಂಗಭಕ್ತಿ ಮೋಕ್ಷದಿರುವೆಂದಾ ಶ್ರುತಿಶಾಸ್ತ್ರಾಗಮತತಿ ।
ಒರಲುತ್ತಿರಲದನಹುದಲ್ಲೊಯೆಂದಿರದೊಬ್ಬರ ಕೇಳುವನೆ ಹೆಡ್ಡ ॥ ೧೪

ಕುರಿಯ ಬಗಲೊಳಿಟ್ಟು ಜಗದೋಳ್ ಕುರುಬ ಹುಡುಕುವಂತೆ ಶಿವತ- ।
ನ್ನುರುವಭಾವದೊಳಿಹುದರಿಯದೆ ಪರಿಪರಿಯೋಳ್ ಧರೆಯೊಳ
ಗರಸುವನೆ ಹೆಡ್ಡ ॥ ೧೫

ಮುಂಗೈಯ ಕಂಕಣಕೆ ಕನ್ನಡಿಪ್ರೊಂಗಿ ತೋರುವನಂತೆ ತನ್ನ ।
ಅಂಗೈಯೋಳ್ ನಿಜಲಿಂಗವಿರೆ ಕರ್ಮಂಗಳೊಳು ಬಳಲುವನೆ
ಹೆಡ್ಡ ॥ ೧೬

ಆದ್ಯರಮಳ ವಚನವನ್ನು ಚೋದ್ಯದಿಂದ ಲೋದಿ ಕೇಳಿ ।
ಸದ್ಯ ಮುಕ್ತಿಪಡೆಯದೆ ಬಹುವಿದ್ಯೆಯೊಳು ಬಳಲುವನೆ ಹೆಡ್ಡ ॥ ೧೭

ಸತ್ತವರ ಕುಣಿಗೈದಿ ಸುತ್ತಿಸುತ್ತಿ ನಮಗಾಯುಷ್ಯ ಭಾಗ್ಯ- ।
ವಿತ್ತು ಪೊರೆವುದೆಂದು ಜಗದೊಳರ್ಥಿಯಲಿ ಬೇಡುವನೆ ಹೆಡ್ಡ ॥ ೧೮

ಹಿತದಿ ಮನೆಗೆ ಬಂದ ಜಂಗಮವನತಿಗಳೆದು ಮತ್ತೊಮ್ಮೆ ನಮಗೆ ।
ವ್ರತನೇಮವಿದೆಂದು ಸಹಸ್ರಶತಕನೆರಹಿ ಮಾಡುವನೆ ಹೆಡ್ಡ ॥ ೧೯

ಹಿಡಿದು ಭಕ್ತನಾಗದೆ ಮತ್ತೊಡೆಯ ಜಂಗಮನಾಗದೆ ಈ ।
ಪೊಡವಿಯೋಳೊಡಲ್ಹೊರಕನಾಗಿ ಕಡೆಯೊಳ್ ದುರ್ಗತಿಗೈದವನೆ
ಹೆಡ್ಡ ॥ ೨೦

ಕಳೆದುಳಿದಾಪ್ರಮಥರ ಸುವಾಕ್ಯದ್ಹೊಲಬನರಿಯದೆ ಮತ್ತೆ ।
ಮಲಪ್ರಬದ್ಧನಾಗಿ ಜಗದೋಳ್ ಗೆಲಸೋಲಕ್ಹೋರಾಡುವನೆ
ಹೆಡ್ಡ ॥ ೨೧

ತರಳಗೆ ನೆರೆ ಕುದುರೆಯದೊಂದು ಕರಿಕಿಯ ಕೊಡುವಂದದೊಳಿತ್ತ ।
ಕುರುಹನೆ ಪಿಡಿದೆಡೆಯಾಡುತ್ತ ಮೇಲರಿಯದೆ ಭವಕೈದುವನೆ
ಹೆಡ್ಡ ॥ ೨೨

ಪಿರಿಯರನ್ನು ಮರೆತುತಾನೆ ಗುರುಚರೇಶನೆಂದು ತನ್ನ- ।
ಚರಣವನೆ ತೊಳೆತೊಳಿಸಿಕೊಂಡು ಸುರಿದುನಲಿದಾಡುವನೆ ಹೆಡ್ಡ ॥ ೨೩

ಶ್ರೇಷ್ಠವಾದ ಶಿವನುತಾನೆ ಎಷ್ಟು ವರ್ಣವಾದ ಪರಿಯ ।
ನೈಷ್ಠೆಯಿಂದೆ ತಿಳಿಯದೆ ಕ್ರಿಯವ ಕೊಟ್ಟದಿರಿಟ್ಟಾಚರಿಸುವನೆ ಹೆಡ್ಡ ॥ ೨೪

ಅರಸರಿಯದ ಬಿಟ್ಟಯಂತಿರ್ಪ ನರಲೋಕಾಚಾರವನೆ ಪಿಡಿದು ।
ಶರಣರಸನ್ಮಾರ್ಗವನು ಜರಿದು ಚರಿಸಿ ನರಕಕ್ಕೈದುವನೆ ಹೆಡ್ಡ ॥ ೨೫

ಬಾಳುತ್ತಲೆ ಲಿಂಗೈಕ್ಯನಾಗಿ ಕಾಲರಹಿತನಾಗದಂತೆ ।
ಕಾಲಕ್ಕೈಕ್ಯನಾದೆನೆಂಬ ಕಾಳುಮನುಜನವನೆ ಹೆಡ್ಡ ॥ ೨೬

ಇಷ್ಟಪ್ರಾಣ ಭಾವವೇಕೊ ನೈಷ್ಠೆಯಿಂದರಿಯದೆ ಭಿನ್ನ- ।
ವಿಟ್ಟೆಜಿಸುತ್ತೀ ಜಗದೊಳಗೆ ತಾಂ ಹೊಟ್ಟೆಹೊರಕೊಂಬುವನೆ ಹೆಡ್ಡ ॥ ೨೭

ಲಿಂಗಕ್ಕೆ ಮುಖಜಂಗಮವಾದ ಇಂಗಿತವನರಿದರ್ಪಿಸದೆ ಜಡ- ।
ಲಿಂಗಕ್ಕೆ ತೋರುಂಡು ಪ್ರಸಾದಂಗವಾಯಿತೆಂಬುವನೆ ಹೆಡ್ಡ ॥ ೨೮

ನೀನೆ ಶಿವನೆಲೆಮಗನೆ ಎಂದು ಜ್ಞಾನನಿಧಿ ಶ್ರೀಘನಮಠವಾಸ ।
ತಾನರುಹಿದ ನಿಜವಗಲಿ ಜ್ಞಾನಧ್ಯಾನಪೂಜೆಯೊಳಾಳುವನೆ ಹೆಡ್ಡ ॥ ೨೯

.... ೯೭ ....

ಹೊತ್ತಿರಲಿಕೆ ಊರಿಗೆ ಸೇರೋ । ದಾರಿ ।
ಕತ್ತಲೆಯೊಳಗರುಪುವರಾರೊ ॥ಪ॥

ಬೀಜದ ನೆಲ್ಲು ಕುಟ್ಟಿಯು ಹೊಟ್ಟು । ಚಲ್ಲು ।
ತೋಜೆಯಿಂ ಶುದ್ಧಭಾಂಡದೊಳಟ್ಟು ॥
ಮಾಜದೆ ಜಂಗಮೇಶನಿಗೆ ಕೊಟ್ಟು । ಘನ ।
ತೇಜ ಪ್ರಸಾದವನುಂಡುಟ್ಟು ॥ ೧

ಅಖಿಳ ಪಂಚಾಂಗವಾಲಿಸೆ ಕೇಡು । ಶಿವ ।
ಲಿಖಿತ ಪ್ರಮಾಣ ಸತ್ಯದಿ ನೋಡು ॥
ಸಖ ಬಂಧುಜನರ ಹಿಂದಕೆ ಮಾಡೊ । ಪದ್ಮ- ।
ಸಖನಿರುತಲೆ ಮನೆಯೊಳಗಾಡೊ ॥ ೨

ಮೂರು ಜೆಟ್ಟಿಗಳ ಯುಕ್ತಿಲಿ ದಾಟೊ । ಅಲ್ಲಿ ।
ದಾರಿ ತಪ್ಪಿದರೆ ಪುಲಿಯ ಕಾಟೊ ॥
ಆರು ಮಂದಿ ಕಳ್ಳರಿರುವ ಮಾಟೊ । ಮಹಾ ।
ಧೀರತ್ವದಿಂದಲಾಚೆಗೆ ದಾಟೊ ॥ ೩

ಜನರಿಗ್ಹೇಳುವೆನೆಂಬುದವದ್ಯಾಕೊ । ಸಾಧು ।
ಜನರಿಗೊಬ್ಬರಿಗುಸುರೆಲೆ ಸಾಕೊ ॥
ಅನುಮಾನವೆಲ್ಲವ ಕಡೆ ನೂಕೊ । ಮುಂದ ।
ಕನುಪದ ಬಳಸಿ ನಡೆಯಬೇಕೊ ॥ ೪

ಎಡಬಲದಲಿ ವಿವರಿಸಿ ನೋಡೊ । ನಟ್ಟ ।
ನಡುದಾರಿ ಹಿಡಿದು ಮುಂದಕೆಯೋಡೊ ॥
ಅಡವಿಹಣ್ಣುಗಳ ಬಯಕೆ ಬೇಡೊ । ಗಡ ।
ಗಡ ಪೋಗಿ ಘನಮಠೇಶನ ಕೂಡೊ ॥ ೫

... ೯೮ ...

ಲಿಂಗಪೂಜಾ ಮಹಿಮಾ ಷಟ್ಪದಿ - ವಾರ್ಧಿಕ

ಏಳಿ ಮನುಜರಿರ ಶಿವಲಿಂಗ ಪೂಜೆಯ ಮಾಳ್ಪ ।
ವೇಳೆಯಾಯಿತು ಮೋಹನಿದ್ರೆಯದು ಸಾಕಿನ್ನು ।
ಕಾಲಹರನಂ ಭಜಿಸಲಿಷ್ಟಾರ್ಥಸಿದ್ಧಿ ನಿಮಗಹುದು ಸದ್ಭಕ್ತಿಯಿಂದ ॥ಪ॥

ಶಿವಲಿಂಗಪೂಜೆ ಮಾಳ್ಪರಿಗೆ ಭವಭಯವಿಲ್ಲ ।
ಶಿವಲಿಂಗಪೂಜೆ ಮಾಳ್ಪರಿಗೆ ಮೃತ್ಯುಗಳಿಲ್ಲ ।
ಶಿವಲಿಂಗಪೂಜೆ ಮಾಳ್ಪರಿಗೆ ದಾರಿದ್ರದೋಷಂಗಳವು ಮುನ್ನಿಲ್ಲವೈ ॥
ಶಿವಲಿಂಗಪೂಜೆ ಮಾಳ್ಪರಿಗೆ ಮೋಸಗಳಿಲ್ಲ ।
ಶಿವಲಿಂಗಪೂಜೆ ಮಾಳ್ಪರಿಗೆ ನಾಶವದಿಲ್ಲ ।
ಶಿವಲಿಂಗಪೂಜೆ ಮಾಳ್ಪರಿಗೆ ಸತಿಸುತ ಮತ್ತಗಜ ಪಲ್ಲಕ್ಕಿಗಳಪ್ಪವು ೧

ಶಿವಲಿಂಗಪೂಜೆ ಮಾಳ್ಪವ ಶ್ವಪಚನಾದೊಡಂ- ।
ತವನೆ ಮುನಿಮುಖ್ಯ ಶಿವಲಿಂಗಪೂಜೆ ಮಾಡದವನೆ ।
ಭವಿ ಚಾಂಡಾಲನೆಂದು ಶ್ರುತಿಶಾಸ್ತ್ರಾಗಮಪುರಾಣತತಿ ಪೊಗಳಲು ॥
ಶಿವಲಿಂಗಪೂಜೆ ಮಾಡುವ ಸತಿಯು ಮುಕ್ತಿ ಸತಿ ।
ಶಿವಲಿಂಗಪೂಜೆ ಮಾಡುವ ಷಂಡನವ ಚಂಡ ।
ಶಿವಲಿಂಗಪೂಜೆ ಮಾಳ್ಪವನು ಕುಲಕೋಟಿಯನುದ್ಧರಿಪನಾಕ್ಷಣದೊಳು ೨

ಪುಸಿಯಿಂದಲಾಗೆ ಪರಿಹಾಸದಿಂದಾದೊಡಂ ।
ವ್ಯಸನದಿಂದಾಮೋಹ ಭಯದಿಂದಲಾಗೆ ಪರ- ।
ವಶದಿಂದಲಾಗೆ ಶಿವಲಿಂಗಪೂಜೆಯ ಮಾಳ್ಪ ಮಾನವರ್ ಜಗದಿ ಮತ್ತೆ ॥
ನಿಶದಿವದೊಳನುಗೈದ ದೋಷವದು ತೊಲಗಿ ಪು- ।
ಣ್ಯಶರೀರಗಳುಮೆನಿಸಿ ಸುತಿಸುತರೊಳೊಡಗೂಡಿ ।
ಅಸಮ ಕೈಲಾಸಪುರದೊಳಗಿರ್ಪರಾನಂದದಿಂದೆ ನಿಶ್ಚಿಂತರಾಗಿ ೩

ತರಣಿಕಾಂತಾಬ್ಜಾರಿಕಾಂತಮೃಣ್ಮಯಸಿಕತ- ।
ದುರುತರದ ಶಿವಲಿಂಗದಾಕೃತಿಯ ಮಾಡುತೊಂ- ।
ದರಳು ಚುಳುಕೋದಕದೊಳರ್ಚಿಸುತ್ತಿರುವ ನವನಾವನಾಗಲಿ ಜಗದೊಳು ॥
ಗುರುತಲ್ಪ ಹೇಮಚೋರಕ ಸುರಾಪಾನದು- ।
ಸ್ತರಮಾಂಸಭಕ್ಷಣಾದ್ಯಘವಳಿವ್ರತವ ದೇವ- ।
ವರನಾಗಿ ಬಾಳ್ವನೆನಲಿನಿತಕ್ಕಿನಿತು ಸಫಲ ಚಿರಪೂಜೆಗೆನಿತು ಫಲವೋ ೪

ಜಲದಿಂದೆ ಶಾಂತಿಕರ ಗಂಧದಿಂದಾಯುಷ್ಯ ।
ವಿಲಸ-ದಕ್ಷತೆಯಿಂದ ಶತ್ರುಗಳ ನಾಶನಂ- ।
ಸಲೆ ಪುಷ್ಪದಿಂದಲೈಶ್ವರ್ಯವಾಧೂಪದಿಂ ಪಾಪಹತ ದೀಪದಿಂದೆ ॥
ಬಲುಮೃತ್ಯುಹರವಮೃತ ಹಾರದಿಂ ಸಾಮ್ರಾಜ್ಯ ।
ಲಲಿತ ತಾಂಬೂಲದಿಂದಾಚಾರ ವರ್ಧನಂ ।
ತಿಳಿದು ಶಿವಲಿಂಗಕೀಪರಿಯಷ್ಟವಿಧದಾರ್ಚನೆಯ ಮಾಡಿದತಿ ಮುದದೊಳು ೫

ದುರಿತಶೇಷದ ಫಲದಿ ಸಚರಾಚರಂಗಳೋ ।
ಳ್‌ಪರಿಭವಿಸುತಲ್ಲಿ ಕಡಲೇಳನಿತ ಮೊಲೆವಾಲ ।
ಪರಿದುಂಡು ಬರಲು ಬಹುಪುಣ್ಯವಶದಿಂದೆ ನರಜನ್ಮದಿ ವಿವೇಕ ॥
ದೊರೆವುದದರಿಂದ ಹರಸಮಯ ಭಕ್ತಿಜ್ಞಾನ- ।
ದಿರವಪ್ಪುದೀಗ ಪರಶಿವಲಿಂಗ ಪೂಜೆಯಂ ।
ಭರದಿ ಮಾಡೆಚ್ಚರದಿ ಕನಸಿನೊಳಗಣ ದುಃಖವಿರದೆ ಪೋಪಂದವಹುದು ೬

ದಿನವಿಂದೆ ಶಿವಲಿಂಗ ಕರುಣಮಂ ಪಡೆವಂಗೆ ।
ದಿನವಿಂದೆ ದುಷ್ಕರ್ಮ ಪಾಶಮಂ ಕಡೆವಂಗೆ ।
ದಿನವಿಂದೆ ಸದ್‌ಭಕ್ತಿಸಾಮ್ರಾಜ್ಯವಾಳ್ವ ಸುವ್ರತವನೆಡೆವಿಡಿವವಂಗೆ ॥
ದಿನವಿಂದೆ ಹಣೆಯ ದುರ್ಲಿಖಿತಮಂ ತೊಡೆವಂಗೆ ।
ದಿನವಿಂದೆ ಚಾಂಚಲ್ಯಮನವ ನೆರೆ ತಡೆವಂಗೆ ।
ದಿನವಿಂದೆ ತನ್ನತಾನರಿದು ಭೋಂಕನೆ ಪಾರಮಾರ್ಥದಿಂ ನುಡಿವವಂಗೆ ೭

ಹರಿಯಜಾಖಂಡಲಾದಿಗಳು ಶಿವಲಿಂಗದನು- ।
ವರಿದರ್ಚಿಸಲ್ಕರಿಯದವರುರುಳ್ದರಲ್ಪಮನು- ।
ಜರು ಲಿಂಗಪೂಜೆ ಬೇಡಿನ್ನು ದಿನವುಂಟೆಂಬ ಮಾತು ಕೇಳದೆ ಶೀಘ್ರದಿ ॥
ಪರಮ ಶಿವಲಿಂಗ ಪೂಜೆಯಮಾಡಿ ಭವಮರಣ ।
ಪರಿಹರಿಸಿ ಷಟ್‌ಸ್ಥಲ ಜ್ಞಾನಸಂಪನ್ನರಾ- ।
ಗಿರಿ ವಿಹಿತವಿದು ಮಂದಮತಿ ಬೇಡ ತಾಮಸವ ಬಿಟ್ಟು ನಿಜ
ನೈಷ್ಠೆಯಿಂದ ೮

ಉತ್ತಮಂ ಶಿವಲಿಂಗ ಪೂಜೆಯದು ಬಹಳ ನ- ।
ಕ್ಷತ್ರವಿಹ ಕಾಲದೋಳ್ ಪೂಜೆಯದು ಮಧ್ಯಮಂ ।
ಮತ್ತಲ್ಪ ತಾರಕೆಗಳುಳ್ಳ ಕಾಲದೊಳಧಮ ಪೂಜೆ ದಿನಕರನುದಯದಿ ॥
ವ್ಯರ್ಥವಶನಾರ್ಥಕಾಲದೊಳು ಲಿಂಗಾರ್ಚನೆಯು ।
ಚಿತ್ತದೊಳರಿಮತ್ತಮದ ಕಾಲದಲ್ಲಿ ನೀ ।
ವತ್ಯರ್ಥಿಯಿಂದ ಶಿವಲಿಂಗ ಪೂಜೆಯ ಮಾಡಿ ಭಕ್ತಿ ಮುಕ್ತಿಯ
ಪಡೆಯಿರೊ ೯

ಜವನಾಳ್ಗಳೊಡನೆ ಕೋಣನ ಪತ್ತಿ ಘಂಟೆಯಂ ।
ಭುವನದೋಳ್‌ಬಾರಿಸುತ್ತಲ್ಲಲ್ಲಿಗೈದಿ ಮಾ- ।
ನವರ ಪರಿಕಿಸದ ಮುನ್ನವೇ ಶಿವಧ್ಯಾನದಿಂದೆದ್ದು ನಿಶ್ಶಂಕರಾಗೀ ॥
ತವೆನಿರ್ಮಲೋದಕ ಸ್ನಾನ ಭಸ್ಮಸ್ನಾನ ।
ವಿವರದಿಂ ಮಾಡುತಕ್ಷಸುಮಾಲೆಯಂ ಧರಿಸಿ ।
ನವಪುಷ್ಪದಿಂದ ಶಿವಲಿಂಗಪೂಜೆಯ ಮಾಳ್ಪನಿಗೆ ಕಾಲನಂಜುತಿಹನೈ ೧೦

ನರರು ಹಿಂದಣ ಜನ್ಮದಲ್ಲಿ ಪರಶಿವಲಿಂಗ ।
ವರಿದು ಪೂಜೆಯ ಮಾಡದಿಪ್ಪ ಕಾರಣದೆ ಭವಿ ।
ನರಕಗರ್ಭದೊಳುದ್ಭವಿಸುತಲನ್ನಕ್ಕೆ ಶತ್ರುಗಳಾಗುತೀಭೂಮಿಗೆ ॥
ಹೊರೆಯಾಗಿಯಂಗಹೀನರು ಮಾಗಿಯಪಕೀರ್ತಿ ।
ಪರರಾಗಿ ಬಲಹೀನರಾಗಿ ರೋಗಿಗಳಾಗಿ ।
ಕರಕಷ್ಟರಾಗಿ ದಾರಿದ್ರದೋಷಿಗಳಾಗಿ ಖಲರಾಗಿ ಬಾಳುತಿಹರೈ ೧೧

ಹಾಲುಹಯನಗಳುಳ್ಳ ಕಾಲದೊಳು ಹಬ್ಬವನು ।
ಲೀಲೆಯಿಂ ಮಾಳ್ಪಂತೆ ಕಾಲುಕೈಯಾಡುತಿಹ ।
ಕಾಲದೋಳ್ ಶಿವಲಿಂಗಪೂಜೆಯನುಗೈದು ಸುವಿಶಾಲಮತಿಯುತರಾಗುತೆ ॥
ಬಾಲಾರ್ಧಚಂದ್ರಧರ ಭಕ್ತಮಾಹೇಶ್ವರರಿ- ।
ಗಾಳಾಗಿ ತನುಮನಧನಂಗಳಂ ಕೊಟ್ಟು ಭವ- ।
ಜಾಲಮಂ ಪರಿಹರಿಸುವವನ ಜನ್ಮವೆ ಜನ್ಮವವನೆಜಾಣನು ಜಗದೊಳು ೧೨

ಮೃತ್ಯುಭಯದಿಂದೆ ಮಾರ್ಕಾಂಡೇಯ ಶ್ವೇತರಂ- ।
ದುತ್ತಮದ ಶಿವಲಿಂಗಪೂಜೆಯನುಗೈದವರು ।
ಮಿತ್ರಸುತನಂ ಜಯಿಸಿ ಕೈಲಾಸಕೈದಿದರದಂತಲ್ಲದೇ ನಂಬಿಯು ॥,
ಭಕ್ತಚಂಡೇಶ ಗೊಲ್ಲಾಳ ಮುಂತಾದವರು ।
ವೃತ್ತಕುಚಸೈಕತಜಪಿಕ್ಕಿಯೋಳ್ ವಿಶ್ವಾಸ- ।
ದೊತ್ತರದಿ ಶಿವಲಿಂಗಯಜಿಸಿ ನಿಜವಡೆದರಿದು ಸತ್ಯಶಿವನಾಣೆ ಜವದಿ ೧೩

ಆಸನವನಿಕ್ಕಿ ಚಿತ್‌ಕಲೆಯನಾಹ್ವಾನಿಸುತ ।
ಧ್ಯಾಸದಿಂದರ್ಘ್ಯಪಾದ್ಯಾಚಮಾನವನಿತ್ತು ।
ತೋಷದಿಂದಷ್ಟವಿಧದರ್ಚನೆಯ ಸಲೆ ಷೋಡಶೋಪಚಾರವ ಮಾಡಲು ॥
ವಾಸಿಯಿಂ ದೋಷದುರ್ಗುಣಗಳಳಿದೀಶನಸು- ॥
ವಾಸದೋಳ್ ಪ್ರಮಥರೊಡವೆರೆದು ನಿತ್ಯತ್ವದಿಂ ।
ಭಾಸಮಾನದೊಳಿಹರು ಪರಿಪೂರ್ಣಚಿತ್ತದಿಂದೇ ಷಡ್‌ಗುಣೈಶ್ವರ್ಯದಿಂ
೧೪

ಈವಿಧದಿ ಶಿವಲಿಂಗಪೂಜಾಮಹತ್ವಮಂ।
ಸಾವಧಾನದಿಕೇಳಿ ಬರೆದೋದಿ ಸದ್ಭಕ್ತಿ- ।
ಭಾವದಿಂ ಘನಮತೇಶನ ಕರುಣಪಡೆದು ಸುಜ್ಞಾನಸಂಪನ್ನರಾಗಿ ॥
ಶೀವಿಶಿವಲಿಂಗ ಪೂಜೆಯ ಸಮಾಧಾನದಿಂ ।
ಭೂವಳಯದೋಳ್ ಮಾಳ್ಪ ಸಿದ್ಧಿಯಂ ।
ಕೇವಲದಿ ದೊರಕೊಂಡು ತ್ರಿಭುವನವಿಜಯರಾಗಿ ಬಾಳ್ವರತಿ ಸೌಖ್ಯದಿಂದೆ
೧೫

.... ೯೯ ....

ಲಿಂಗವನಗಲಿರಬೇಡೆಲೊ ಪ್ರಾಣ ಲಿಂಗವನಗಲಿರಬೇಡೆಲೊ ||ಪ||

ಪಟುರೋಗಾದಿಗಳ ಸಂಕಟ ಘೋರಭಯವೇಳಾ |
ಘಟದೊಳಹೊರಗಿಹ ಸ್ಫುಟಲಿಂಗವಗಲಿರ || ೧

ಕುಚಿತ ಮಾನಸದಿ ಗುರುವಚನವರಿಯದೆ ಮತ್ತೆ |
ಶುಚಿಯಾಶುಚಿಯ ಶಂಕದ ಚಲಿಸವಾಗಿಹ ಪ್ರಾಣ || ೨

ಸ್ತುತಿನಿಂದೆಗಳಿಗೆ ನೀನತಿ ಮೋಹಿಸಿಯು ತತ್ವ- |
ಮತಿಗೆಟ್ಟು ಘನಮತ-ಪತಿಲಿಂಗವಗಲಿರ ಬೇಡೆಲೊ || ೩

.... ೧೦೦ ....

ಭಾವಲಿಂಗವೋ ಸದ್ಭಕ್ತಜನರ ಭಾವ ಲಿಂಗ ವೋ |
ಭಾವಲಿಂಗವೋ ಸದಾಶಿವಾವತಾರರೆನಿಸಿ ವೀರ ||
ಶೈವ ಧರ್ಮನಿಷ್ಠೆ ಭುವಿಯೊಳೋವಿ ಮೆರೆದ ಮಹಿಮರಮಳ ||ಪ||

ಮಲ್ಲವಿಭುಗಳು ಶಿವಗರ್ಪಿಸದುಣಲೊಲ್ಲೆನಾಗಳು |
ಯೆನೆ ಕುಹಕರೊಂದು ಬಳ್ಳವಿಳೆಯೊಳು ನಿಲಿಸೇಳಿಸುತ್ತಲೆಲ್ಲರಾಗಳು ||
ಮಲ್ಲಭಾವ ನಿಮ್ಮ ಗೌರಿವಲ್ಲಭನಿದೆಯೆಂದು ತೋರ |
ಲೊಳ್ಳಿತೆಂದು ಸಮನಡೆ-ಜೀಸಲಲ್ಲಿ ಲಿಂಗವಾಯಿತಾಗಿ || ೧

ನಂಬಿಯಣ್ಣನು ಆಪರವೆನಾಚಿ ಕುಂಭಕುಚವನು ಕಾಣುತ್ತಲೆ ಸ್ವ- |
ಯಂಭುವೀತನು ಯೆನುತಾಡಿಪಾಡುತುಂಬುರಾತನು ||
ಸಂಭ್ರಮದಲಿ ತನ್ನ ಚಿತ್ತಮಂ ಬಲಿದೆಜಿಸುತ್ತೆ ಕರೆಯೆ |
ಶಂಭುವೋಯೆನುತ್ತೆ ನುಡಿದು ನಂಬಿಗಿಷ್ಟವಿತ್ತನಾಗಿ || ೨

ಶರಣ ಕುಲಜನು ಆಕಾಟಕೋಟನರಿ ವಿಧೂತನು ನಟ್ಟಡವಿಯೋಳ್ |
ಕುರಿತರಬಿಯಾತನು ಚರವರನು ಕೊಟ್ಟ |

ಕುರಿಯ ಹಿಕ್ಕಿಯನು ಪರಮನೆಂದೆಜಿಸುತ್ತಿರಲ್ಕೆ ।
ಭರದಿ ತಂದೆಯೊದಿಯಲವನ ಶಿರವನರಿಯೆ ಹರನು ಮೆಚ್ಚಿ ಪರಮ
ಪದವ ನಿತ್ತನಾಗಿ ॥ ೩

ಪೆದ್ದಯಾಖ್ಯನು ಶಿವಲಿಂಗದೀಕ್ಷೆ ಬದ್ಧನಾಹೆನು ನಾನೆನುತಲಾಗುರು ।
ವಿದ್ದತಾವನು ಕಾಯ್ದಿರಲು ನೋಡಿ ರೌದ್ರ ದಾತನು ॥
ಬಿದ್ದ ಗುಂಡುಗಲ್ಲನೆತ್ತಿ ಕ್ಷುದ್ರ ಹೋಗೆನುತ್ತಕ- ।
ಲ್ಲುದ್ಧರಿಸಿದನೆಂದು ಪಿಡಿಯೆ ಸಿದ್ಧಲಿಂಗವಾಯಿತಾಗಿ ॥ ೪

ಶರಧಿ ರತ್ನವ ಧರಿಸಿರ್ಪವೋಲ್ ಗಿರಿತರು ಸಮೂಹವ ತಳೆವಂತೆ
ಹರಣ ।
ಕರಣದೊಳಿರುವ ಸ್ವತಂತ್ರ ಭಾವಭರಿತ ಲಿಂಗವ ॥
ಪರಮ ಘನಮತೇಶನ ಸತ್‌ಕರುಣದಿಂದೆ ಧರಿಸುವಾ ಶಿವ- ।
ಶರಣರಾವ ಕುರುಹಿಡಿವರದರೊಳುಮೇಶ ತೋರ್ಪನಾಗಿ ॥ ೫

.... ೧೦೧ ....

ಪಾದಪೂಜೆಯ ಮಾಡುವೆ ಜಂಗಮದ ಶ್ರೀ ।
ಪಾದಪೂಜೆಯ ಮಾಡುವೆ ।
ಪಾದಪೂಜೆಯ ಮಾಡುವೇ ಧರೆಯೊಳಗೆ ವಿ- ।
ನೋದದಿ ಚರಿಸುವನಾದಿ ಜಂಗಮದ ಶ್ರೀ ॥ಪ॥

ಪ್ರಾಣಲಿಂಗವ ಕರಸ್ಥಾನದೊಳರಿದು ಸು- ।
ಜ್ಞಾನದಿ ಚರಿಪನಿರ್ವಾಣ ಜಂಗಮದ ಶ್ರೀ ॥ ೧

ವೇದವೇದಾಂತ ವಿದ್ಯಾದಿಗಳಿಗೆ ಸಿಲ್ಕ- ।
ದಾದಿ ಪರಬ್ರಹ್ಮನಾದ ಜಂಗಮದ ಶ್ರೀ ॥ ೨

ಯೋನಿಜನಲ್ಲದಯೋನಿಸಂಭವನಾಗಿ ।
ತಾನವತರಿಸಿದ ಜ್ಞಾನಜಂಗಮದ ಶ್ರೀ ॥ ೩

ಅಂಗೇಂದ್ರಿಯ ತತಿ ಲಿಂಗದೊಳ್ಬೈದಿ ನಿ- ।
ರಂಗನಾಗಿಹ ಪ್ರಾಣಲಿಂಗಜಂಗಮದ ಶ್ರೀ ॥ ೪

ಶಾಂತಿದಾಂತಿಯ ಕಾಣುತಿಂತು ಚರಿಸುತಲೇ- ।
ಕಾಂತದೊಳಿರುವ ನಿಭ್ರಾಂತ ಜಂಗಮದ ಶ್ರೀ ॥ ೫

ಜಾತಿಗೋತ್ರಂಗಳನತಿಗಳೆದು ಶಿವ- ।
ಜಾತನಾಗಿಹ ಸ್ವಯಂ ಜ್ಯೋತಿಜಂಗಮದ ಶ್ರೀ ॥ ೬

ಆರುಸ್ಥಲಂಗಳ ಮೀರಿ ನಿಜಾನಂದ ।
ವಾರಿಧಿಯೊಳು ತೋರ್ಪಾಚಾರ ಜಂಗಮದ ಶ್ರೀ ॥ ೭

ಆಶಪಾಶವನುಳಿದೀಶನಾಗುತೆ ಚಿದ್ವಿ- ।
ಲಾಸದೊಳಿಹಪರದೇಶಿ ಜಂಗಮದ ಶ್ರೀ ॥ ೮

ರಾಗದ್ವೇಷಂಗಳ ನೀಗಿಪರಾತ್ಪರ- ।
ನಾಗಿ ಚರಿಸುವ ವಿರಾಗಿ ಜಂಗಮದ ಶ್ರೀ ॥ ೯

ಮೂರು ಮಲಂಗಳವಾರಿಸಿ ಪರಮ ವಿ- ।
ಚಾರದೊಳಿಹ ನಿರಾಭಾರಿ ಜಂಗಮದ ಶ್ರೀ ॥ ೧೦

ನಾಮರೂಪ ಕ್ರಿಯಾನೇಮರಹಿತನಾಗಿ ।
ಕ್ಷೇಮದೊಳಿರುವ ನಿಸ್ಸೀಮ ಜಂಗಮದ ಶ್ರೀ ॥ ೧೧

ತನ್ನತಾನರಿದು ಮತ್ತನ್ಯಪೂಜೆಯನುಳಿ- ।
ದುನ್ನತಪದವೀವ ಚೆನ್ನಜಂಗಮದ ಶ್ರೀ ॥ ೧೨

ಹಮ್ಮುಬಿಮ್ಮುಗಳ·ತಾನೊಮ್ಮೆ ಬಳಸದೆ ಜಗ- ।
ವಂ ಮರೆದಿರುವ ಸದ್ಧರ್ಮ ಜಂಗಮದ ಶ್ರೀ ॥ ೧೩

ಭಕ್ತರ ಹರಣದೋಳ್ ವ್ಯಕ್ತದಿ ನೆಲಸಿ ಸ- ।
ನ್ಮುಕ್ತಿದೋರುವ ಮದ್ವಿರಕ್ತಜಂಗಮದ ಶ್ರೀ ॥ ೧೪

ನೂತನಬಸವ ಪುರಾತನರೆನಿಪ ಪ್ರ- ।
ಖ್ಯಾತ ಶ್ರೀ ಘನಮಠನಾಥ ಜಂಗಮದ ಶ್ರೀ ॥ ೧೫

LIBRARY.
Jangamwadi Math, VARANASI.
Acc. No. 1900 & 503

.... ೧೦೨ ....

ಏನಾದಿ ಮನುಜ ಏನಾದಿ ಶಿವ |
ಜ್ಞಾನವರಿಯದೆ ನೀನೆಲೆವಾದಿ ||ಪ||

ಕಾಶಿ ಹಂಪೆ ಕೇದಾರ ಪರ್ವತನಿವಾಸಿಯೆನಿಸಿ ನೀನೇನಾದಿ |
ಆಶಪಾಶದೊಳು ಸಿಲ್ಕಿಪೊರಗೆ ಸನ್ಯಾಸಿಯಾಗಿ ನೀನೇನಾದಿ || ೧

ವೇದವೇದಾಂತ ಶಾಸ್ತ್ರಾಗಮ ತರ್ಕವನೋದಿ ಬಳಲಿ ನೀನೇನಾದಿ |
ಮೇದಿನಿಯೊಳು ಬರೆ ಬೋಧವಡೆದು ದಶನಾದವಾಲಿಸಿ ನೀನೇನಾದಿ || ೨

ಚಪಲತನದಿ ಬಹು ಜಪವನೆಣಿಸಿ ಘೋರತಪವಮಾಡಿ ನೀನೇನಾದಿ |
ಕಪಟಲಾಂಛನವನುತಾಳುತೆ ಮರ್ತ್ಯದೊಳು ನಿಪುಣನೆನಿಸಿ ನೀನೇನಾದಿ||೩

ಸ್ನಾನಮೌನ ನೇಮಧ್ಯಾನಕ್ರಿಯಾದ್ಯನುಷ್ಠಾನವಮಾಡಿ ನೀನೇನಾದಿ |
ಪ್ರಾಣಾಪಾನಗಳನು ಮಾಣದೆ ಬಂಧಿಸಿ ಮೌನವಿರ್ದು ನೀನೇನಾದಿ || ೪

ಸೃಷ್ಟಿಯೊಳಷ್ಟವಿಧಾರ್ಚನೆ ಕ್ರಿಯೆಗಳ ಮುಟ್ಟಿಮಾಡಿ ನೀನೇನಾದಿ |
ಶ್ರೇಷ್ಠ ಶ್ರೀ ಘನಮಠವಾಸನನರಿಯದೆ ಕಷ್ಟಬಟ್ಟುನೀನೇನಾದಿ || ೫

.... ೧೦೩ ....

ನಿನ್ನ ನಿಜವನರಿಯದೆ ಜೀವನಾದೆ ನಾ ||ಪ||

ಪಂಚವದನ ತವಪಂಚವರ್ಣವೆ ಸಪ್ರ- |
ಪಂಚವಾದುದೆಂಬುದ ಮರೆಯುತೆ ನಾ || ೧

ಆಶೆವೇಷದಿ ಮಲಪಾಶಬದ್ಧಕನೆನಿ- |
ಸೀಶನೆಂಬುದನಗಲಿ ಗಾಸಿಯಾಗಿ ನಾ || ೨

ತತ್ವಮಸೀತಿ ವಚನಾರ್ಥ ಹೊರವಳಿಸಿ |
ಮತ್ತನಾಗಿ ಶ್ರೀ ಘನಮಠವಾಸ ನಾ || ೩

.... ೧೦೪ ....

ಪರಮ ವಿರತರ ಜರಿಯಲುಂಟೇನೋ ಹೇ ಮರುಳ ಮಾನವ ।
ಪರಮ ವಿರತರ ಜರಿಯಲುಂಟೇನೊ ॥
ಪರಮ ವಿರತರ ಜರಿಯಲುಂಟೆ ನಿರುತ ಸತ್ ಚಿತ್ ಸುಖಸ್ವರೂಪದಿ ।
ಧರಣಿಯೊಳು ಸದ್ಭಕ್ತರಸುವಾಗಿರುತೆ ಸ್ವಾತಂತ್ರ್ಯದಿ ಚರಿಸುವ ॥ಪ॥

ಕರಣವಿಷಯೇಂದ್ರಿಯಗಳೋಳ್ ಕೊರಗಿ ಅರಿವರ್ಗಷಡುದು ।
ಸ್ತರಗುಣಾವಳಿಗಳೊಳು ನೆರೆ ತೊಡಗಿ ॥
ಶರಿರಪೋಷಣೆಗಾಗಿ ಜಡವನು ಕರಿಸಿ ಪರಮಾರ್ಥವನುಜರೆಯುತ ।
ನರರೊಳುಂ ಪರಿಪರಿಯ ವೇಷದಿ ತಿರುಗುವರ ನಾಹಳಿವೆನಲ್ಲದೆ ॥ ೧

ವೀರಶೈವಜ್ಞಾನವತಿಗಳೆದು ಒಡಲಾಸೆಯಿಂ ಸಂ- ।
ಸಾರಿಜನರಿಚ್ಛೆಯೊಳು ತಾಂ ನುಡಿದು ॥
ಸೇರೆಯರಳಿಗೆ ನೂರುಸಾಸಿರಹೇರ ಹಾಬೀಜದ ಬಣಮೆಯನು ।
ಹಾರಿಸುಟ್ಟಾಯ್ದುಂಬ ನಂತಿಹ ಕ್ರೂರರಂ ಧಿಕ್ಕರಿಪೆ ನಲ್ಲದೆ ॥ ೨

ಶ್ರೀಯುತಾದ್ಯರ ವಚನವನು ಬಿಟ್ಟು ದುರ್ಮತಿಯಿಂ ಸಲೆ ।
ಮಾಯಶಾಸ್ತ್ರಕೆ ತಾನೆ ಮತಿಗೊಟ್ಟು ॥
ತಾಯ ಮಾರುತೆ ತೊತ್ತ ಕೊಂಬುವ ನಾಯತದಿಯಭ್ಯಾಸಿಸುತೆ ಜಡ ।
ಕಾಯ ಮೋಹದಿ ಚರಿಪ ಪರಮಾನ್ಯಾಯಿಗಳ ಕಾಳ್‌ಗಳೆವೆನಲ್ಲದೆ ॥ ೩

ಪೊರಗೆ ಶಿವವೇಷವನು ಹಲ್ಲಣಿಸಿ ಮನದಂತರಂಗ ದೊ- ।
ಳಿರದೆ ಕಾಪಟ್ಯವನು ನೆಲೆಗೊಳಿಸಿ ॥
ಭರದಿಯಾಕಳ ಮರೆಯೊಳಂಬನು ಹರಿಣಗಿಡುವವನಂತೆ ಜನರನು ।
ಮರುಳುಗೊಳಿಸುತೆ ಧನವನಿತೆರಿಗೆ ಎರಗುವರದೂಷಿಸುವೆನಲ್ಲದೆ ॥ ೪

ವಾಸಿಯಿಂ ಬೆನ್ನಿನಲಿ ಪೊತ್ತಿರುವ ಸುಪದಾರ್ಥಶಾಸ್ತ್ರದ ।
ಲೇಸನರಿಯದೆ ವಿಷಯದಿಂ ಹರಿವ ॥
ರಾಸಭನವೋಲ್ ಶ್ರೀಘನಮಠನಿವಾಸನನು ಪರದೇಶಿಮಾಡಿ- ।
ತ್ತಾ ಸದವಷ್ಟಾವರಣವರಿಯದ ದೋಷಿಗಳನಾನುಡಿವೆ ನಲ್ಲದೆ ॥ ೫

.... ೧೦೫ ....

ಶರಣೆಂಬೆ ಶರಣೆಂಬೆ ।
ಶರಿರದಾಸೆಯನು ತೊರೆದ ವಿರಕ್ತಗೆ ॥ಪ॥

ಆರಾರರಿಯದ ವೀರಶೈವದನು ।
ತೋರಿ ರಕ್ಷಿಸುವ ಸಾರ ವಿರಕ್ತಗೆ ॥ ೧

ವೇಷಭಾಷೆಯನು ಹೇಸಿ ತ್ರಿವಿಧ ಸ- ।
ನ್ಯಾಸಿಯಾದ ನಿರ್ದೋಷ ವಿರಕ್ತಗೆ ॥ ೨

ಭಿಕ್ಷಾನ್ನವನಾಪೇಕ್ಷಿಸುತಖಿಲೋ- ।
ಪೇಕ್ಷನಾದ ಪ್ರತ್ಯಕ್ಷ ವಿರಕ್ತಗೆ ॥ ೩

ಜಗದ ಹಿತಾರ್ಥಕ್ಕೊಗೆದು ವಂದಿಸಿದ ।
ರಘುವ ಹರಿಸುತಿಹ ಸುಗುಣ ವಿರಕ್ತಗೆ ॥ ೪

ಯುಕ್ತಿಯಿಂದ ತ್ರಿವಿಧಾರ್ಥವ ತ್ರಿವಿಧ ।
ಕ್ಕಿತ್ತು ಮೆರೆವ ಸದ್ಭಕ್ತ ವಿರಕ್ತಗೆ ॥ ೫

ತಾನಿದಿರೆನ್ನದೆ ಹೀನಾಧಿಕರೆಂದೇ- ।
ನೆನ್ನದ ಸುಜ್ಞಾನಿ ವಿರಕ್ತಗೆ ॥ ೬

ಪುರಹೂತನ ಭೋಗರಮೇಶನಸಿರಿ ।
ಸ್ಮರನರೂಪ ಧಿಕ್ಕರಿಪ ವಿರಕ್ತಗೆ ॥ ೭

ಅಣಿಮಾದ್ಯಷ್ಟ ಸಗುಣಸಿದ್ಧಿಗಳನು ।
ತೃಣಕಣಕೆಣಿಸಿದ ವಿನಯ ವಿರಕ್ತಗೆ ॥ ೮

ಕನಕಲೋಷ್ಟ ಮಿತ್ರನು ಶತ್ರುವ ದೂ- ।
ಷಣನುತಿ ಯೊಂದಾದ ಘನ ವಿರಕ್ತಗೆ ॥ ೯

ಬಾಲೆಯರಿಗೆ ಮನಸೋಲದಿಂದ್ರಿಯದ ।
ಜಾಲವಜಯಿಸಿದ ಶೀಲ ವಿರಕ್ತಗೆ ॥ ೧೦

ಉರ್ವಿಯೊಳನುದಿನ ಸರ್ವಜೀವದಯ ।
ದುರ್ವಿರಂಜಿಪಾಪೂರ್ವ ವಿರಕ್ತಗೆ ೧೧

ನಡೆ ಪಾವನ ನೇಲ್ ನುಡಿತತ್ವವದಾ- ।
ಗೆಡೆವಿಡದಿಹ ಜಗದೊಡೆಯ ವಿರಕ್ತಗೆ ॥ ೧೨

ಬಹಿರಂತರದೊಳಗಹ ಮಿಲ್ಲದೆ ನಿ- ।
ಸ್ಪೃಹನಾಗಿರುತಿಹ ಸಹಜ ವಿರಕ್ತಗೆ ॥ ೧೩
ಎಲ್ಲ ಜೀವರೊಳಗಿಲ್ಲದುಳ್ಳನಾ- ।
ಗಲ್ಲನು ನಾಮುವ ತಾಳ್ದ ವಿರಕ್ತಗೆ ॥ ೧೪
ಭಕ್ತನಂಗ ಪ್ರಾಣಾರ್ಥದೊಳಗೆ ಸ- ।
ದ್ಯುಕ್ತಿಯಿಂದಿರುವ ಯುಕ್ತವಿರಕ್ತಗೆ ॥ ೧೫
ಕೋಪತಾಪ ಪುಣ್ಯಾಪುಣ್ಯದ ತನು- ।
ತಾಪವಿಲ್ಲದೆ ನಿರೂಪ ವಿರಕ್ತಗೆ ॥ ೧೬
ಪೂಜಾಕರ್ಮದ ರಾಜಿಯಳಿದು ಶಿವ- ।
ತೇಜದಿಂದಿರುವ ರಾಜ ವಿರಕ್ತಗೆ ॥ ೧೭
ಜನನಮರಣ ಭಯವನು ದಾಂಟಿದಪಾ- ।
ವನಮಯನಹ ಸಜ್ಜನ ಸುವಿರಕ್ತಗೆ ॥ ೧೮
ಕ್ರಯವಿಕ್ರಯ ದಾಶ್ರಯ ವಿಲ್ಲದೆ ಸ- ।
ತ್‌ಕ್ರಿಯದಿ ಚರಿಪ ಚಿನ್ಮಯ ಸುವಿರಕ್ತಗೆ ॥ ೧೯
*ಹರಲಾಂಛನವನು ಧರಿಸಿ ಸ್ವಲೀಲೆಯೊ- ।
ಳುರೆ ನಟಿಸುತ್ತಿಹ ಚರ ಸುವಿರಕ್ತಗೆ ॥ ೨೦
ನಿಂದೆವಂದನೆಗಳೊಳೊಂದವೆ ಬಂದುದ- ।
ಕಿಂದು ಹರ್ಷಿಪ್ಪಾನಂದ ವಿರಕ್ತಗೆ ॥ ೨೧
ಪಿತಮಾತೆಯರ್‌ಸತಿ ಪತಿಯಾಗದೆ ತಾಂ ।
ಸುತನವೆತ್ತ ಚಾರುತರ ವಿರಕ್ತಗೆ ॥ ೨೨
ಕಾಯಕರಣ ಸಮುದಾಯ ಶೂನ್ಯನಾ- ।
ದಾ ಯತಿವರ ನಿರಸೂಯ ವಿರಕ್ತಗೆ ॥ ೨೩

*ಛಲದಿ ಮೂರು ಮಲಗಳನು ಕಳೆದು ನಿ- ।
ಶ್ಚಲನಾಗಿರ್ಪ ವಿರಳ ಸುವಿರಕ್ತಗೆ ॥ ೨೪
ಘನಮತವಾಸನ ನೆನೆವುತ್ತನುದಿನ ।
ಘನಲಿಂಗಿಯೆನಿಸಿದನಘ ವಿರಕ್ತಗೆ ॥ ೨೫

(* ೨೦–೨೪ ಈ ಪದ್ಯಗಳು ಕೈಬರಹದ ಪ್ರತಿಯಲ್ಲಿವೆ.)

.... ೧೦೬ ....

ಮಾರಹರನೆ ನಿನ್ನ ಚಿದಾಕಾರ ಗಲ್ಲದೆ ಕೈ ।
ಸೇರದೀನಿಜಮುಕುತಿದೊರೆವ ಸಾಧನವಿರದೆ ॥ಪ॥

ಒಂದೆನ್ನದೆರಡೆಂದು ಬಗೆಯದಂದು ನಿನ್ನೊಳೇಕವಾದ ।
ಸಾಂದ್ರಪ್ರಮಥರಮಳಭಕ್ತಿಯಂದವ ಬಿಡದೆ ಸಾ- ।
ನಂದದಿಂದೆ ಪಡೆವುದೀಮತಿಮಂದರಿಗಹುದೆ ॥ ೧
ನಾನು ನೀನೆಂಬ ಭೇದವೇನುದೋರದಾಸ್ವಯಾತ್ಮ- ।
ಜ್ಞಾನವ ಬಹುಮತವ ಜರಿದು ನೂನವಿಲ್ಲದೆ ॥
ತಾನುತಾನೆಯಾಗಿ ಪಡೆವುದೀ ಮನ ಹೀನರಿಗಹುದೆ ॥ ೨
ಈಶ ಕೊಡುವ ಫಲಪದಂಗಳಾಶಯನತಿಗಳೆವ ವಿರತಿ ।
ಲೇಸಿನಿಂದಲಾ ಘನಮತವಾಸನೋಳ್ ಬಿಡದೆ ನಿರ್- ॥
ದೋಷಿಯಾಗಿ ಪಡೆವುದೀಮಾನೀಸರಿಗಹುದೆ ॥ ೩

.... ೧೦೭ ....

ಶರಣನಾಗಬಾರದಾರಿಗೆ ಈ ಜಗದಿ ಸತ್ಯ ಶರಣನಾಗಬಾರದಾರಿಗೆ ।
ಶರಣನಾಗ ಬಾರದಾರಿಗರುಹಿನಿಂದೆ ಶರಿರಕರಣ ।
ವುರುತರಾತ್ಮಲಿಂಗದಲ್ಲಿ ಬೆರೆದು ಪೂರ್ಣವಾದ ಸತ್ಯ ॥ಪ॥

ಊರ ತೊರೆದು ಹಾರಿ ಕಾಡಸೇರಿ ನಿತ್ಯಜಲಫಲಾಪ- ।
ಹಾರಿಯಾಗಿ ಘೋರತಪಸಿ ಸಾರಿಯೆನಿಸ ಬಹುದು ಸತ್ಯ ॥ ೧
ಈಶನಾಮ ವಾಸುಭೂತಿ ವೋಸದಿಂದ ಹೂಸಿನೆನೆದ ।
ವಾಸಿಯಿಂ ಗಿರೀಶ ಪುರನಿವಾಸಿಯಾಗಬಹುದು ಸತ್ಯ ॥ ೨

ಮೀಸೆ ಗಡ್ಡ ಮುಂದೆಜೆಳಸಿ ಗೋಸಿ ಹಂಗಹರಿದು ಡಂಭ ।
ವೇಷದಿಂದ ತ್ರಿವಿಧಸನ್ಯಾಸಿಯಾಗಬಹುದು ಸತ್ಯ ॥ ೩

ಸಿದ್ಧರಸವ ಬದ್ಧಗೊಳಿಸಿ ಶುದ್ಧಿಯಿಂದ ಮುದ್ದೆಮಾಡಿ ।
ಬುದ್ಧಿಯಿಂದ ಲಕ್ಷಮಂತ್ರಸಿದ್ಧನಾಗಬಹುದು ಸತ್ಯ ॥ ೪

ಹಲವುಜಪಸಮಾಧಿ ಕ್ರಿಯೆ ಗಳೊಲಿದು ಮಾಡಿ ತಾನು ಭಿನ್ನ ।
ಫಲಪದಂಗಳನ್ನು ಪಡೆದು ಛಲಿಗನಾಗಬಹುದು ಸತ್ಯ ॥ ೫

ಭೋಗಭಾಗ್ಯಗಳೊಳು ವಾಂಛೆ ನೀಗಿ ಸಕಲಜನರಿಗಿಷ್ಟ ।
ವಾಗಿ ದಾನವಿತ್ತು ಜಗದಿ ತ್ಯಾಗಿಯಾಗಬಹುದು ಸತ್ಯ ॥ ೬

ವೇದಸುವೇದಾಂತ ನ್ಯಾಯವಾದ ತರ್ಕಮರ್ತ್ಯದೊಳಗೆ ।
ಓದಿ ಪ್ರೌಢಿಯಿಂದೆ ಶಾಸ್ತ್ರವೇದಿಯಾಗಬಹುದು ಸತ್ಯ ॥ ೭

ತೋರಸಜ್ಜೆಯಲ್ಲಿಯೊಂದು ತೋರಲಿಂಗವಿಕ್ಕಿ ಮತದ ।
ಮೇರೆಯಿಂದ ಕಪಟವೇಷಧಾರಿಯಾಗಬಹುದು ಸತ್ಯ ॥ ೮

ಮೂಗು ಮುಚ್ಚಿಕೊಂಡು ತಲೆಯವಾಗದಾಶುಗವನು ಬಲಿದು ।
ಯೋಗ ಶ್ಲೇಷ್ಮವೆಂಬ ಕರ್ಮಯೋಗಿಯಾಗಬಹುದು ಸತ್ಯ ॥ ೯

ಆಗಮಾರ್ಥದರಿವ ನೈಜವಾಗಿ ತನ್ನೊಳರಿಯದೊಂದು ।
ಸೋಗು ಹಾಕಿಕೊಂಡು ಒಣವಿರಾಗಿಯಾಗಬಹುದು ಸತ್ಯ ॥ ೧೦

ಘನಮಹೇಶನೊಳಗೆ ತ್ರಿವಿಧ ತನುವನಿತ್ತು ಮತ್ತೆ ಮರಣ ।
ಜನನವಳಿದು ನಿರ್ಗುಣತ್ವವನು ಕರಿಸುತಲಾ ಸತ್ಯ ॥ ೧೧

.... ೧೦೮ ....

ಗುರುಕರಜಾತರು ನಮ್ಮವರು ಭವಮರಣವ ಗೆಲಿದರು ನಮ್ಮವರು ।
ಪರಮವೀರಶೈವಾಚಾರವನೀ ಧರೆಯೊಳ್ ಮೆರೆದರು ನಮ್ಮವರು ॥ಪ॥

ಮಾರಿಮಸಣಿಯೆಂಬೂರ ದೈವತರಗಾರುಮಾಡುವರು ನಮ್ಮವರು ।
ದಾರಿತಪ್ಪಿ ಚರಿಸಿಪ್ಪ ಮಾನವರ ಕೇರಿಯ ಮೆಟ್ಟರು ನಮ್ಮವರು ॥ ೧

ಮಲತ್ರಿವಿಧಂಗಳ ಕಳೆದು ಮೀರಿದ ಸ್ಥಲಸುಜ್ಞಾನರು ನಮ್ಮವರು ।
ಕುಲಛಲಗೋತ್ರವ ತುಳಿದುನಿಂದ ಶಿವಕುಲಪುಹೋತ್ತಮರು ನಮ್ಮವರು॥ ೨

ನಿತ್ಯನಿರ್ಮಲರು ನಮ್ಮವರು ಬಲುಸತ್ಯವಾಚಕರು ನಮ್ಮವರು ।
ಮುಷ್ಕೃತ್ಯದಿ ಚರಿಸಾಡುತಲಿರುತಿಪ ವ್ಯರ್ಥರಗೊಡರು ನಮ್ಮವರು ॥ ೩

ಉದೊ ಉದೊ ಉದೊ ಎಂದೊದರುವ ಹೊಲೆಯರ ಮೆದಿವರಿ
ತುಳಿಯರು ನಮ್ಮವರು ।
ಮದನಾರಿಯ ಭಕ್ತಿಯ ನಿಂದಿಪ ದುರ್ಮದರನುಗೂಡರು ನಮ್ಮವರು ॥ ೪

ಎಲ್ಲಿ ದುರ್ಗಿ ಪೆಸರಲ್ಲಿರೂಹುಗಳನೊಲ್ದು ಧರಿಸರ್ಕೈ ನಮ್ಮವರು ।
ಗುಲ್ಲಮಾಡುತಾ ಗಲ್ಲಿಗೆ ಬೀಳ್ವರ ಹಲ್ಲು ಮುರಿವರ್ಕೈ ನಮ್ಮವರು ॥ ೫

ಚರಣೋದಕ ಸುಸ್ಥಿರ ಪ್ರಸಾದ ನಿಜವರಿದುಕೊಂಬುವರು ನಮ್ಮವರು ।
ಧರೆಯೊಳು ಸುರೆಮಾಂಸವ ಭುಂಜಿಪ ದುರ್ನರರನು ಕೂಡರು ನ....॥ ೬

ದಿಂಡೆಪುಂಡಿನಾರುಂಡಾಕೃತಿಗಳ ಕಂಡು ಹೇಸುವರು ನಮ್ಮವರು ॥
ಕಂಡಕಂಡ ಗುಡಿಗುಂಡ ತಿರಗುವರ ಮಂಡೆಯ ಹೊಯ್ವರು ನಮ್ಮವರು॥ ೭

ನಾರಯ ನರಸಯ ಬೀರಯ ಪೆಸರಿಂದಾರುಕರೆಯರ್ಕೈ ನಮ್ಮವರು ।
ಕ್ರೂರಕರ್ಮವನು ಗೈವ ದುರ್ಜನರ ಸೇರರೆಂದಿಗೇ ನಮ್ಮವರು ॥ ೮

ಒಳ್ಳುವನಿಕೆ ಮರ ಜಲ್ಲಡಿ ಬೀಸುವ ಕಲ್ಲು ಪೂಜಿಸರು ನಮ್ಮವರು ।
ಒಳ್ಳೆಶಿವನ ಪದವಲ್ಲದೆ ಸುಳಿವರನೊಲ್ಲರದೆಂದಿಗೆ ನಮ್ಮವರು ॥ ೯

ಮೂಲೆಯೊಳಿರುತಿಹ ಕಾಳುದೈವರೆಡೆ ಕೂಳೆಂದೊಲ್ಲರು ನಮ್ಮವರು ।
ಭಾಳಲೋಚನನ ಶೀಲವ ಬಿಟ್ಟರೆ ನಾಲಿಗೆ ಕೊಯ್ವರು ನಮ್ಮವರು ॥ ೧೦

ಕುಣಿಯಕಟ್ಟಿ ಮೇಲಣ ಕಲ್ಲಿಟ್ಟದಕೆಣಿಸಿ ನಮಿಸರ್ಕೈ ನಮ್ಮವರು ।
ತ್ರಿಣಯನಿಗೆಣೆ ದುರ್ಗುಣಿ ದೈವಂಗಳನೆಣಿಸರೆಂದೆಂದಿಗೆ ನಮ್ಮವರು ॥ ೧೧

ಮನಸಂಕಲ್ಪದಿ ಹೆಣಗಳ ಪೆಸರೋಳ್ ದಿನತಿಥಿಮಾಡರು ನಮ್ಮವರು ।
ಮನೆಲಕ್ಷ್ಮಿಯ ನೆವದಿಂ ಪಿಶಾಚಿಗಳಿಗುಣಿಸಿ ನಮಿಸರ್ಕೈ ನಮ್ಮವರು ॥ ೧೨

ಒಂದು ಭಾವದಿಂದೊಂದೆ ವಸ್ತುವೆಂದೆಂದರ್ಚಿಸುವರು ನಮ್ಮವರು ।
ಸಂದಿಗೊಂದಿಲೊಂದಿಟ್ಟೈಜಿಸುವರಿಗೆ ಹಂದಿಗಳೆನುವರು ನಮ್ಮವರು ॥ ೧೩

ಯಕ್ಕಲದೇ ಜೋಗೆಂಬರಿಗೇನೊಂದಿಕ್ಕರದೆಂದಿಗೆ ನಮ್ಮವರು ।
ಕುಕ್ಕುರವೇಷವ ತಾಳಿ ಬೊಗಳುವರ ಸೊಕ್ಕು ಮುರಿವರೈ ನಮ್ಮವರು॥ ೧೪

ತೀರ್ಥಯಾತ್ರೆಕ್ಷೇತ್ರಂಗಳ ಮಾಡುವ ಮರ್ತ್ಯರ ನೋಡರು ನಮ್ಮವರು ।
ಮೂತ್ರಾಮೇಧ್ಯದ ತನುಭೋಗವನುಳಿದುತ್ತಮೋತ್ತಮರು ನಮ್ಮವರು ॥ ೧೫

ಅಷ್ಟಾವರಣ ವಿಶಿಷ್ಟಾಚಾರದಿ ಶ್ರೇಷ್ಠರಾದವರು ನಮ್ಮವರು ।
ಭ್ರಷ್ಟಮುದ್ರೆಗಳ ಕಟ್ಟುವವರ ಹಿಡಿದಿಟ್ಟಲೆಹೊಯ್ವರು ನಮ್ಮವರು ॥ ೧೬

ಶರಣರು ಶುಭದಾಚರಣರು ಮಹಿಮಾಶರಣರು ಸತ್ಯರು ನಮ್ಮವರು ।
ಭರದಲಿ ಘನಮಠವರನ ಪಾದದೋಳ್ ಬೆರೆದು ಸುಖಿಸುವರು
ನಮ್ಮವರು ॥ ೧೭

.... ೧೦೯ ....

ಕೊಡು ಕೊಡು ಕೊಡು ಕೊಡು ಕೊಡು ಬೇಗ ।
ಹಡೆದೊಡವೆ ಶರಣಸಂತತಿಗೀಗ ॥
ಕಡುಲೋಭದಿ ಘಳಿಸಳಿವಾಗ ನಿ- ।
ನ್ನೊಡನೆ ಬಾರದದರೊಳು ಹಾಗ ॥ಪ॥

ಸತಿಸುತಹಿತರಿಗೆ ಜೇಕೆಂದು ಧನ ।
ವ್ಯಥೆಯೊಳು ಘಳಿಸಿ ಮಡಿಯೆ ಮುಂದು ॥
ಸತಿ ಪರಪತಿಗಡಕುವಳಂದು ಅರಿ ।
ಸುತನಾಹಿತರ ಹಿತರುಮೆಂದು ॥ ೧

ಧನವ ಭೂಮಿಯಗಿದಿಡಬೇಡ ಉರು ।
ಫಣಿಭೂತಂಗಳು ನೆಲಸಿ ಗಡ ॥
ನಿನಗೆ ಸಾಧ್ಯವಾಗದೊ ಮೂಢ ಸು- ।
ಮ್ಮನೆ ಕೆಡುವದು ನೀನೋಡನೋಡ ॥ ೨

ಉಣದೆಯುಡದೆ ಕೃಪಣತನದೊಳು ಬಲು ।
ಹಣವ ಘಳಿಸಲೇಂ ಮೋದದೊಳು ॥

ಕುಣಿಯೊಳಗಿಡುವಾವೇಳೆಯೊಳು ಮ- ।
ಣ್ಣನೆ ತುಂಬುವರವಯವದೋಳು ॥ ೩

ಧರ್ಮಕಗ್ನಿನೃಪತಸ್ಕರರು ಬಲು ।
ವರ್ಮದಿ ತಾಂ ಭಾಗಾದಿಯರು ॥
ಧರ್ಮಹೀನನಾಗಿರಲವರು ತನು ।
ಚರ್ಮವೆತ್ತಿಯಪಹರಿಸುವರು ॥ ೪

ನಿತ್ಯವಲ್ಲವೀ ಸಂಪತ್ತು ಹಿಂದೆ ।
ಕರ್ತರಾಗಿ ಹೋದವರು ಸತ್ತು ॥
ಮೃತ್ಯುವಿಗಾಗುವಿ ನೀ ತುತ್ತು ಸತ್ ।
ಪಾತ್ರದಾನವರಿತೀ ಹೊತ್ತು ॥ ೫

ಶಿವನ ಸೊಮ್ಮು ಶಿವಶರಣರಿಗೆ ನೀ- ।
ನವಿವೇಕದಿ ವಂಚಿಸಲು ಮಿಗೆ ॥
ಜವನ ಭಟರು ತಮ್ಮೂರೊಳಗೆ ಕಾ- ।
ಡುವರು ಹಂಗಿ ಹಂಗಿಸಿ ಕಡೆಗೆ ॥ ೬

ಧರಣಿಯೊಳಗೆ ಘನಮಠಧೀಶ ತನ್ನ ।
ಮರೆಯಲೆಂದು ದ್ರವ್ಯದೊಳಾಶೆ ॥
ಪರಿಕಲ್ಪಿಸಿ ಮಾಡುವ ಮೋಸ ಇದ ।
ನರಿತು ಸುಜನರಿಗೆ ಮಾನೀಸ ॥ ೭

.... ೧೧೦ ....

ಇತರರರಿಯ ದಿರ್ದರೇನೆಲಾ ನಿನ್ನಂತರಂಗ ।
ಸ್ಥಿತಿಯುಮೇಶನರಿಯನೇನೆಲಾ ॥
ಇತರರರರಿಯ ದಿರ್ದರೇನು ಶತಶತಾಪರಾಧಗಳನು ।
ಕೃತಕತನದಿ ಮಾಡಿ ಧರ್ಮಯುತನು ಮೆನಿಸಿ ಕೊಂಬಭಾವ ॥ಪ॥

ದೇಹವಾಸನಾಹಮಾದಿ ಕೂಹಕತ್ವದಂತರಂಗ- ।
ದ್ರೋಹಿಯಾಗಿ ಪೊರಗೆ ಪುಣ್ಯದೇಹಿಯೆನಿಸಿ ಕೊಂಬಭಾವ ॥ ೧

ಕಾಮಕ್ರೋಧ ಲೋಭ ಮೋಹ ತಾಮಸಾದಿಗಳೊಳು ಸಿಲ್ಕಿ- ।
ಭೂಮಿಜನರ ಕೂಡ ಮಹಾಸ್ವಾಮಿಯೆನಿಸಿ ಕೊಂಬ ಭಾವ ॥ ೨

ವಂಚಕತ್ವಕಿಂಚಗುಣ ಪ್ರಪಂಚವಾಂಛ ದಿಂದ ಚಿತ್ತ ।
ಸಂಚಲಾತ್ಮನಾಗಿ ನಿಷ್ ಪ್ರಪಂಚಿಯೆನಿಸಿ ಕೊಂಬ ಭಾವ ॥ ೩

ಹೊನ್ನು ಹೆಣ್ಣು ಮಣ್ಣಿನಾಶೆಯನ್ನು ಮನದೊಳಿಟ್ಟು ಜನರ ।
ಕಣ್ಣುಕಟ್ಟಿಸುಳಿಯುತೆ ಬಹು ಮಾನ್ಯನೆನಿಸಿ ಕೊಂಬ ಭಾವ ॥ ೪

ಆಶಿರೋಷದ್ವೇಷ ವಸ್ತುದೂಷಕತ್ವದಿಂದೆ ಮಹಾ ।
ದೋಷಿಯಾಗಿ ಪೊರಗೆ ಶಿವನ ವೇಷ ಹೊತ್ತು ಚರಿಪ ಭಾವ ॥ ೫

ತನುವೊಳೊಂದು ಮತ್ತೆ ನಿನ್ನ ಮನದೊಳೊಂದು ಬಾಹ್ಯದೊಳ್ವ- ।
ಚನದೊಳೊಂದ ನಿಟ್ಟು ಗುಣಗುಣೆನುತ ಬೆರಳನೆಣಿಸೊ ಭಾವ ॥ ೬

ಪ್ರಾಣದೊಳಗೆ ಮರುಗುತಿಂತು ನೀನು ಕೀರ್ತಿವಾರ್ತೆಗಾಗಿ ।
ಏನಬೇಡಲಿತ್ತು ಮಹಾ ದಾನಿಯೆನಿಸಿ ಕೊಂಬಭಾವ ॥ ೭

ರಾಗದ್ವೇಷಮೋಹ ಲಜ್ಜೆ ಭೋಗಭಾಗ್ಯಗಳೊಳು ಪ್ರೀತಿ- ।
ನಾಗಿ ಮರ್ತ್ಯದೊಳಗೆ ಬಹುವಿರಾಗಿ ಯೆನಿಸಿ ಕೊಂಬಭಾವ ॥ ೮

ಘಾತಕಗುಣಸೂತಕತ್ವ ಜಾತಿಭ್ರಾಂತಿಯಿಂದ ನೇಕ ।
ಪಾತಕೇಷ್ಟನಾಗಿಸ್ವಯಂಜ್ಯೋತಿಯೆನಿಸಿ ಕೊಂಬಭಾವ ॥ ೯

ಮೀನದೊರೆವ ತನಕ ಬಕವ ದೇನುವೆನ್ನ ದಿರ್ಪ ತೆರದಿ ।
ನೀನು ಕಪಟವೇಷದಿಂದ ಮೌನಿಯೆನಿಸಿಕೊಂಬ ಭಾವ ॥ ೧೦

ಆರುಕಾಣದಂತೆ ಮನದಿ ಘೋರಪಾತಕೇಷ್ಟನಾಗಿ ।
ಭೂರಿ ಜನರ ಮುಂದೆ ನೀತಿಸಾರಿ ಪೇಳುವಂತ ಭಾವ ॥ ೧೧

ದರ್ಪಕಾರಿ ಭಕ್ತಿಯುಕ್ತಿದಪ್ಪಿಯುಭಯ ಭ್ರಷ್ಟನಾಗಿ ।
ತಿಪ್ಪಿಸಾರ್ಸಿದಂತೆ ವೇಷದೊಪ್ಪಿನಿಂದ ಚರಿಪಭಾವ ॥ ೧೨

ಕಳವು ಹಾದರವನು ಲೋಕದೊಳನುಗ್ಗೈದು ನೀನು ಮತ್ತೆ ।
ಬಲು ವಿವೇಕಿಯೆನಿಸಿ ಮರ್ತ್ಯದೊಳಗೆ ಸುಳಿಯುತಿರ್ಪಭಾವ ॥ ೧೩
ಮನಸಿನೊಳಗೆಗೈದ ದೋಷ ಜನರಿಗರಿಯ ಬಾರದಿನ್ನು ।
ಮನಕೆ ಮನವೆ ಸಾಕ್ಷಿಯಾದ ಘನಮತೇಶ ತಾನೆಬಲ್ಲ ॥ ೧೪

.... ೧೧೧ ....

ವರುಷಕೊಮ್ಮೆ ಹಿರಿಯರಿಗೆ ಮಾಳ್ಪೆವೆಂ- ।
ದುರುವಣಿಸುವ ನರಗುರಿಗಳಿರಾ ॥
ಹಿರಿಯರ ಪರಿ ನೀವರಿಯದೆ ಭುವಿಯೊಳ- ।
ಗರಸಿ ಕೆಡುವಿರೆಲೆ ಭ್ರಾಂತರಿರಾ ॥ಪ॥

ಹಿರಿಯರ್ ಬಸವಪುರಾತನರೆಂದರಿ ।
ದರಿದು ಸ್ಮರಿಸುವವರೆ ಹಿರಿಯರ್ ॥
ನಿರಯ ಜೀವಿಗಳನರಿಸಿ ಹೊಗಳುವ ನರರಲ್ಲಾ ಜಗದೋಳ್ಪಿರಿ
ಯರ್ ॥ ೧

ಭವರಾಟಳದೊಳ ವಿರತತಿರುಗಿ ಬ ।
ರುವ ಮಾನವರಲ್ಲಾ ಹಿರಿಯರ್ ।
ಕುವಲಯದೊಳು ಲೀಲಾರ್ಥದಿ ತನುತಾ ।
ಳ್ದವಿನಾಶನರವರೇ ಹಿರಿಯರ್ ॥ ೨

ನೆನದವರಘ ಕುಲವನು ಕೆಡಿಸದ ದುರ್- ।
ಜನರಾದವರಲ್ಲಾ ಹಿರಿಯರ್ ।
ಕ್ಷಣದಿ ಕಂಟಕಂಗಳನು ಹರಿಸಿ ನಿಜ ।
ವನು ತೋರಿಸುವವರೇ ಹಿರಿಯರ್ ॥ ೩

ಕಾಲಕಾಮ ಮಾಯಾದಿಗಳಿಗೆ ತಾ ।
ಪಾಳದವರಲ್ಲಾ ಹಿರಿಯರ್ ।

ಲೀಲೆಯಿಂದ ತನುತಾಳಿ ಭಕ್ತಿಗನು ।
ಕೂಲವಾಗಿರುವವರೇ ಹಿರಿಯರ್ ॥ ೪

ಪಂಚಭೂತ ದೇಹವನು ತಾಳ್ದ ಬಹು- ।
ವಂಚಕರಿವರಲ್ಲಾ ಹಿರಿಯರ್ ।
ಪಂಚಮಹಾಪಾತಕವಳಿದಾ ನಿರ್- ।
ವಂಚಕ ಭಕ್ತರವರೆ ಹಿರಿಯರ್ ॥ ೫

ಯೋನಿಯಂತ್ರದೋಳ್ ಮಾಣದೆ ಕ್ರೀಡಿಪ ।
ಹೀನಮನುಜರಲ್ಲಾ ಹಿರಿಯರ್ ।
ಜ್ಞಾನಧ್ಯಾನದೋಳ್ ಪೂರ್ಣರಾದ ನಿರ್- ।
ವಾಣಾಶ್ರಿತರವರೇ ಹಿರಿಯರ್ ॥ ೬

ಸತ್ತು ಸ್ವರ್ಗನರಕಂಗಳಿಗೆಡೆಯಾ ।
ಡುತ್ತಲಿರುವರಲ್ಲಾ ಹಿರಿಯರ್ ।
ಮತ್ತೆಮತ್ತೆ ಮಹಾಲಿಂಗವ ಭಜಿಸುತೆ ।
ಮೃತ್ಯುಂಜಯರಾದರೆ ಹಿರಿಯರ್ ॥ ೭

ಹಲ್ಲುಹೋಗಿತಲೆಯಲ್ಲಾಡುತ ಜಗ ।
ದಲ್ಲಿ ಸತ್ತರಲ್ಲಾ ಹಿರಿಯರ್ ।
ಫುಲ್ಲಶರಾಂತಕನಲ್ಲಿ ಭಕ್ತಿರತಿ ।
ಯುಳ್ಳಸುಬಾಲಕರೇ ಹಿರಿಯರ್ ॥ ೮

ಸುತ್ತಿಸುತ್ತಿ ಚೌರಾಂಯ್ಸಿ ಲಕ್ಷ ಭವ ।
ದತ್ತ ಬರುವರಲ್ಲಾ ಹಿರಿಯರ್ ।
ಉತ್ತಮಗುರು ಶಿವಹಸ್ತ ಜನಿತರೆ ನಿ ।
ಸುತ್ತ ಮೆರೆವರಲ್ಲಾ ಹಿರಿಯರ್ ॥ ೯

ಮಧ್ಯಮಾಂಸವನಮೇಧ್ಯವಭುಂಜಿ ।
ಪಹದ್ದುಕಾಗಿವಿಂಡಲ್ಲಾ ಹಿರಿಯರ್ ।

ಬದ್ಧ ಕರ್ಮಗಳನೊದ್ದು ತಾವು ಭೂ ।
ರುದ್ರರಾಗಿ ಮೆರೆವರೆ ಹಿರಿಯರ್ ॥ ೧೦

ಮನಸಿಜನಾ ಮಾಯದೊಳು ಪಡೆದ ಯೊ ।
ಜನನಿಜನಕರಲ್ಲಾ ಹಿರಿಯರ್ ।
ಮನಸಿಜನ ಛಲವನಳಿದು ಪರಮನೋ ।
ಳನುದಿನ ವೆರೆಯೆಂಬರೆ ಹಿರಿಯರ್ ॥ ೧೧

ಶತವಶಾಬ್ದವನು ಬಾಳಲು ಕೌಶಿಕ ।
ಶತವೃದ್ಧರುಮಲ್ಲಾ ಹಿರಿಯರ್ ।
ಮತಿವಂತರು ತಾವೆನಿಸುತೆ ಜಗದೊಳ ।
ಗತಿವಿರತರಾದರೆ ಹಿರಿಯರ್ ॥ ೧೨

ಮಾನಿನಿದ್ರವಿಣಕ್ಷೋಣಿಗಾಗಿ ಸ ।
ತ್ತಾ ನರರವರಲ್ಲಾ ಹಿರಿಯರ್ ।
ಜ್ಞಾನಭಕ್ತಿ ವೈರಾಗ್ಯದಿಂದೆ ಸುವಿ ।
ಧಾನಿಗಳಾದವರೇ ಹಿರಿಯರ್ ॥ ೧೩

ಯಂತ್ರತಂತ್ರ ಬಹು ಭ್ರಾಂತ ಸಿದ್ಧಿಗಳ ।
ನಂತ ವಡೆದರಲ್ಲಾ ಹಿರಿಯರ್ ।
ಮಂತ್ರಜಾತರೆನಿಸಿಂತು ಪರಶಿವನ ಚಿಂತೆಯೊಳಗಿರುವವರೇ
ಹಿರಿಯರ್ ॥ ೧೪

ಮನುಮುನಿಜನ ಸುರಗಣ ಬ್ರಹ್ಮಾಚ್ಯುತ ।
ರೆಣಿಸಲ್ಕವರಲ್ಲಾ ಹಿರಿಯರ್ ।
ಘನಮತೇಶನೊಳಗನುದಿನಬೆರೆದಿರು ।
ವಣುಗರು ನೋಡಲವರೇಹಿರಿಯರ್ ೧೫

.... ೧೧೨ —

ಕೇಳಿರೆ ಶರಣಗಣಾಳಿಸುವಚನವ ಮೇಲು ಸುಖವು ನಿಮ
ಗಾಗುವದು ||ಪ||

ಗೀಜಗನುಪದೇಶದಿ ಪೌಲಸ್ತ್ಯನು ಸೋಜಿಗದಿಂ ಕೇಳುತಲಾಗ ।
ಈ ಜಗವರಿಯಲು ದಶಮುಖನನು ಪಡೆದಾಜನರೀದೃಷ್ಟವನಂಬಿ ॥ ೧

ಕುಪಥ ವಿನಾಶಕ್ತಿಯರಾಯನು ಮೃಗದುಪದೇಶದಿ ಮಕರಶನನಾಗಿ ।
ಸುಪಥವನೈದಿದ ಉಪಮೆಯರಿದು ನೀವೊಲಿಸದೆ ವಿೂಸಲಮನದಿ ॥ ೨

ಕರುಳುತಂತಿ ಸುಸ್ವರವಾಲಿಸಿದಶಶಿರನೀಶನ ಪಾಡಿದಿಷ್ಟವನು ।
ಭರದಿ ಪಡೆದನಿದನರಿದು ಶ್ರೀಘನಮಠೇಶ್ವರನ ಶರಣರ ವಾಕ್ಯವ
ಮುದದಿ ॥ ೩

.... ೧೧೩ ....

ಸಾರವಚನಾರ್ಥವನು ಬೋಧಿಪರೆ ಅಜ್ಞಾನಜನರಿಗೆ ।
ಸಾರವಚನಾರ್ಥವನು ಬೋಧಿಪರೆ ॥
ಸಾರವಚನಾರ್ಥವನು ಬೋಧಿಪರೇ ರಹಸ್ಯಕೆ ರಹಸ್ಯವಾದ- ಪು- ।
ರಾರಿಯಂಶೀಭೂತರಲ್ಲದ ಕ್ರೂರಜನರಿಗೆ ಹಿತದಿ ಜಗದೊಳು ||ಪ||

ಅಗಣಿತಾಶ್ಚರ್ಯಾರ್ಥವನು ದಯದಿ ಯೊರೆವಂತೆ ಗುರುಮೂ ।
ರ್ತಿಗಳ ಧಿಕ್ಕರಿಸುತ್ತ ದುರ್ಮನದಿ ॥
ಹಗೆಯೋಳಗೆ ಬಿದ್ದಾಶುನಕವದು ತೆಗೆವರಂ ಬಡಿವರನು ಮರಿಯಡೆ ।
ಬೊಗಳುವಂದದಿ ಹಿತವತಾವೂಹೆಗೆ ತರದೆ ಮಾರ್‌ ಮಲೆವ ಜನರಿಗೆ ॥ ೧

ಈಶ ಶರಣ ರಾನಂದದೆನಿಮಿತ್ತ ಬಾಂಧುತ್ವದಿಂದೊರೆ ।
ದಾ ಸುವಚನಾರ್ಥವತಿಗಳೆವುತ್ತ ॥
ಹೇಸದೇ ಶಾಸ್ತ್ರಜ್ಞಪುಣ್ಗಡ್ಡೇಸಹಿತಪಾಳಿಸುತೆ ಸುಖವೀ- ।
ವಾಸುಜನರಂ ಪಳಿವವೋಲ್‌ ಗಣಭೂಷೆ ದೂಷಣವೆಂದು ತಿಳಿವಗೆ ॥ ೨

ಹಾಲಬಟ್ಟಲವೆಡದ ಕೈಯೊಳಗೆ ಬಲಕೈಯೊಳುಂ ಬಡ್ಡಿ- ।
ಗೋಲ ಪಿಡಿದೈತಂದು ಜನಕೆ ಮಿಗೆ ॥
ಲೀಲೆಯಿಂದಡ್ಡಲಿಸಿ ತಾನಾಪಾಲ್ ಗುಡಿಪನ ಕೊಲುವ ಪುತ್ರನ ।
ವೋಲು ಬಿರಿನುಡಿಯಿಂದ ತಿಳಹುವ ಶೀಲರಿಗೆ ಮುಳಿವಂತನರರಿಗೆ ॥ ೩

ಪಂಡಿತರು ಪರಮಾರ್ಥದಿಂ ಲೋಕ ಹಿತರಾಗಿ ಪರಮಪ್ರ- ।
ಚಂಡದಿಂದೊರೆಯಲ್ಕೆ ದುರ್ಜನರು ।
ಷಂಡನಂ ಸತಿಯಳನುಭೋಗಕೆ ಕಂಡುಕಳುಹಲ್ಕವನು ವೈರದಿ ॥
ಮಂಡೆಯಂ ಹೊಡಕೊಂಬ ಪರಿ ಯೊಭಂಡ ಜನರಿಗೆ ಸಜ್ಜನದಿ
ಜಗದೊಳು ॥ ೪

ರಸಿಕರಿಗೆ ಕನ್ನಡಿಯ ತೋರಲ್ಕೆ ನೋಡುತ್ತ ಬಲುಸಂ- ।
ತಸ ಒಡುವರೀ ಜಗದಿ ಮತ್ತಮಿಗೆ ॥
ಸಸಿನೆ ಮೂಕೊರಿಯಂಗೆ ಕನ್ನಡಿಯೊಸೆದು ತೋರಲ್ಕವನು ಭುವಿಯೊಳು ।
ಬಿಸಡುವಂದದಿ ಘನಮತೇಶನ ನಿಸದವರಿಯದ ಪಾಮರರಿಗೀ ॥ ೫

.... ೧೧೪ ....

ಸಾಕೊ ಹೇ ಭ್ರಾಂತ ಯಾವನೊ ನಿಶ್ಚಿಂತ ಎಲ್ಲರಿಗಿಂತ ನಾನು
ಬಹಳ ಬಲ್ಲವನೆಂದು ಕೂಗುವೆ ।
ಕುಲ್ಲತನದಿ ಕಳ್ಳದಾರಿಯಲ್ಲಿ ಪೋಗಿ ಸಾಯುವೆ ॥ ೧

ಜಾತಿಗೋತ್ರವೆಂದು ಬಹು ಪ್ರಖ್ಯಾತಿಯಲ್ಲಿ ಪೇಳುವೆ ನೀತಿ ।
ಮಾತೆ ಸೂತಕದಿಂದೆಯಾದುದೀತನುವಲ್ಲೇನೊ ಕೋತಿ ॥ ೨

ಹೆಚ್ಚುಕುಂದುಯೆಂದು ಬೋಕನಚ್ಚಿಕೊಂಡು ನುಡಿವಿಯೊ ।
ಮುಚ್ಚಿಕೊಳ್ಳೊ ನಿನ್ನ ಬಾಳು ಬಚ್ಚಲ ಭುವಿಯೊಳಿದ್ದಿಯೊ ॥ ೩

ಮೌನದ ವ್ರತವ ಪಿಡಿದು ನೀನು ಶಿವನ ಭಕ್ತನೆಂಬುವೆ ।
ಹೀನಮನದೊಳಾಶೆಯಿಂದ ಮಾನವರನೇ ನಂಬುವೆ ॥ ೪

ಚಿಲುಮೆನೀರ ಕುಡಿದು ನಮ್ಮ ಜನ್ಮಪಾವನವೆಂಬಿಯೋ ।
ಮಲಮೂತ್ರದ ಕುಳಿಯೊಳಗೆ ಮುಳುಗಿ ಮುಳುಗಿ ಬಂದೆಯೊ ॥ ೫

ಉಪ್ಪನುಳ್ಳಿಯ ಬಿಟ್ಟು ನಾನು ಸಪ್ಪೆಯನುಂಡೆನೆಂತೀದಿ ।
ಉಪ್ಪನರಿಯದ ನಾಯಿನರಿಗಳಿಗಪ್ಪುವದೆ ಷಟ್‌ಸ್ಥಲವ ಹಾದಿ ॥ ೬

ಗುಂಭಮಂತ್ರಧ್ಯಾನದೊಳಗೆ ತುಂಬಿತೀ ಮನವೆಂದೆಂಬ ।
ಸಂಭ್ರಮದಿಂದಲಿ ತಗಣೆಬೆನ್ನಿನಲಿ ಚುಂಬನಂಗೊಡಲಾಗೇನಂಬಿ॥ ೭

ಬೆಳ್ಳಿ ತಾಮ್ರದೇವರು ಬಹು ಸತ್ಯುಳ್ಳದೆಂದು ಕೂಗುವೆ ।
ಕಳ್ಳರು ಒಯ್ದು ಕಡಿದು ಕರಗಿದಡೆಲ್ಲಿಗೈದಿದವೊ ಭವಿ ॥ ೮

ಮೊಸಲು ಹಾಕಿ ದೇವರಿಗೆಂದು ಲೇಸಾದಡಿಗೆ ಮಾಡುವೆ ।
ವಾಸಿಸಿಕಂಡು ದೇವರನಗಲಿ ಧ್ಯಾಸಗುಟಿಕೆನುಂಗುವೆ ॥ ೯

ಪ್ರಸಾದ ಮುಗದೇನೆಂದು ಹುಸಿಯನೇಕೆ ನುಡಿವೆಯೋ ।
ಪ್ರಸಾದ ಮುಗಿದ ಬಳಿಕ ಮತ್ತೆ ಹಸಿವು ತೃಷೆ ಮತ್ತೆಲ್ಲಿಯೊ ॥ ೧೦

ಲಿಂಗದೊಳು ಪ್ರಸಾದ ಕಾಯಸಂಗವಾಯಿತ್ತೆಂಬುವೆ ।
ಭಂಗಿತನೆ ಪ್ರಸಾದಕಾಯ ಹ್ಯಾಂಗೆ ಭುವಿಯೋಳ್ ಹೊಳುವೆ ॥ ೧೧

ರಕ್ತಿಯಲ್ಲ ಬಿಟ್ಟು ವಿರಕ್ತನಾದೆನೆಂಬೆಯೊ ।
ಭುಕ್ತಿಗಿಲ್ಲದಿದ್ದರೇನು ಕೊರ್ತೆಮಾಡಿ ತಿಂಬೆಯೋ ॥ ೧೨

ಹೊತ್ತು ಹೋಗದೆಂದು ಪುರಾಣಹತ್ತುಯೆಂಟುವೋದುವಿಯೋ ।
ಗೊತ್ತುವೊಂದಿಲ್ಲದೆ ಕಡೆಗೆ ಸತ್ತು ಸತ್ತು ಹೋದಿಯೊ ॥ ೧೩

ಬಸವನ ಸಾಂಪ್ರದಾಯಕರೆಂದು ಬಸವನ ಪೂಜೆ ಮಾಡುವೆ ।
ಬಸವನ ಹೂಡಿ ಹೇರಿ ಬಹಳ ಘಸಣೆಮಾಡಿ ಕೊಲ್ಲುವೆ ॥ ೧೪

ಗಡಗಡನೆ ಗಣಸಹಸ್ರನಾಮ ಎಡವಿಡದೆ ನೀನೋದುವೆ ।
ಒಡೆಯ ಜಂಗಮ ಹಸಿದು ಬಂದರೆ ನಡೆನಡೆನಡೆಯೆಂದೆಂಬುವೆ ॥ ೧೫

ಇಲ್ಲದ ಹೊನ್ನು ಹೆಣ್ಣು ಮಣ್ಣುನೊಲ್ಲೆನೊಲ್ಲೆನೆಂಬುವೆ ।
ಪುಲ್ಲಕಂಬಳಿಮೇಲೆ ಕನಸಿನಲ್ಲಿ ಬರತೇನಂತಿದಿ ॥ ೧೬

ಆಶೆಮೂರತೊರೆದು ನಾ ಸನ್ಯಾಸಿಯಾದೆನೆಂತಿದಿ ।
ಕಾಸುದಾರಿಯೊಳಿದ್ದರದಕೇಸು ಯುಕ್ತಿ ತರತಿದಿ ॥ ೧೭

ಕುಟಿಲವೇಷವ ತಾಳಿ ಜಗದೋಳ್ ನಟಿಸಿ ನಟಿಸಿ ತೋರುವಿ ।
ಘಟವ ಬಿಡುವ ವೇಳೆ ಮತ್ತೆ ದಿಟವನದಾವದು ನಿನಗೋವಿ ॥ ೧೮

ಅರಿತಬಳಿಕ ಕೆಲಸಲ್ಲವದನರಿಯದ ಮಾಡಿದಡೇನಿಲ್ಲ ।
ಅರಹು ಘನಮಠವಾಸನೋಳ್ ನಿಜಶರಣ ತಾನೆ ತಾ ಬಲ್ಲ ॥ ೧೯

.... ೧೧೫ ....

ಮೂಢ ಮನುಜ ಕೆಡಬೇಡ ಸತಿಯ- ।
ರೊಡಗೂಡಿ ಬರಿದೆ ಸಾರಿದೆನಿಲ್ಲಿ ॥
ನಾಡೆ ಶಿವನ ನೀ ನೋಡಿ ಭಜಿಸು- ।
ತೀಡ್ಯಾಡೋ ಜನನ ಮರಣದ ತಳ್ಳಿ ॥ಪ॥

ಪಾಪವೊಂದು ರೂಪಾಗಿ ಸತಿಯಳೆನಿ- ।
ಸೀ ಪರಿಯೊಳು ಜಗದೊಳು ಜನಸಿ ॥
ಕಾಪಟ್ಯದಿ ಪುರುಷರನೊಳಕ್ಕೈದೆಮ- ।
ಕೂಪಕೊಯ್ವಳದ ನೀ ಬಯಸಿ ॥ ೧

ಮೃತ್ಯುಗನ್ನಿಕೆಯರರ್ಥದಾಸೆಯರು ।
ಮರ್ತ್ಯದೊಳಗೆ ಹಿತವೈರಿಯರು ॥
ಭ್ರಾತೃವನುಜರೋಳ್ ಬೆರ್ತು ಬಹಳ ದು- ।
ಷ್ಕೃತ್ಯ ವರ್ತನದಿ ನಟಿಸುವರು ॥ ೨

ಮಾಯಗಾರ್ತಿಯರು ಹೇಯಚರಿತೆಯರು- ।
ಮಾಯವತಿಯರ ಮಡಿಲನೋಡಿ ॥
ಕಾಯಮಧ್ಯದೋಳ್ ಮಾಯುದ ಹುಣ್ಣದ ।
ಕಾಯ್ದಿರ್ಪವರಿಗಹುದು ಪೀಡೆ ॥ ೩

ಕಾಮಿನಿಯೆನ್ನವಳೆಂದು ಮನದೊಳಗೆ ।
ನೀ ಮಮಕರಸಿ ಪಡೆವೆ ಬೆರಗು ॥
ಕಾಮಿನಿ ಕಾಮುಕರೊಡವೆಯೆಂದು ಶ್ರುತಿ- ।
ಪ್ರೇಮದಿಂದೆ ನೇಮಿಸಿ ನುಡಿಗು ॥ ೪

ಸೊಗಸುದೋರುತಲಿ ಜಗುಳಿಯಂದದಲಿ ।
ಮಿಗೆ ಪುರುಷರ ತಾವೆಡೆಬಿಡದೆ ॥
ನಗುತಲವನ ಹಣಗುಣವ ತ್ರಾ- ।
ಣತೊಟ್ಟನೆ ಹೀರುವರೀ ಜಗದಿರದೆ ॥ ೫

ತರುಣಿಯರೊಲವದು ಸ್ಥಿರವಲ್ಲಲೆ ಚಾ- ।
ತುರದಿ ಪುರುಷನೊಲಿಸಿ ಸಿರಿಯ ॥
ಭರದಿ ಸೆಳೆದವರ ಶಿರದಮೇಲೆ ಕೆರ ।
ಹೊರಿಸುವರೆಲೆ ಹೊರೆ ಹೊರೆ ಹೊರೆಯ ॥ ೬

ಫುಲ್ಲಶರನ ರೂಪುಳ್ಳನಾಗಿ ಸ್ವಯ ।
ವಲ್ಲಭನಿರುತಿರಲಾ ಸತಿಯರ್ ॥
ಬಳ್ಳಿಯಂತೆ ಮತ್ತೆಲ್ಲ ಪುರುಷರನು ।
ನಿಲ್ಲದೆ ಮನದೊಳಗಂ ನೆನೆವರ್ ॥ ೭

ಒಡವೆ ವಸ್ತ್ರಗಳ ಕೊಡುವ ತನಕ ಬಲ್ ।
ಸಡಗರದಿಂದುಪಚರಿಸುವರು ॥
ಬಡವನಾಗಿ ತಮ್ಮೆಡೆಗೆ ಬರಲ್ ಘುಡಿ- ।
ಘುಡಿಸಿ ನುಡಿದು ಹೊರನೂಕುವರು ॥ ೮

ತನುವೊಳೊಬ್ಬ ಮನಸಿನೊಳಗೊಬ್ಬನಾ- ।
ತ್ಮನಯನದೊಳಗೊಬ್ಬನ ನೆರೆವ ॥
ಘನಜಾರದ ಚೋರದ ಕಾಪಟ್ಯದ ।
ವನಿತೆಯರಿಗೆ ಸೋಲುತೆ ಮನವ ॥ ೯

ಮಾನಭಂಗ ಧನಹಾನಿ ದೀನತನ ।
ನಾಣುಗೆಡಕು ಕುಲನಾಶನವ ॥
ಮಾನಸವ್ಯಥೆ ನಿರ್ವಾಣ ಭಕ್ತಿಗುಣ ।
ಹೀನವೆನಿಪ ವೇಶ್ಯಳಿಗೊಲಿದು ॥ ೧೦

ಎಲವುಮಾಂಸ ನರತೊವಲು ರಕ್ತದು- ।
ರ್ಜಲಮಲಯುತಮಾಗಿಹ ಸತಿಯ ॥
ನಳಿತೋಳ್ಗಳ ಕುಚಗಳ ಕಾಣುತ ಕಳ- ।
ವಳಸಿ ಪೋಗಿ ನೆರೆವನೆ ಹೊಲೆಯ ॥ ೧೧

ಮಲದ ಭಾಂಡು ಬಲು ಹುಳದ ಕೊಂಡ ಬಿಗು ।
ಮೊಲೆಯಖಂಡವದನಿಹ ಲಲನೆ- ॥
ಗೆಳವ ಭಂಡಗೆಮುಪೊಳಲ ದಂಡವಹು- ।
ದೆಲೆಲೆ ಪುಂಡನೀ ತಿಳಿದದನೆ ॥ ೧೨

ನೋಟ ಸರಳ ವಿಷದೂಟವಧರ ರಸ- ।
ಕೂಟವೆ ಮಹಾ ನರಕದ ಕಾಟ ॥
ಕೋಟಿ ಜಪತಪದ ಪಾಟಿಗೆಡಸಿ ಬಲ್ ।
ಕೋಟಲೆಬಡಿಸುವದದರಾಟ ॥ ೧೩

ಮತ್ತೆ ವಿಷಯ ತೀರಲ್ಕೊಡನಾಸತಿ ।
ಯತ್ತ ನೋಡಲವಳಾಕಾರ ॥
ಸತ್ತಶವದಕಿಂದತ್ತಲೆನಿಸಿ ನಿರ- ।
ಯಾರ್ಥವಾಗಿಕಾಣಿಸುಘೋರ ॥ ೧೪

ತುರಿಯ ಮೇಲೆ ಯುಗರಿಟ್ಟರೆ ಹಿತವಾ- ।
ಗಿರುವದು ಕ್ಷಣಮಾತ್ರವು ಜಹಳ- ॥
ವುರಿಯಾಗುವ ಪರಿ ಸುರತದೊಳತಿಸುಖ ।
ಸುರತಾಂತಕ್ಕೆಯಹಿತದುರುಳ ॥ ೧೫

ಹರಿಣಿಪಾದ ದೋಲಿರುವ ಯೋನಿಗಾ- |
ಗುರುವಣಿಸುತ ಜನರಿಚ್ಛೈಸಿ ||
ಸೆರೆಯೊಳಾಗಿ ಕೆಟ್ಟರು ಸುಖವಣು ಘನ- |
ತರದ ದುಃಖವದನನುಕರಿಸಿ || ೧೬

ತೋರಿಕೆಡುವ ಮುಂಗಾರಿ ಮಿಂಚಿನೋಲ್ |
ಮಾರಕೇಳಿಯದು ಸ್ಥಿರವೆಂದು ||
ಧಾರುಣಿಯೋಳ್ ಸತಿಮೋಹದಿರಲ್ಕತಿ |
ಘೋರಭವದೋಳ್ಪೊಂದುವಿ ಕುಂದು || ೧೭

ಇಂದ್ರಚಂದ್ರನಸುರೇಂದ್ರನು ರಾಮು- |
ವೃಂದವೆಲ್ಲ ಸತಿಯರಿಗಾಗಿ ||
ಕುಂದು ಪಡೆದು ಮೃತಿ ಹೊಂದಿ ಹೋದರದ- |
ನಿಂದು ತಿಳಿದು ನೀ ಮರುಳಾಗಿ || ೧೮

ಶುನಕ ನೆಲುವು ಕಡಿವಲ್ಲಿ ಬಾಯಜೊ- |
ಲ್ಲನೆ ಹಿತವೆನಿಸುವ ಪರಿ ನಿನ್ನ ||
ತನುಬಿಂದುವೆ ಸತಿಯನುಕೂಲದಲೊಸೆ- |
ದಣುಸುಖವಿತ್ತು ಸರಿಗುಪುಣ್ಯ || ೧೯

ಇಲಿ ಹೆಗ್ಗಣಸೂಸಲಿಗೆಳಸುತಲಾ |
ಬಲಿಯೊಳಗಾಗಿ ಕೆಡುವಂದದೊಳು ||
ಇಳೆಯಭೋಗವಿಚ್ಛೈಸುತೀ ಸತಿಯ- |
ರೊಳು ಬೆರೆಯಲುತೋರುಗುಮರಳು || ೨೦

ಹೆಣ್ಣಿನ ಬಣ್ಣಕೆ ಕಣ್ಣುಗೆಟ್ಟು ಬಲು |
ಬನ್ನಬಡದೆ ಧಾರುಣಿಯೊಳಗೆ ||
ಚೆನ್ನ ಘನಮತೇಶನ್ನ ನೆನೆದು ಬಹು |
ಮಾನ್ಯನೆನಿಸಿ ಬೆರೆ ಶಿವನೊಳಗೆ || ೨೧

.... ೧೧೬ ....

ಆರಗೊಡವೆಯಿನ್ನೇನವಗೆ ಪಾರಮಾರ್ಥದೋಳಿರುವವಗೆ ।
ವೀರಶೈವ ಸುವಿಚಾರ ಪ್ರಮಥರಾಚಾರವಿಡಿದು ಭವದೂರನಾದಗಿನ್ ॥ಪ॥

ಬಸವಣ್ಣನೆ ಶ್ರೀಗುರುವೆಂದು ಅಸಮಲಿಂಗ ಚೆನ್ನವೃಷನೆಂದು ।
ಕುಶಲದಲ್ಲಮಪ್ರಭು ಚರನೆಂಬೀ ಪೊಸ ನಂಬಿಗೆ ಕೈವಶವಾದವಗಿನ್ ॥ ೧

ಬಾಹ್ಯಕರ್ಮಕೆ ನಾಸ್ತಿಕನಾಗಿ ಗಹ್ವರಿಯೊಳು ಭ್ರಾಂತಿಯ ನೀಗಿ ।
ಜಿಹ್ವೆಗುಹ್ಯಗಳ ಜರಿದು ಸದಾಶಿವನಾಹ್ವಯವೇತನುವಾಗಿ ವಿರಾಜಿಪಗಿನ್॥೨

ಮೃಡಶರಣರ ವಚನಾನುಭವ ಬಿಡದೆಯೋದಿಕೇಳದರನುವಾ ।
ಸಡಗರದಿಂದರಿಪಡಿಗಡಿಗಾ ನುಡಿನಡೆಯೊಂದಾಗುತೆ ದೃಢದಿಂದಿ
ರ್ಪವಗಿನ್ ॥ ೩

ಕೋಶಪಂಚಕವನತಿಗಳೆದು ಈಷಣತ್ರಯವನೆ ನೆರೆ ಮರೆದು ।
ವೇಷಭಾಷೆಯಿಂ ದಾಸನಾಗದೆ ನಿರಾಶೆಯಿಂದ ಪರದೇಸಿಯಾದಗಿನ್ ॥ ೪

ಜಾತಿಗೋತ್ರನೀತಿಯನಳಿದು ಭೂತಪಂಚಕದ ಗುಣವರಿದು ।
ಖ್ಯಾತಿ ಯಲಾಭದ ಪೂಜೆಯಳಿದು ಪರಮಾತುಮನೊಳು ಬೆರೆದಾತಗೆ
ಮತ್ತಿನ್ ॥ ೫

ಭುವಿಯೊಳು ಶಿವನ ಪ್ರಸಾದವನು ವಿವರದಿ ಶಿವನ ಪದಾಂಬುವನು ।
ಅವಿರಳ ಮತಿಯಿಂದನುಭವಿಸುತಲಾ ಪ್ರವಿಮಲ ತತ್ವಜ್ಞಾನಿ
ಯಾದಗಿನ್ ॥ ೬

ಅಷ್ಟಾಂಗದೊಳಷ್ಟಾವರಣ ಶ್ರೇಷ್ಠಾದಿ ಸಂಬಂಧಾಚರಣ ।
ಇಷ್ಟಪ್ರಾಣಭಾವದ ನಿಜವನು ಗುರು ಕೊಟ್ಟ ಜ್ಞಾನವಳವಟ್ಟಾತ
ಗೆಮಗಿನ್ ॥ ೭

ವೇದಶಾಸ್ತ್ರತರ್ಕಾದಿಗಳಗಾದಿಯೆಂದು ಕಳದವರಚಲ ।
ಮೇದಿನಿಯೊಳು ತನ್ನಾದಿಮಧ್ಯತುದಿ ಮೋದದಿ ತಿಳಿದು ವಿನೋದ
ದೊಳಿರ್ಪ ॥ ೮

ಜ್ಞಾನಕ್ರಿಯಾಸಂಧಾನವನು ನೂನವಿಲ್ಲದೆ ನಡೆಸುತವನು ।
ಸಾನುರಾಗದಿಂ ಘನಮಹೇಶನೋಳ್ ತಾನೆತಾನೆತಾನಾಗಿ ವಿರಾಜಿಪ ॥ ೯

.... ೧೧೭ ....

ದೂಷಣೆ ಮಾಡಲದೊಂದೆ ಜನರತಿಭೂಷಣೆ ಮಾಡಲದೊಂದೆ ।
ಈಷಣತ್ರಯದ ದೋಷವಳಿದು ನಿರ್ದ್ವೇಷಿಯಾದ ಪರದೇಸಿಗೆ
ಜಗದೊಳು ॥ಪ॥
ಪ್ರೀತಿಲಿ ಕರೆದೊಯ್ದೀತನೆ ಶಿವನೆಂದೋತು ವಂದಿಸಲದೊಂದೆ ।
ಜಾತಿಹೀನನೆಂದಾತುರದಿಂದಲಿ ಮಾತುಗಳಾಡಲದೊಂದೆ ॥ ೧
ಹೋಳಿಗಿ ತುಪ್ಪೊಳಮನೆಯೊಳು ನೀಡುತ ವೀಳ್ಯವನೀಯಲದೊಂದೆ ।
ಸೂಳೆಮಗನೆಯೆಂದೊದರುತ ಹಳಸಿದ ಕೂಳ ಹಾಕಲದೊಂದೆ ॥ ೨
ಅಯ್ಯಪ್ಪಾಯೆಂದೊಯ್ಯನೆ ಘನತರ ಶಯ್ಯದೊಳುಳಿಸಲದೊಂದೆ ।
ಕೈಯವಿಡಿದುಯೆಳದೆಳದು ನೂಕುತಲಿ ಹೊಯ್ಯಲು ಬಯ್ಯಲದೊಂದೆ ॥ ೩
ಬಲ್ಲವರೆಂದುಲ್ಲಾಸಿಸಿ ಪಾಡುತ ಪಲ್ಲಕ್ಕಿಮೆರೆಯಲದೊಂದೆ ।
ಸಲ್ಲದಿವನು ಬಲುಕಳ್ಳನೆಂದು ಪುರದಲ್ಲಿಂದ್ಹೊರಡಿಸಲೊಂದೆ ॥ ೪
ತನುಕರಣಂಗಳು ಪುಸಿಯೆಂದವರಿಗೆ ವಿನಯಾವಿನಯಗಳೊಂದೆ ।
ಘನಮತೇಶನೊಳಗನುದಿನ ಬೆರೆದಿರುವನಿಗೆ ಶುಭಾಶುಭವೊಂದೆ ॥ ೫

.... ೧೧೮ ....

ಜಯಜಯ ಜಯ ಶಿವಲಿಂಗ ಜಯ ಪಾಂಡುರಂಗ ॥ಪ॥
ಕನಕಾದ್ರಿನಿಲಯ ಮನಸಿಜವಿಜಯ ।
ಮನುಮುನಿಜನ ಹೃದಯಸಂಗ ತ್ರೈನಯನ ಭವಭಂಗ ॥ ೧
ನಗಜಾಮನೋಹರ ನಿಗಮಾಶ್ವ ಪ್ರಕರ ।
ಗಗನಕುಂತಳ ಭುವನೇಶ ಸುಗುಣಗಣ ವಿಭೂಷ ॥ ೨
ಘನಮತನಿಶ್ವಸ ವಿನುತ ಸುಮನಸ ।
ವನಜನಯನವರಮೈತ್ರ ಗಣವನಚಾರುಚೈತ್ರ ॥ ೩

.... ೧೧೯ ....

ಮಂಗಲಂ ಶಂಕರ ಮಾ । ತಂಗ ಸುಚರ್ಮಾಂಬರ ॥
ಲಿಂಗ ಪಾಂಡುರಂಗ ಧೃತಕು । ರಂಗಕರನುಮಾವರ ॥ಪ॥

ಸೋಮ ಸೂರ್ಯಾನಲಾಕ್ಷ । ಸೋಮ ಶಾಮಲಾಂಗ ಶರ ॥
ಕಾಮಿತಾರ್ಥಸಿದ್ಧಿಕರ ಸು- । ನಾಮ ತ್ರಿಜಗದೀಶ್ವರ ॥ ೧

ಮೇರುಕೋದಂಡ ವಿಜಿತ- । ಮಾರ ನಿಗಮಗೋಚರ ॥
ಘೋರಭವವಿದೂರ ಚಿದಾ- । ಗಾರ ಸುರಗಂಗಾಧರ ॥ ೨

ಸಾಂದ್ರ ಘನಮತೇಶನುತ ಯ- । ತೀಂದ್ರ ದಯಾಸಾಗರ ॥
ಇಂದ್ರಸುತಸುಪೂಜಿತ ಪ್ರಮು- । ಥೇಂದ್ರ ಹೃದ್ವಶೀಕರ ॥ ೩

.... ೧೨೦ ....

ಆರತಿ ಬೆಳಗಿರೀಶ್ವರಗೆ ಸು- । ಶರೀರ ಸಾಂಬನಿಗೆ ॥ಪ॥

ಸಾರ ಷಟ್‌ಸ್ಥಲ ವಿಚಾರಮನೀವ- ।
ಪಾರಮಹಿಮ ಭವದೂರ ವೀರನಿಗೆ ಸುಕುಮಾರಿಯರ್ ಭವಗೆ ॥ ೧

ಅಂಗಗುಣಂಗಳ ಹಿಂಗಿದ ಭಕ್ತರೋಳ್ ಸಂಗವಾಗಿಹ ।
ಮಹಾಲಿಂಗದೇವನಿಗೆ ಕೋಮಲಾಂಗಿಯರ್ ಮೃಡಗೆ ॥ ೨

ಸತತ ಶ್ರೀ ಘನಮಠಪತಿ ಜಗದೀಶ ।
ಗತಿನೀನೆಯೆಂದು ಸನ್ನುತಿಸುತಾದ್ವಯಗೆ ಶಿವಸತಿಯರು ಹರಗೆ ॥ ೩

.... ೧೨೧ ....

ಜಯ ಶಂಕರ ಜಯ ಶುಭಾಕರ ॥ಪ॥

ಭವಭಯದೂರ ಭುವನೋದ್ಧಾರ ।
ರವಿಶಶಿಶಿಖಿ ನಯನ ವರದ ಶೂರ ॥ ೧

ಮದನ ವಿಭಂಗ ಉದಧಿ ನಿಷಂಗ ।
ಸದಮಲ ಶರಣ ಸುಹೃದಯೋತ್ಸಂಗ ॥ ೨

ಘನಮಠವಾಸ ಗಣಪರಿತೋಷ ।
ಅನಘಸುಗುಣಮಣಿಗಣ ಸದ್ಭೂಷ ॥ ೩

.... ೧೨೨ ....

ಜಯ ಜಯ ಜಯ ಶಿವಲಿಂಗ ।
ಜಯ ಶಿವಾಧವ ನಿರಾಮಯ ಭವಭಂಗ ॥ಪ॥

ಉಡುಪತಿಚೂಡಾ ಭವಜಡದಿ ನಿಷಂಗ ।
ಮೃಡಚಿದಾಭರಣ ನಿರ್ಜಡ ಶಿವಲಿಂಗ ॥ ೧

ಮುನಿಕುಲಾಧೀಶ್ವರ ತ್ರಿಣಯಶುಭಾಂಗ ।
ಅನಘ ಶ್ರೀಪುತ್ರದಹನ ಶಿವಲಿಂಗ ॥ ೨

ಘನಮಠವಾಸ ನತಜನಮನೋತ್ಸಂಗ ।
ಪ್ರಣವ ಸಾಕಾರ ನಿರ್ಗುಣ ಶಿವಲಿಂಗ ॥ ೩

.... ೧೨೩ ....

ಜಯ ದೇವದೇವ ದೇವದೇವ ಜಾಹ್ನವೀ ಚೂಡ ।
ರಯುಗಾಪ್ತರೇತ ರಾಜರಾಜ ಪ್ರಿಯ ವೃಷಾರೂಢ ॥ಪ॥

ಶಾರ್ವರೀಶ ಭೂಷ ದೈತ್ಯಗರ್ವಭಂಜನ ।
ವರ ಪರ್ವತೇಂದ್ರಜಾತನಾಥ ಉರ್ವಿಸ್ಯಂದನ ॥ ೧

ಮಾಪರೋಪ ಪಾಪಲೋಪ ತ್ರೈಪುರ ಮಥನ ।
ನಗಚಾಪ ಕೋಪತಾಪಹತ ನಿರೂಪ ಪಾವನ ॥ ೨

ಬಂಧುರ ಘನಮಠ ನಿವಾಸ ಸಿಂಧುರ ವದನ ।
ಪಿತ ಸುಂದರಾಂಗ ದೇವ ಮೌನಿವೃಂದ ಹೃತ್‌ಸದನ ॥ ೩

.... ೧೨೪ ....

ಆರತಿ ಬೆಳಗಿರೆ ನೀರೆಯರಾರತಿ ಬೆಳಗಿರೆ ॥ಪ॥

ವಿಷಯವಿಸರದೌರ್ವ್ಯಸನಗಳಳಿದು ಪ್ರ- ।
ಹಸನಮುಖಿಯರು ಶ್ರೀ ಶಶಿಧರನಿಗೆ ಬೆಳಗಿರೆ ॥ ೧

ಮುತ್ತಿನ ಮೂಗುತಿ ವ್ಯಕ್ತದಿ ಧರಿಸುತೆ ।
ಚಿತ್ತಜಾರಿಗೆಅಚ್ಚಮುತ್ತೈದೆರು ಬೆಳಗಿರೆ ॥ ೨

ಘನಮಠವಾಸನ ನೆನವು ಮನದೊಳನು- ।
ದಿನವಗಲದೆ ನಿಜಗುಣಿಯರೀಶಗೆ ಬೆಳಗಿರೆ ॥ ೩

.... ೧೨೫ ....

ಬೆಳಗಿರಾರತಿ ಕಲುಷ ಸಂಹರಗೆ ।
ನಳಿನಸಖೇಂದು ಪ್ರಜ್ವಲನೇತ್ರನಿಗೆ ॥ಪ॥

ಉತ್ತಮನಾರಿಯರತ್ಯಂತ ಮುದದಿ ಸು- ।
ಚಿತ್ತದೊಳೊಲಿದು ಗಂಗೋತ್ತಮಾಂಗನಿಗೆ ॥ ೧

ನಿಶ್ಚಲಮನಸಿನಿಂದಚ್ಚಮುತ್ತೈದೇರು ।
ಪಶ್ಚಿಮಾದ್ರಿಯೊಳು ತನ್ನಿಚ್ಛೆಯೊಳಿಹನಿಗೆ ॥ ೨

ಘನಮಠವಾಸನೊಳನುದಿನವೆರದು ।
ವಿನಯದಿ ಜಯಜಯವೆನುತೆ ಭಾವೆಯರು ॥ ೩

.... ೧೨೬ ....

ಆರತಿಯನೆತ್ತಿರೆ ಶಿವಗೆ ಮಂಗಳಾರತಿಯನೆತ್ತಿರೆ ।
ಆರತಿಯೆತ್ತಿಸದ್ವಿಚಾರಿಯರನುದಿನ ಪಾರಮಾರ್ಥದಿ
ನಿರಾಕಾರ ನಿಶ್ಚಲ ಶಿವಗೆ ॥ಪ॥

ಮಿಂದು ಮಡಿಯನುಡುತಂದದಾಭರಣವಾ- ।
ನಂದದಿ ಧರಿಸುತಾ ಮಂದಯಾನೆಯರ್ ಭವಗೆ ॥ ೧

ಪಾಡುತಾಡುತೆ ಭಕ್ತಿ ಹೂಡಿ ಹೃದಯದೊಳು ।
ಗಾಡಿಕಾರ್ತಿಯರೊಡಗೂಡಿ ಮೃಡಗೆ ॥ ೨

ಶರಿರಾರ್ಥಪ್ರಾಣ ವರ ಘನಮಠವಾಸ- ।
ಗಿರದರ್ಪಿಸಿ ನಿಜಶರಣೆಯರಘಹರಗೆ ॥ ೩

.... ೧೨೭ ....

ಶ್ರೀಶವರ ಪರಮೇಶ ಮಂಗಲಂ ।
ಈಶ ಮಂಗಲಂ ಮಹೇಶ ಮಂಗಲಂ ॥

ಹಾಲಾಹಲಗಲ ಕಾಲವಿಜಿತ ಫಲಕಾಳಿಮನೋಬ್ಜವಿ- ।
ಲೋಲಮಂಗಲಂ ಲೋಲಮಂಗಳಂ ನಿರಾಳ ಮಂಗಳಂ ॥ ೧

ಅಂಗಜಹರ ಸುರಗಂಗಾಜಟಾಧರ ।
ಭಂಗವಿರಹಿತೋತ್ತುಂಗಮಂಗಲಂ ತುಂಗಮಂಗಲಂ
ಶುಭಾಂಗಮಂಗಲಂ ॥ ೨

ಈಶ ಘನಮಠವಾಸ ಗುಣಮಣಿಭೂಷ ಶರಣಜನಪೋಷ
ಮಂಗಲಂ ।
ಪೋಷಮಂಗಲಂ ಖಕೇಶ ಮಂಗಲಂ ॥ ೩

.... ೧೨೮ ....

ಕರ್ಪೂರಾರತಿಯನು ಬೆಳಗಿ ಸರ್ಪಭೂಷಗೆ ।
ಸೂರ್ಪಕಾರಿವಿಜಿತಶೌರ್ಯಗೆ ಪರಮೇಶಗೆ ॥ಪ॥

ಸೂರಕರ ಸುಕೋಟಿಪ್ರಭಾಪಾರವಾರಗೆ ।
ಸಾರವೀರಭಕ್ತಹೃದ್ವಿಹಾರಧೀರಗೆ ॥ ೧

ತ್ರ್ಯಕ್ಷ ದಕ್ಷಶಿಕ್ಷ ಮೋಕ್ಷಾಪೇಕ್ಷರಕ್ಷಗೆ ।
ಪಕ್ಷಿರಥಸಪಕ್ಷ ವರವಳಕ್ಷದೇಹಗೆ ॥ ೨

ದುರಿತ ಶರಧಿಮರುತ ಶರಣಭರಿತ ಶಾಂತಗೆ ।
ವರದಕರ ಘನಮಠವಾಸ ಗುರುಮಹಾತ್ಮಗೆ ॥ ೩

... ೧೨೯ ...

ಕರ್ಪೂರಜ್ಯೋತಿಪ್ರಭಾಮಯ ಭೋ ಶಿವ ||ಪ||

ಅಕ್ಷಯಘೋರ ಪಾಪಕ್ಷಯ ನೈರ್ಗುಣ ।
ತ್ರ್ಯಕ್ಷಸುರಾರ್ಚಿತ ಮಾಜಹರ ಕರುಣಾಕರ || ೧

ಕಾಲವಿನಾಶನ ನೀಲಗಳಾಭವ ।
ಶೈಲಸುಕಾರ್ಮುಕ ವೇದಹಯಾಭವಾನೀ ಪ್ರಿಯ || ೨

ಘನಮಠವಾಸ ಪಾವನಮೃದುಭಾಷ ।
ಧನಪತಿಮೈತ್ರ ಸಾಧುನುತ ಕುಮಾರಪಿತ || ೩

.... ೧೩೦ ....

ಗಂಗಾಧರ ಮಂಗಲಂ ಗಾನಲೋಲ ಗಂಗಾಧರ ಮಂಗಲಂ ।
ಅಂಗಜಾಹಿತ ಸರ್ವಮಂಗಳಾಧಿಪ ಜಯ ||ಪ||

ವೇದಘೋಟಕ ವಿಧುವೇದಖಂಡಲನುತ- ।
ಪಾದ ಪಾಂಡುರಗಾತ್ರ ತ್ರಿದಶಸಖ ಜಯ || ೧

ಚಂದ್ರಶೇಖರ ದಿವಸೇಂದ್ರಜಾಹರ ಪ್ರಮ- ।
ಥೇಂದ್ರಹೃದ್ವಶ ಭೂಧರೇಂದ್ರ ಕಾರ್ಮುಕ ಜಯ || ೨

ಈಶ ದುಷ್ಕೃತಚಯನಾಶ ಶ್ರೀಘನಮಠವಾಸ ।
ತ್ರಿಭುವನ ಪ್ರಪೋಷ ನಿಶ್ಚಲ ಜಯ || ೩

.... ೧೩೧ ....

ಜಯದೇವ ಜಯಶಂಕರ ನಿರ್ಭಯ ಮಹಾದೇವ ||ಪ||

ಯಕ್ಷರಾಟ್ ಸಖಾಕ್ಷಯ ಮಹೋಕ್ಷವಾಹನ ವಿರೂ- ।
ಪಾಕ್ಷ ಲೋಕರಕ್ಷಣಾಘಶೀಕ್ಷ ಲಕ್ಷಣ || ೧

ಪಾತ್ರಶುಭಚರಿತ್ರ ಧವಳಗಾತ್ರ ಯತಿನುತಶ್ರುತಿ ।
ಸ್ತೋತ್ರ ಮುಕ್ತಿಕ್ಷೇತ್ರಾಸಮನೇತ್ರಶೋಭಿತ ॥ ೨

ಭದ್ರಭವಸಮುದ್ರ ಭೈತ್ರಕ್ಷುದ್ರಗುಣಹತ ನಿರು- ।
ಪದ್ರ ಘನಮತೇಶ್ವರಾದಿ ರುದ್ರಶಾಸ್ವತ ॥ ೩

.... ೧೩೨ ....

ಜಯ ಜಯ ಶ್ರೀಮಹೇಶ ಜಯ ಪರಮಪ್ರಕಾಶ ॥ಪ॥

ಶ್ರುತಿತತಿಹಯ ಯತಿನುತ ಶತಮುಖ ನಿಜ- ।
ಸುತಹಿತ ಕ್ಷಿತಿರಥ ಗತಮಾಯ ಶಿವ ॥ ೧

ಧರಾಧರಧರಶರ ಪುರಹರ ವರಮೃಗ- ।
ಕರ ಸರಸಿರುಹವರದ ಪರಶಿವ ॥ ೨

ಜನದ ಮರಣ ನಾಶನಘ ।
ಘನಮತೇಶನಮಿತ ಜನಪೋಷಣಸಾಂಬಶಿವ ॥ ೩

.... ೧೩೩ ....

ಆರತಿಯೆತ್ತಿರೀಶಗೆ ಮಾರಸಂಹರಗೆ ।
ಆರತಿಯತ್ತಿರವಧಾರೆನುತನುದಿನ ಸಾರಸಾಕ್ಷಿಯರಭವಗೆ
ಸಾರಮನದಿ ಮಿಗೆ ॥ಪ॥

ಇಂದು ವದನೆಯರಾನಂದದಿ ಜ್ಯೋತಿವಿಡಿ- ।
ದಂದದಿ ಪಾಡುತಾಡುತೆ ಸುಂದರಾಂಗಗೆ ॥ ೧

ಪರಮ ಶರಣರ ಹೃತ್ ಸರಸಿಜದೊಳಗುರೆ ।
ಮೆರೆವ ನಿರಂಜನಗೆ ತರುಣಿಯರಘಹರಗೆ ॥ ೨

ಮರುತಾಪಗಾ ಜಟಾಧರ ಪರಮೇಶಗೆ ।
ವರಘನಮತವಾಸಗೆ ಶರಣಿಯರಕ್ಷಯಗೆ ॥ ೩

.... ೧೩೪ ....

ಜಯ ಮಂಗಳಾರತಿ ಶಿವಲಿಂಗ ತೇ ।
ಜಯಮಂಗಳಾರತಿ ಶಿವಲಿಂಗ ತೇ ॥
ಜಯಸರ್ವಮಂಗಳಪ್ರಿಯ ಭವಭಂಗ ತೇ ।
ಜಯಮಂಗಳಾರತಿ ಶಿವಲಿಂಗ ತೇ ॥ಪ॥

ವ್ಯಾಲಮಾಲ ಶೋಭಿತ ಕರುಣಾಲವಾಲ ।
ಕಾಲವಿಜಿತಾಂಬರವಾಲ ಮೌನಿ ಜಾಲಸತತ ಪರಿಪಾಲ ತೇ
ಜಯ ॥ ೧
ಕಾಯ ಮಾಯ ರಹಿತ ಸುಖದಾಯ ಸಾಮ- ।
ಗಾಯನಲೋಲ ನಿರಸೂಯ ಅಪ್ರಮೇಯ ಸುಶರಣ
ಸಹಾಯ ತೇಜಯ ॥ ೨
ಕ್ಲೇಶನಾಶ ಸುಗುಣಗಣಕೋಶ ಶೇಷ- ।
ಭೂಷಪರಮ ಚಿತ್ ಪ್ರಕಾಶಮೃದು ಭಾಷೆ ಶ್ರೀಘನಮಠಧೀಶ
ತೇ ಜಯ ॥ ೩

.... ೧೩೫ ....

ಆರತಿ ಬೆಳಗಿ ಶಿವಗೆ ಮಂಗಳಾರತಿ ಬೆಳಗಿ ಆರತಿ ಬೆಳಗಿ ವಿ- ।
ಚಾರನಾರಿಯರ್ಕೈದೆ ಪಾರಮಾರ್ಥದಿ ಲೋಕೋದ್ಧಾರ ಪರಮ
ಶಿವಗೆ ॥ಪ॥
ಪಂಕಜಸಖ – ಹರಿಣಾಂಕ–ಪಾವಕನೇತ್ರ- ।
ಗೋಂಕಾರರೂಪಗಾತಂಕರಹಿತ ಶಿವಗೆ ॥ ೧
ಕಂದರ್ಪಪಿತ ಶತಾನಂದಖಂಡಲದೇವ- ।
ವೃಂದವಂದಿತಪಾದಸಿಂದು–ಶೋಭಿತ ಶಿವಗೆ ॥ ೨
ಈಶ ನಿರ್ಗುಣ ಸುಪ್ರಕಾಶ ಸನ್ಮುನಿಜನ- ।
ಪೋಷ ಶ್ರೀಘನಮಠವಾಸ ನಿಷ್ಕಲ ಶಿವಗೆ ॥ ೩

.... ೧೩೬ ....

ಅಂಗನೆಯರಾರತಿಯನೆತ್ತಿರೆ ಶಿವಗೆ ಪಾವನಾಂಗದ್ವಯಗೆ ||ಪ||

ಸಂಚಿತಾದಿಗಳ ಪ್ರಾಪಂಚವಾಸನೆ ಬಿಟ್ಟು ।
ಪಂಚಮುಖದ ಪರಮೇಶಗೆ ಅಂಚಗಮನೆಯರ್‌ಹರಗೆ ॥ ೧

ಲಿಂಗಾಂಗಸಂಗದಇಂಗಿತವರಿದೇಕ- ।
ಲಿಂಗ ನಿಷ್ಠೆಯನು ಬಲಿದು ಮಿಗೆಶೋಭನಾಂಗಿಯರ್‌ಮೃಡಗೆ ॥ ೨

ಘನಮಠೇಶ್ವರನ ಹೃದ್ ವನಜದೊಳಗೆ ನಟ್ಟಿ ।
ಯನುದಿನ ಜಯ ವೆನುತಭವಗೆ ಗುಣಮಣಿಯರೀಶ್ವರಗೆ ॥ ೩

.... ೧೩೭ ....

ಜಯ ತೇ ಸದಾಶಿವ ಜಯಜಯ ಶಿವಾಧವ ||ಪ||

ಶ್ರೀಶ ಸಕಲಸಮಸ್ತಭುವನಪೋಷ ಶ್ರುತಿಹಯ ।
ಸರ್ವೇಶ ಗಗನಕೇಶ ಪಾರ್ವತೀಶ ಗತಭಯ ॥ ೧

ಕಾಲಕಾಲ ಪರಮ ಭಕ್ತಲೋಲ ಶ್ರೀಕರ ।
ಕರುಣಾಲವಾಲ ವ್ಯಾಲಮಾಲ ಬಾಲಶಶಿಧರ ॥ ೨

ಅನಘ ಘನಮಠೇಶ ಶರಣಜನಸುರದ್ರುಮಪಾ- ।
ವನ ಶರೀರ ಕಲುಷನಿಚಯ ಘನತಮಾರ್ಯಮಾ ॥ ೩

ಗಣಾಷ್ಟೋತ್ತರ ಭಾಮಿನಿ ಷಟ್ಪದಿ

(ರಾಗ- ತಮ್ಮಿಚ್ಚೆ)

(ಕೈಬರಹದ ಪ್ರತಿಯಲ್ಲಿಯ ಹೆಚ್ಚಿನ ಪದ್ಯಗಳು)

.... ೧೩೮ ....

ಲೀಲೆಯಲಿ ನೂತನ ಪುರಾತನ ।
ರಾಳಿನಾಮವ ಬಿಡದೆ ಉದಯದ ।
ಕಾಲದೊಳು ಪಠಿಸಿದರಿಗಿಹ ವಿಷ್ಟಾರ್ಥಸಿದ್ಧಿಗಳು ॥ಪ॥

ಬಸವರಾಜನ ಚನ್ನಬಸವನ ।
ಅಸಮಪ್ರಭುವನು ಸಿದ್ಧರಾಮನ ।
ಕುಶಲಮತಿ ಮಡಿವಳನ ಅಜಗಣ್ಣನಸುಸೊಡ್ಡಳನ ।
ಮುಸಡಿ ಚೌಡಯ್ಯನ ಗಜೇಶ್ವರ ।
ಮಸಣಿ ತಂದೆಯನಾದಿಮಯ್ಯನ ।
ದಸರಿದೇವನ ಹಡಪದಪ್ಪಣ್ಣಗಳ ಕಲಿಗಣನಾ ೧

ಹೊನ್ನಿ ತಂದೆಯನನಘ ಮಾದರ ।
ಚನ್ನನುರೆ ಚಾರಮನ ನಂಬಿಯ ।
ಕನ್ನಪಾಖ್ಯನ ಭೋಗಿದೇವನ ಕಾಚಿರಾಜನನ ।
ಧನ್ಯಶಂಕರ ದಾಸಿದೇವನ ।
ಮಾನ್ಯನಹ ಹೊಡೆಹುಲ್ಲ ಬಂಕನ ।
ಉನ್ನತದ ರೇಚಣ್ಣಸಿರಿಭಕ್ತನ ಹಲಾಯುಧನಾ ೨

ಬೊಮ್ಮಿದೇವನ ನೈದೆ ಕಿನ್ನರ ।
ಬೊಮ್ಮಿದೇವನ ಸಾರಕನ್ನದ ।
ಬೊಮ್ಮಿದೇವನ ಪರಮಸಗರದ ಬೊಮ್ಮಿಕಲಕೇತ ।
ಬೊಮ್ಮಿದೇವನ ವಿನುತಹಾದರ ।
ಬೊಮ್ಮಿದೇವನನಾದಿ ರಕ್ಕಸ ।
ಬೊಮ್ಮಿದ್ಯೇವನ ನಿತಬಾಹೂರ್ಬೊಮ್ಮಿ ತಂದೆಗಳಾ ೩

ಮಾರನಿಡುಗುಡಿ ಮಾರನರುವಿನ ।
ಮಾರನಾನಗಿಮಾರ ಮೋಳಿಗಿ ।
ಮಾರನಿಳೆಯೊಂಡ ಗುಡಿಮಾರನ ದೀರನಾ ಡಕ್ಕಿ ।
ಮಾರನಾಯ್ದಕ್ಕಿಯ ಸುಮಾರನ ।
ಮಾರಭೂಪನ ಶೂರನಾ ನಿಡು ।
ಮಾರಿದೇವನ ಸೋಮಸೀಮಾರರನ ಕಾಳಿಮನ ೪

ಯೋಮನಾರಾಧ್ಯರ ಪ್ರಮೈದುನ ।
ರಾಮನುರೆ ತುರಗಾಹಿ ರಾಮನ ।
ಕ್ಷೇಮಿಯಹ ತಳವಾರ ಕಾಯ್ಕದ ರಾಮನೇಕಾಂತ ।
ರಾಮನುದರದ ರಾಮನಸದೃಶ ।
ಕಾಮವಟ್ಟದ ಭೀಮನಾಕಲಿ ।
ಕಾಮರಾಯನ ಪ್ರಹರಿ ಸೋಮಣ್ಣಗಳನನವರತ ೫

ಪಂಡಿತಯ್ಯನನಧಿಕ ಶ್ರೀಪತಿ ।
ಪಂಡಿತನ ಶಿವಲೆಂಕ ಮಂಚನ ।
ಪಂಡಿತನ ತಿರು ಜ್ಞಾನ ಸಂಬಂಧಿಗಳ ಸದ್ವಿದ್ಯಾ ।
ಪಂಡಿತನು ಮಹದಾಸಿ ದೇವನ ।
ದಂಡಿತಘಕುಲ ಚೇದಿರಾಜನ ।
ಕೊಂಡ ಗೂಳಿಯ ಕೇಶಿರಾಜನ ಚಂಡಧೀಶ್ವರನಾ ೬

ಪಾಲಗುರ್ಜರ ನೋಹಿಲನ ಸತಿ ।
ಕೋಲ ಶಾಂತಯ್ಯಗಳ ನಾ ತಿರು ।
ನೀಲಕಂಠಯ್ಯಗಳ ನಾ ತಿರುಮೂಲ ದೇವರ ನಾ ।
ಚೋಳರಾಯನ ವಿಹಿತ ಮಾದರ ।
ದೂಳಿನಾ ಹಳ್ಳಯ್ಯಗಳ ಶಿರಿ ।
ಯಾಳನಾ ಗೊಲ್ಲಾಳನಾ ಬಲ್ಲಾಳನುತ್ತಮನಾ ೭

ಉರಗ ರಾಯಣ್ಣಗಳ ನೆರೆ ಮದು ।
ವರಸನಾ ಶಿವನಾಗಮಯ್ಯನ ।
ಮುರುಘರಾನ್ಯೆನಾರರಾ ಉರಿಲಿಂಗ ಪೆದ್ದಿಗಳ ।
ಚಿರುಪುಲಿಯನಣುಮೂರ್ತಿಯಾತಿರು ।
ಕುರುಪಿ ತೊಂಡನ ಸುರಿಯ ಚೌಡನ ।
ಮರುಳು ಶಂಕರದೇವನತಿ ಭಕ್ತನ ಹಲಾಯುಧನಾ ೮

ಮೊರನ ರೇಮಯ್ಯಗಳ ನೆಘ ।
ಶ್ವರದ ಕೇತಯ್ಯಗಳ ನಾ ಜೋ ।
ದರದ ಮಾಯಣ್ಣಗಳ ಕಕ್ಕಯ್ಯಗಳ ನೈಸರನಾ ।
ಕರುಣ ಶಾಂತಯ್ಯಗಳ ಮೆರೆಮಿಂ- ।
ಡರನ ನಾಮಿಕ ನಾಚಿದೇವನ ।
ಸರಳ ವೇಳ್ಕುತ್ತರ ಸುಗುರು ಭಕ್ತಯ್ಯಗಳ ಮತ್ತೆ ೯

ಅರಿವಳನನನಿಮಿಷನ ಗೊಗ್ಗಿ ।
ಶ್ವರನ ಪಾಂಡ್ಯರ ಬಾಚಿದೇವನ ।
ಪುರದ ನಾಗಣ್ಣಗಳ ಶ್ವಪಚಯ್ಯಗಳ ನನವರಿತಾ ।
ವರಕರಸ್ಥಲ ನಾಗಲಿಂಗನ ।
ತರಿಗೆಲಿಯ ಶಾಂತಯ್ಯಗಳ ಪಾ ।
ಲ್ಕುರಕಿ ಸೋಮೇಶ್ವರನ ತೋಂಟದ ಸಿದ್ಧಗುರುವರನ ೧೦

ಹರಗಣೆನುತಳಿದವಗೆ ಶಿವ ।
ಪುರವನಾದುದೆನಲ್ಕೆ ಬಸವೇ ।
ಶ್ವರ ಮುಖ್ಯಾಭವಗಣತತಿಯ ನಾಮವನು ನೂರೆಂಟು ।
ಪರಮಭಕ್ತಿಯೊಳಿಂತು ಪಠಿಪ ।
ರ್ಗರಿದೆ ಘನಮಠವಾಸನಾ ನಿಜ ।
ಕರುಣದಿಂದಿಷ್ಟಾರ್ಥಸಂಪದವಡೆದು ಬಾಳುವದು ೧೧

ಶ್ರೀಶರಣಸತಿಯರ ನೂರೆಂಟು ನಾಮಗಳು

(ಭಾಮಿನಿ ಷಟ್ಪದಿ)

.... ೧೩೯ ....

ಪ್ರೀತಿಯಲಿ ನೂತನ ಪುರಾತನ ।
ರಾತಿಶಯ ಶರಣೆಯರ ನಾಮಗ ।
ಳೋತು ಪಠಿಸುವವರ್ಗಮಹವಿಷ್ಟಾರ್ಥ ಸಿದ್ಧಿಗಳೂ ॥ಪ॥

ಶ್ರೀ ಲಲಿತೆ ನೀಲಾಂಬೆಗಳ ಸುವಿ ।
ಶಾಲಮತಿ ಗಂಗಾಂಬೆಗಳ ಶಿವ ।
ಲೋಲೆಯಹ ನಾಗಾಂಬೆಗಳ ಸೂರಾಂಬೆಗಳ ಮತ್ತೆ ।
ಶೀಲಯುತೆ ಗೌರಾಂಬೆಗಳ ಹತ ।
ಕಾಲೆಯಹ ಕೋಲಾಂಬೆಗಳ ಗುಣಜಾತೆ ವಿ- ।
ಮಲಾಂಬೆಗಳನಾ ವರ ದೇವಲಾಂಬೆಗಳ ೧

ಬಾಲೆ ವೀರಮ್ಮಗಳ ಪರಮ ಸು- ।
ಶೀಲೆ ಮಸಣಮ್ಮಗಳ ಭವ ನಿ- ।
ರ್ಮೂಲೆ ಲಕ್ಕಮ್ಮಗಳದೇ ಮಾಯಮ್ಮಗಳ ಮತ್ತೆ ।
ಕಾಲಜಿತೆಯರ್ರಮ್ಮಗಳ ಸದ ।
ಯಾಳೆ ರಾಮಮ್ಮಗಳ ನತಜನ ।
ಪಾಲೆ ಗುಡಿಸಿಲ ಪಾದ ನಾಗಾಯಮ್ಮಗಳ ಮತ್ತೆ ೨

ಕಾರಿ ಕಾಲಮ್ಮಗಳ ಕರುಣಾ ।
ಕಾರೆ ಗಾರಮ್ಮಗಳ ಜಗದುಪ ।
ಕಾರಿ ಕಾಳೇಯದ ಪುರದ ವೀರಮ್ಮಗಳ ಮತ್ತೆ ।
ಸಾರಮತಿ ಕಾಮಮ್ಮಗಳ ಸುವಿ ।
ಚಾರೆ ಮಹದೇವಮ್ಮಗಳ ಪಾ- ।
ಪಾರಿಯಕ್ಕಮ್ಮಗಳ ಕಲ್ಯಾಣಮ್ಮಗಳ ಮತ್ತೆ । ೩

ಅವ್ವೆಯುರುತರದಾ ಕದುರ ರೆ- ।
ಮ್ಮವ್ವೆಯಾ ಕೊಟ್ಟಣದವರ ಸೋ- ।
ಮವ್ವೆಗಳ ರೆಬ್ಬೆವ್ವೆಗಳ ರೇಕವ್ವೆಗಳ ಮತ್ತೆ ॥
ಅವ್ವೆ ಸೋಹಳೆಯಾಪುರದ ಸೋ- ।
ಮವ್ವೆಗಳ ನಿಂಗಿಳಿಯ ವೈಜ ।
ಕ್ಕವ್ವೆಗಳ ನಮ್ಮವ್ವೆಗಳ ಮಾಳವ್ವೆಗಳ ಮತ್ತೆ ೪

ಅವ್ವೆ ಶಿವದಾಸವ್ವೆಗಳ ಲ- ।
ಕ್ಕವ್ವೆಗಳ ಕಮಲವ್ವೆಗಳ ಕಾ- ।
ಳವ್ವೆಗಳ ಗೊಗ್ಗವ್ವೆಗಳ ಗುಡ್ಡವ್ವೆಗಳ ಮತ್ತೆ ॥
ಅವ್ವೆ ದುಗ್ಗಳೆಯವ್ವೆಗಳ ಪಿ- ।
ಟ್ಟವ್ವೆಗಳ ಸಂಕವ್ವೆಗಳ ಸ- ।
ಪ್ಪೆವ್ವೆಗಳ ಜೊಮ್ಮವ್ವೆಗಳ ಮುದ್ದವ್ವೆಗಳ ಮತ್ತೆ ೫

ಅವ್ವೆ ಪರತರ ನೀಲನೂರ್ ನಿಂ- ।
ಬವ್ವೆಗಳ ನಾ ವೀರ ಸಂಗಾ ।
ಯವ್ವೆಗಳ ನಾ ವೀರ ತಿಲಕವ್ವೆಗಳನವರತ ॥
ಅವ್ವೆ ಮೋಚಲೆಯವ್ವೆ ಚಂಗಳೆ ।
ಯವ್ವೆಗಳ ಕನ್ನಡಿಯ ಕರ ರೇ- ।
ಮವ್ವೆಗಳ ನಾ ವೀರ ಜೋಳಾಯವ್ವೆಗಳ ಮತ್ತೆ ೬

ಅಕ್ಕ ಮುಕ್ತಾಯಕ್ಕಗಳ ಸ- ।
ತ್ಯಕ್ಕಗಳ ಮಾಯಕ್ಕಗಳ ನೆ- ।
ಲ್ಲಕ್ಕಗಳ ಮಲ್ಲಕ್ಕಗಳ ಚನ್ನಕ್ಕಗಳ ಮತ್ತೆ ॥
ಅಕ್ಕನುಡುತಡಿ ಯಾ ಮಾಹಾದೇ ।
ವಕ್ಕ ನೋಬಳೆಯಕ್ಕ ದಾಸಿ ನಿಂ- ।
ಬೆಕ್ಕಗಳ ನುರುತರದ ಮಂಗಾಯಕ್ಕರಸಿಯರನು ೭

ದೇವಿ ಜೊಂತಲ ದೇವಿಯಲ್ಲಮ ।
ದೇವಿ ವಿಮಲಾದೇವಿ ಸುಗ್ಗಲ ।
ದೇವಿ ಚಾಕಲದೇವಿ ಕೇತಲದೇವಿಗಳ ಮತ್ತೆ ॥
ದೇವಿ ಮಾಚಲದೇವಿ ಬಾಚಲ ।
ದೇವಿ ಕಾಚಲದೇವಿಯೈಚಲ ।
ದೇವಿಯಳ ನಾ ಕೇಳಿಕೆಯ ಮಹದೇವಿಗಳ ಮತ್ತೆ ೮

ದೇವಿ ಗಂಗಾದೇವಿಯಾ ಮಾ- ।
ಯ್ದೇವಿ ಯಾ ಶಿವದೇವಿ ಸಿದ್ಧಾ ।
ದೇವಿಯಾ ಸಾಯ್ದೇವಿಯಾ ಶಚಿದೇವಿಗಳ ಮತ್ತೆ ॥
ದೇವಿಯಾ ಮಲಿದೇವಿಯಣ್ಣಲ ।
ದೇವಿ ಲಲನಾದೇವಿ ಚಿಕ್ಕಾ ।
ದೇವಿ ರುದ್ರಸುವೀಣೆ ಗಂಗಾದೇವಿಗಳ ಮತ್ತೆ ೯

ದೇವಿ ಯಸ್ಯಜ್ಞಾನ ಚಂದ್ರಿನಿ ।
ದೇವಿ ಜ್ಞಾನಾನಂದ ದೇವಿಯು ।
ದೇವಿ ರತ್ನಾವತಿಯ ಪರಮಸುದೇವಿಗಳ ಮತ್ತೆ ॥
ದೇವಿ ಸೋಮ ಪ್ರಭಾಂಕ ದೇವಿಯ ।
ದೇವಿಯಾ ಶೃಂಗಾರ ದೇವಿಯ ।
ದೇವಿಯಾ ಶಾರ್ವಾಣಿಯಾ ಶಿವಜ್ಞಾನ ದೇವಿಗಳಾ ೧೦

ನಾಚಿ ಪಾವನ ನಾಚಿಯಳ ನುರೆ ।
ನಾಚಿ ಚೊಲ್ಲೆಡ ನಾಚಿಯಳ ಸತಿ ।
ನಾಚಿ ಪರ್ವತ ನಾಚಿಯಳನಾ ಪರವೆನಾಚಿಗಳಾ ॥
ನಾಚಿ ಶಿವಪ್ರಿಯ ನಾಚಿಯಳನಾ ।
ನಾಚಿ ತಿಲವಲಿ ನಾಚಿಯಳ ನೆರೆ ।
ನಾಚಿ ಶಂಕಿಲನಾಚಿ ಸೌಂದರನಾಚಿಯಳ ಮತ್ತೆ ೧೧

ದಾರುಕೆಯ ವರದಾಸಿಯನ್ಮನ ।
ಸಾರಚರಿತೆ ಸುಕರ್ನಿಕೆಯ ಸುವಿ ।
ಚಾರಿಯಾ ಪದ್ಮಾವತಿಯನಾ ಕನಕಮಾಲಿನಿಯಾ ॥
ಮಾರಜಿತ ಕಾಮಲತೆಯಳ ಸುಖ ।
ಸಾರೆ ದೇವರ ದಾಸಿಯಳ ಮಹ ।
ಧೀರೆ ಸೋಮರಸಿಯಳ ನಿರುಪಮ ಮಂಗಳಾಂಗಿಯಳಾ ೧೨

ಹರನ ಸತಿನುತಿ ಕೋಟಿಯಿಂ ಶಿವ ।
ಶರಣ ಸತಿಯರ ನುತಿ ಮಿಗಿಲು ಮಾ- ।
ಹರನ ಸತಿ ಭೃಂಗೀಶ ಮುಖ ಪ್ರಮಥರೊಳ್ ಪೂಜ್ಯಳೂ ॥
ಶರಣ ಸತಿಯರು ಪ್ರಮಥರೋಳ್ ಪೂ- ।
ಜ್ಯರುಮದಾಗಿರೆ ಶ್ರೀ ಘನಮತೇ ।
ಶ್ವರನ ನಿಜಭಕ್ತೆಯರ ಪೊಗಳುತ ಪಡಿವೆ ನಿಜಸುಖವಾ ೧೩

.... ೧೪೦ ....

ಶ್ರೀ ಮಹಾದೇವ ಪಾಹಿಮಾಂ ಕರುಣಾಕರ ಭವ
ಶ್ರೀ ಮಹಾದೇವ ಭಕ್ತಪ್ರೇಮ ಪರಾತ್ಪರಧೃತೆಂದು ।
ನೇಮಸುರಪ ಹರಿಪಿತಾ ಮಹಾ ಮರಾಳಿನತ ಪದಾಬ್ಜ ॥ಪ॥

ಮೋಕ್ಷದಾಯಕ ವಿರಳಗಣಪಕ್ಷ ಪಾವನಾಂಗ ಶ್ರೀ ಮ-
ಹೋಕ್ಷವಾಹ ದುರ್ಮದಾಂಧ ದಕ್ಷಮುಖ ವಿಪಕ್ಷಧೀರ ೧

ತಾರಕಾರಿ ಜನಕಸೂರ ತಾರಕೇಶ್ವರಾನಲಾಕ್ಷ ।
ತಾರಕಾದ್ರಿನಿಲಯ ವಿಹಿತ ತಾರಕಾಕಾರ ಪರಮ ೨

ಶುದ್ಧ ಘನಮತೇಶ್ವರಾಘ ವಿರುದ್ಧ ತ್ರಿಗುಣರಹಿತ ಸುಪ್ರ ।
ಸಿದ್ಧ ಭುವನಪೋಷ ಸ್ವರ್ಣರುದ್ರಧನು ಸುಶೋಭಿತಕರ ೩

.... ೧೪೧ ....

ಶಿವ ಭೋ ಮಾಮವ ಸದಾ । ಭವಹರ ಶಾಂಕರಿವರ ॥ಪ॥

ಪಂಕಜನಾಭ ನೇತ್ರಾಂಕಿತ ಪಾದಶ್ರೀ । ಪಂಕಜಾದ್ವಯಾ ೧

ಖಂಡಶಶಾಂಕ ಜೋಪಾಂಡಜ ಭೂಷಬ್ರಂ । ಹ್ಮಾಂಡನಾಯಕ ೨

ಘನಮಠವಾಸ । ದೌರ್ಗುಣ ಗಣನಾಶ ಪಾ । ವನಚರಿತ್ರ ೩

.... ೧೪೨ ....

ಗೌರೀವರ ಪುಣ್ಯಮಯ ಶರೀರ ಭೊ । ಸುಖಸಾರ ।
ಮಾರಪಿತದೃಗಾಂಕಿತ ಪದಸಾರ ಸಾಂಘದೂರ ॥ಪ॥

ಮಾರುತಾಪ್ತ ಸೂರ ನೀರ । ಜಾರಿ ನಯನಧೀರ ।
ಮೇರುಚಾಪಭೂರ ರಥಾಂಥ । ಕಾರ ಚಿದಾಗಾರ ೧

ಈಶ ಶೇಷಭೂಷ ವ್ಯೋಮಕೇಶ ಭವವಿನಾಶ ।
ಕ್ಲೇಶ ಕೋಶ ವಿಗತ ಪಂಚಪಾಶ ಜಿತಮಹೇಶ ೨

ಸೋಮ ಸೋಮ ವಿಧೃತಸಾಮಜಾಮರಾರಿ ಸೀಕ್ಷ್ಣ ।
ಸ್ವಾಮಿ ಶ್ರೀಘನಮಠ ನಿವಾಸ ಕ್ಷೇಮ ಭಕ್ತಾಪೇಕ್ಷ್ಣ ೩

.... ೧೪೩ ....

ಶಿವನ ಭಜಿಸಿ ನೀ ಬಾಳೊ । ಪರಶಿವನ ಭಜಿಸಿ ನೀ ಬಾಳೊ ॥ಪ॥

ಕ್ಷಣಿಕವಾದ ತನು ಕರಣೇಂದ್ರಿಯ ಸುಖ ।
ಕನುಕರಿಸದೆ ಸದ್ಗುಣಿಯಾಗುತೆ ನೀ ಬಾಳೊ ೧

ಪರಮ ಶರಣರ ಚರಣಸೇವೆಯನು ।
ಮರಿಯದೆ ಮಾಡುತಲುರುಭಾವದಿ ನೀ ಬಾಳೊ ೨

ಅನಘ ಘನಮಠೇಶನ ಮನದೊಳ್ಳಿನ ।
ನೆನದು ಜಗದಿ ನೈಪುಣನೆನಿಸುತೆ ನೀ ಬಾಳೊ ೩

.... ೧೪೪ ....

ಜಯತೆ ಸದಾಶಿವ । ಜಯ ಜಯ ಶಿವಾಧವ ||ಪ||

ಶ್ರೀಶ ಸಖ ಸಮಸ್ತ ಭುವನ । ಪೋಷ ಶೃತಿಹಯ ।
ಸರ್ವೇಶ ಗಗನಕೇಶ ಗಿರಿನಿವಾಸ ಗತಭಯ ೧

ಕಾಲಕಾಲ ಪರಮಭಕ್ತಲೋಲ ಶ್ರೀಕರ ।
ಕರುಣಾಲವಾಲ ವ್ಯಾಲಮೂಲ ಬಾಲಶಶಿಧರಾ ೨

ಅನಘ ಘನಮತೇಶ ಶರಣ ಜನ ಸುರದ್ರುಮಾ ಪಾ- ।
ವನ ಶರೀರ ನಮಿತ ಜನವೃಜನತ ಮಾರ್ಯಮಾ ೩

.... ೧೪೫ ....

ನಂಬಬಾರದು ಇವರ ನಂಬಬಾರದು ।
ಶಂಭು ಭಕ್ತಿ ಬಾಹ್ಯರಾದ ಡಂಬಕರನು ಶರಣರೆಂದು ||ಪ||

ಅನ್ಯದೈವವನ್ಯಸತಿಯನನ್ಯಧನವ ತೊರದೆವೆಂದು ।
ಧನ್ಯ ಚರಕೆ ಅಡ್ಡಬಿದ್ದು ಮುನ್ನಿನಂತೆ ಚರಿಪಧಮರ ೧

ಮಾತಿ ಮಾತಿಗಾ ಪುರಾತನಾತಿಶಯದ ವಚನವೆನುತ ।
ನೀತಿಯೋಳ್ಕಿರಾತರಾದ ಪಾತಕರನು ಶರಣರೆಂದು ೨

ಆಶೆ ರೋಷದ್ವೇಷ ಮನದೊಳೀಸು ತುಂಬಿ ಹೊರಗೆ ಕಪಟ ।
ವೇಷವಾಂತು ಶರಧಿ ಘನಮತೇಶನಗಲಿರುವ ಖಲರ ೩

.... ೧೪೬ ....

ಲೋಭಿಗಿಂದಿತರವಾಗಿ । ದುರ್ಗುಣಗಳೀ ಭುವಿಯೊಳುಂಟೆ
ನೋಡೆ । ಮತ್ತೆ ||ಪ||
ಗುರುಲಿಂಗ ಚರವರ್ಯರೂ । ಸದ್ಭಕ್ತರುರೆ ಮಹೇಶ್ವರರೆತಿಗಳೂ ।
ಬಂದು ಭರದಿ ಭಿಕ್ಷಾಯನಲ್ಕೆ । ವೈರಿಗಳ ಪರಿಗಂಡುಪ ರಿವಜಶಿವಾ
ಮತ್ತೆ || ೧

ಮನಿಯೊಳಗೆ ಹೇಣನು ಪೋಗೆ ಅಲ್ಲಿರುವ । ಜನರ ಮುಂದಳಲ್ವ
ಬಳಲ್ವನೆದಕೆ ॥
ಹಣ ವೆಚ್ಚವಾದುದಕ್ಕೆ । ಅಳುವನಾ ಹೆಣಕಳನು ಬಿಕ್ಕಿಬಿಕ್ಕಿ ಮತ್ತೆ ॥ ೨

ಬೇಡಬಂದವರ್ಗಳೊಡನೆ । ಒಂದು ಮಾತಾಡಗರ ಸೋಂಕಿದನೊಲೂ ।
ಜನರೂ ಹಾಡಿ ಹರಸಲು ಹೆಣನದಲ್ । ತಾನು ಮುಖಬಾಡಿತ್ತಲತ್ತ
ನೋಡಾಮತ್ತೆ ॥ ೩

ಹೆಣನಾಶ್ರಯಿಸಿದ್ದವರಿಗೆ । ಅಷ್ಟಷ್ಟು ಹಣವು ದೊರಿವದು ಜಗದೊಳು
ನೋಡೆ ।
ಹೆಣಗಿಂದ ಕಷ್ಟವಾದ । ಈ ಜೀವದಾ ಹೆಣನಾಶ್ರಯಿಸಿ ನಿಷ್ಫಲಾ ॥ ೪

ಶುದ್ಧ ಲುಬ್ಧನ ಕೊಲ್ಲಲು । ಜಗದೊಳಗೆ ಮದ್ದೊಂದಿಲ್ಲ ನೋಡೆ ।
ಅವನ ಬದಿಲಿದ್ದ ದ್ರವ್ಯವ ಕೇಳಲು । ಸಾಯ್ವ ಪ್ರಸಿದ್ಧ ಘನಮಠ
ವಾಸನನಗಲಿ ॥ ೫

.... ೧೪೭ ....

ಪಶುಪಸುಷಮುಗಾತ್ರ ॥ಪ॥

ಧನ್ಯ ನಿಷ್ಪ್ರಪಂಚ ಕಾಯಶೂನ್ಯ ವಿಮಲಚರಿತ ಸರ್ವ ।
ಮಾನ್ಯ ಗುರುವರೇಣ್ಯ ಪರಮಪುಣ್ಯ ಸುಚೇತನ್ಯವರದ ೧

ಚಾರು ಜಂಗಮ ಪ್ರಸಾದಪೂರ ಹೃದಯ ಶಿವಸ್ವಯಾವ ।
ತಾರ ಧೀರ ತ್ರಿಜಗದೋಪಕಾರ ಪಾರವಾರ ಮಹಿಮ ೨

ಕ್ಲೇಶರಹಿತ ಭಕ್ತಹೃದಯವಾಸ ಪರತರಾತ್ಮ ಮುಕ್ತಿ ।
ಕೋಶ ಚಿತ್ಪ್ರಕಾಶ ಘನಮಠೇಶ ದೋಷನಾಶ ಈಶ ॥ ಶ್ರೀ ॥ ೩

ಧೂಪದಗಟ್ಟಿ ಕ್ರಮದಾರತಿ ಪದ

.... ೧೮೮ ....

ಬೆಳಗಿರಿ ಧೂಪದಗಟ್ಟಿ ಜೋತಿಯೊಳು ಕೈಮುಟ್ಟಿ ।
ಬೆಳಗಿರಿ ಧೂಪದಗಟ್ಟಿ । ಬಲುಗಂಧ ದ್ರವ್ಯಗಳೊಲಿದುಗಢಣಿಸಿ ನಿರ್ಮಲ
ಭಕ್ತರೀಶಗೆ ॥ಪ॥

ಗೌಲಪತ್ರಾಜಕಚೂರ । ಸೀಸಜಾಲದ ಧೂಪ ಕರ್ಪುರ ॥
ಬಾಳದ ಬೇರ್ಮುಡಿ ವಾಳನಾಗರವೋತಿ । ಬೋಳ ದಾಲ್ಚಿನ್ನಿ ಘೃತ
ವಾಲದಧಿಯವೆರಿಸಿ ॥ ೧

ಕರಿಯಗರರಗುಲೋಬಾನ । ಮಧುಶಿರಿಗಂಧ ಬೇರೋಜ ಮೇಣ ।
ಪರಿಮಳದರಳ್ಗಳ್ಗುಗ್ಗಳ ಜಟಾಮಾಂಸಿ ಕ । ಸ್ತುರಿವಿಡಿ ಚಂದನದ
ದೇವದಾರಡಿ ಬೆಲ್ಲದಿ ॥ ೨

ಪವಳದೊಡಕು ಮುತ್ತಿನೊಡಕ । ಪಚ್ಚೆ ದವನ ಕಲ್ಲು ಕೇಸರಿ ನಖ ॥
ಸವನಾಗಿ ತೂಗಿ ಸಿಲಾರಸದಿಂ ಕುಟ್ಟುತವೆ ಘನಮತವಾಸಗವಿರಳ
ಭಾವದಿ ॥ ೩

ಮುಗಿದುದು

RI JAGADGURU VISHWARADHYA
NANA SIMHASAN JNANAMANDIR
LIBRARY.
ngamwadi Math, VARANASI,
Acc No. ~~1408~~ 863

ಗದಗ ಶಿವಾನಂದ ಮುದ್ರಣ.